
ಕಲ್ಯಾಣ ಕಿರಣ

ಜುಲೈ-2012

ಬೆಲೆ-20/-



ವಿಶ್ವಗುರು ಬಸವಣ್ಣನವರು

1134-1196



ಕೊಡಗು ಜಿಲ್ಲೆಯ ಕುಶಾಲ ನಗರದಲ್ಲಿ ಪೂಜ್ಯಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಚನ ಮುಕ್ತಾಯ ಸಮಾರಂಭದಂದು ಉಭಯ ಮಾತಾಜಿಯವರಿಗೆ ಭವ್ಯ ಮೆರವಣಿಗೆ



ಕುಶಾಲ ನಗರದಲ್ಲಿ ಪ್ರವಚನ ಮುಕ್ತಾಯ ಸಮಾರಂಭ ಅರಮೇರಿ ಮಠದ
ಪೂಜ್ಯ ನಿ.ಪ್ರಶಾಂತಮಲ್ಲಿಕಾರ್ಜುನ ಸ್ವಾಮಿಗಳ ಸನ್ನಿಧಿ
ಜಿಲ್ಲಾ ಪರಿಷತ್ ಅಧ್ಯಕ್ಷ ರವಿ ಕುಶಾಲಪ್ಪ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.



ಬಸವ ಧರ್ಮ ಪೀಠದ ದಾನಿಗಳಿಂದ ಬನಹಟ್ಟಿಯ ಶರಣೆ. ಮಂಗಲಾ ಶರಣ ಮಲ್ಲಿಕಾರ್ಜುನ ಬಾಣಕಾರ ಮತ್ತು ಶರಣೆ ಪೂರ್ಣಿಮಾ. ಶರಣ ಚನ್ನವೀರ ಬಾಣಕಾರ ಇವರ ವಿವಾಹದ ಬೆಳ್ಳಿಹಬ್ಬವನ್ನು ದಿ.10-6-2012ರಂದು ಆಚರಿಸಲಾಯಿತು. ಇವರಿಗೆ ಶುಭಹಾರೈಕೆಗಳು

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ಸಂಪುಟ-42	ಬಸವ ಶಕೆ -879	ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-07	ಜುಲೈ- 2012	ವಾರ್ಷಿಕ ಚಂದಾ 200 ರೂ.

ಗುರು ಬಸವಣ್ಣನವರು ಮಾಡಿದ ತಪ್ಪು !

ತಲೆ ಹೊತ್ತು ಹುಟ್ಟಿದ್ದು ಯಾರ ತಪ್ಪು ಬಸವಣ್ಣಾ
ನಮ್ಮ ತಪ್ಪಲ್ಲ, ಅದು ನಿನ್ನದೇ ತಪ್ಪು !
ತಲೆ ಇಲ್ಲದವರೇ ಬಹಳಷ್ಟು ಮಂದಿ ಇರುವ ದೇಶದಲ್ಲಿ
ತಲೆಯ ತುಂಬ ಹಾವು-ಚೇಳುಗಳ ತುಂಬಿ ಕೊಂಡವರು
ಬೀಡು ಬಿಟ್ಟ ಈ ದೇಶದಲ್ಲಿ ಹುಟ್ಟಲು ನಿನಗೆ ಹೇಳಿದವರಾರು ?
ಕಣ್ಣಿಲ್ಲದವರ ರಾಜ್ಯದಲ್ಲಿ ಕಣ್ಣಿದ್ದವನು ಅಪರಾಧಿ
ತಲೆ ಇಲ್ಲದವರ ದೇಶದಲ್ಲಿ ತಲೆ ಇದ್ದವನು ಧರ್ಮದ್ರೋಹಿ
ಶತಶತಮಾನಗಳಿಂದ ಗಟ್ಟಿಗೊಳಿಸಿ ಕಟ್ಟಿದ್ದ
ಜಾತೀಯತೆಯ ಕೋಟೆಗೆ ಲಗ್ಗೆ ಹಾಕಿದ್ದು ನಿನ್ನ ಅಪರಾಧವಲ್ಲವೆ ?
ಬೆಂಕಿದೇವನ ಬಾಯಲ್ಲಿ ತುಪ್ಪ ಪೀತಾಂಬರಗಳ ತೂರುತ್ತಿದ್ದುದ ಬಿಡಿಸಿ
ಮನುಜದೇವನ ಬಾಯಿಗೆ ಹಾಕ ಹೇಳಿದ್ದು ಸಾಮಾನ್ಯ ಪಾತಕವೆ ?
ಕಂಡ ಕಂಡಲ್ಲೊಂದು ಕಲ್ಲು ಕಟೆದಿಟ್ಟು ಹಾಲು ಅಭಿಷೇಕವೆರೆದು
ನೂರಾರು ದೇವರುಗಳ ಹೊಡೆದಾಡಲು ಬಿಟ್ಟಾಗ
ಏಕದೇವೋಪಾಸನೆ ಸಾರಿ ದೇವನೊಬ್ಬನ ಪೂಜಿಸು ಎಂದುದು ಅಪರಾಧವಲ್ಲವೆ ?
ನಾಲ್ಕು ಗೋಡೆಗಳ ಮಧ್ಯದಲಿ ಮಂತ್ರವಂ ಆಲಿಸುತ್ತಿದ್ದ ದೇವನ
ಕಾರಾಗೃಹದಿಂ ಬಿಡಿಸಿ ಮನುಜ ಹೃದಯದಲಿ ನೆಲೆಗೊಳಿಸಿ
ದೇಹವ ದೇವಾಲಯ ಮಾಡಿ,
ಪೂಜಾರಿ ವೃತ್ತಿಗೆ ಮಣ್ಣುಕೊಟ್ಟಿದ್ದು ಸಾಮಾನ್ಯ ಅಪರಾಧವೆ?
ನೆರಳು ಬೀಳುತ್ತಿದ್ದಂತೆಯೇ ಮಾರು ದೂರ ಹಾರದೆಯೆ
ದೀನದಲಿತರನೆಲ್ಲ ಅಪ್ಪಾ, ಅಣ್ಣಾ ಎಂದಪ್ಪಿದ್ದು ಶಾಸ್ತ್ರದ್ರೋಹವಲ್ಲವೆ ?
ಹೆತ್ತ ಒಡಲಿನ ಬೇಗೆ ಕೊಂಚವೂ ಅರಿಯದಂತಿರಲು
ಸ್ತ್ರೀಕುಲದ ಸಂಕೋಲೆ ಕಳಚಿ ಶಿವಪಥಕ್ಕೆ ತರಲು ನಿನಗೆ ಹೇಳಿದವರಾರು ?
ಜಾತಿ ಬೇರನು ಕಿತ್ತು ನೀತಿ ಸೂತ್ರವ ಬಿತ್ತಿ
ಅರಿವುಳ್ಳ ಗುರುತನದ ತಿಳಿವನ್ನು ಸಾರಿದ್ದು ಸಾಮಾನ್ಯ ತಪ್ಪೆ ?
ಎಂಟು ಶತಮಾನಗಳ ಮೊದಲಿಗೇ ಅವಸರದಿ ಹುಟ್ಟಿ
ಧರ್ಮ ವಾಗ್ದೇವಿಯನು ಜನಮನದ ಬಾಗಿಲಿಗೆ ತಂದುದು ಸಣ್ಣ ಅಪರಾಧವೆ ?
ನಿನ್ನ ಲಿಂಗದೇವ ಸಾಕ್ಷಿ, ನಿನ್ನ ಹೃದಯದ ಅಳಲು ಇಲ್ಲಿ ಯಾರಿಗೆ ಬೇಕು ?
ಇಲ್ಲಿ ಪುರೋಹಿತ ನುಡಿದುದೇ ಸತ್ಯ ಘೋಷ
ಅವನ ಪೋಷಣೆಯಷ್ಟೆ ಧರ್ಮ ಸಂರಕ್ಷಣೆ !!

– ಮಾತಾಜಿ

817ನೆಯ ಬಸವ ಪಂಚಮಿಯ ಶುಭಾಶಯಗಳು

ಕಿರಣ ಗನ್ನಡಿ

ಕಲ್ಯಾಣ ಕಿರಣದ ಓದುಗರಿಗೆ ಸೂಚನೆ

1970ರಲ್ಲಿ ಕಲ್ಯಾಣ ಕಿರಣ ಆರಂಭವಾಯಿತು. ಅಂದಿನಿಂದ ಇಂದಿನವರೆಗೆ ಆಜೀವ ಸದಸ್ಯರಾದವರಿಗೆ ಪತ್ರಿಕೆಯನ್ನು ಕಳಿಸುತ್ತಾ ಬರಲಾಯಿತು. ಸಂಸ್ಥೆಗೆ ವಿಪರೀತ ನಷ್ಟದ ಹೊರೆ ಬೀಳತೊಡಗಿತು. ಆದ್ದರಿಂದ 3-4 ತಿಂಗಳು ಕಾಲ ನವೀಕರಿಸಲು ಮುನ್ಸೂಚನೆ ಕೊಟ್ಟು 2012ರ ಜೂನ್‌ನಿಂದ ಕಲ್ಯಾಣ ಕಿರಣ ಕಳಿಸುವುದನ್ನು ನಿಲ್ಲಿಸಲಾಗಿದೆ. ಆಸಕ್ತರು ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000 ರೂ. ತುಂಬಿ ತಮ್ಮ ಸದಸ್ಯತ್ವವನ್ನು ನವೀಕರಿಸಲು ಕೋರಲಾಗಿದೆ.

ಪೂಜ್ಯ ಶ್ರೀ ಸದ್ಗುರು ಮಾತೆ ಸತ್ಯಾದೇವಿಯವರ ಪ್ರವಚನ ಮಂಗಲ

ರಾಮನಗರ ಜಿಲ್ಲೆ, ರಾಮನಗರ ತಾಲ್ಲೋಕಿನ ಅಂಜನಾಪುರ ಗ್ರಾಮದಲ್ಲಿ ಪೂಜ್ಯ ಶ್ರೀ ಸದ್ಗುರು ಮಾತೆ ಸತ್ಯಾದೇವಿಯವರ ಪ್ರವಚನವು ದಿ.13–6–2012ರಂದು ಆರಂಭವಾಗಿ 21 ದಿವಸಗಳ ಕಾಲ ನಡೆದು ದಿ.3–7–2012ರಂದು ಮುಕ್ತಾಯಗೊಂಡಿತು. ಮಂಗಲ ಸಮಾರಂಭದಲ್ಲಿ ಭಾಗವಹಿಸಿದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರನ್ನು, ಪ್ರವಚನ ಮಾಡಿದ ಮಾತೆ ಸತ್ಯಾದೇವಿಯವರನ್ನು ಮೆರವಣಿಗೆಯಲ್ಲಿ ವೇದಿಕೆಗೆ ಕರೆತರಲಾಯಿತು.

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್
ಬೆಂಗಳೂರು–560010, ದೂರವಾಣಿ : 080–23131476 / 9945806297

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297/ 9738028585/ 8892912123
Email :- kalyanakirana1970@gmail.com

ಸಂಪಾದಕೀಯ :

ಡಾ॥ ಚಿ.ಮೂ. ನುಡಿದ ಅರ್ಧ ಸತ್ಯ

ದಿ. 7 ಮತ್ತು 8ರಂದು ಬೇರೆ ಬೇರೆ ಪತ್ರಿಕೆಗಳಲ್ಲಿ ಡಾ॥ ಚಿದಾನಂದ ಮೂರ್ತಿಯವರ ಪತ್ರಿಕಾ ಗೋಷ್ಠಿಯ ಹೇಳಿಕೆಗಳು ಪ್ರಕಟವಾದವು. 'ರಾಜಕೀಯ ಚಿಂತಕರು' ಎಂಬ ಒಂದು ಕೃತಿಯಲ್ಲಿ ಪ್ರಕಟವಾದ ಗುರು ಬಸವಣ್ಣನವರನ್ನು ಕುರಿತ ಎರಡು ವಿಷಯಗಳಿಗೆ ಸಂಬಂಧಿಸಿ ಪತ್ರಿಕಾ ಹೇಳಿಕೆ ನೀಡಿದ್ದಾರೆ.

1. ಬಸವಣ್ಣನವರು ವೀರಶೈವ ಧರ್ಮ ಸ್ಥಾಪಕರಲ್ಲ
2. ಬಸವಣ್ಣನವರ ಜನನ 1135 ಲಿಂಗೈಕ್ಯ 1167 ಬಸವಣ್ಣನವರ ಜನನದ ವರ್ಷ ಇನ್ನೂ ಖಚಿತಗೊಂಡಿಲ್ಲ.

"ಗುರು ಬಸವಣ್ಣ ವೀರಶೈವ ಮತ ಸ್ಥಾಪಕರಲ್ಲ" ಎಂಬ ಪರಮ ಸತ್ಯವನ್ನು ಹೇಳಿದ್ದಕ್ಕಾಗಿ ಡಾ॥ ಚಿದಾನಂದ ಮೂರ್ತಿಯವರನ್ನು ಅಭಿನಂದಿಸೋಣ. ವೀರಶೈವವು ಬಸವ ಪೂರ್ವದ ಒಂದು ಶೈವ ಪಂಥ. ಅದು ಪುರಾತನ. ಆದ್ದರಿಂದ ಅದರ ಸ್ಥಾಪಕರು ಗುರು ಬಸವಣ್ಣನವರು ಎಂಬುದರಲ್ಲಿ ಅರ್ಥವಿಲ್ಲ ಮತ್ತು ವೀರಶೈವ ಮತ ಸ್ಥಾಪಕರು ಯಾರೆಂಬುದೂ ತಿಳಿದಿಲ್ಲ. ಆದರೆ ಲಿಂಗಾಯತ ಧರ್ಮದ ಸ್ಥಾಪಕರು ಗುರು ಬಸವಣ್ಣನವರು ಎಂಬುದು ಸ್ಪಷ್ಟವಾಗಿರುವ ಸತ್ಯ. ವೀರಶೈವ ಮತ್ತು ಲಿಂಗಾಯತ ಬೇರೆ ಬೇರೆ. ವೀರಶೈವವು ಶೈವದ ಒಂದು ಪಂಥ, ಲಿಂಗಾಯತವು ಸ್ವತಂತ್ರವಾದ ಒಂದು ಧರ್ಮ. ವೀರಶೈವವು ಆಗಮೋಕ್ತ. ಲಿಂಗಾಯತವು ವಚನೋಕ್ತ , ಲಿಂಗಾಯತವು ಪ್ರಗತಿಪರ ಚಿಂತನೆಯ ವೈಚಾರಿಕ (rational) ಧರ್ಮ. ಡಾ॥ ಚಿ.ಮೂ ಎರಡನ್ನೂ ಸಮೀಕರಿಸಿ ಗೊಂದಲ ಹುಟ್ಟಿಸುವ ಹವ್ಯಾಸವನ್ನು ಇನ್ನಾದರೂ ಬಿಡಲಿ.

ಬಸವಾದಿ ಪ್ರಮಥರ ಬಗ್ಗೆ ಡಾ॥ ಚಿ.ಮೂ. ಅವರಿಗೆ ಅಭಿಮಾನವೂ ಇಲ್ಲ. ಗೌರವವೂ ಇಲ್ಲ. ಶರಣರ ತೇಜೋವಧೆ ಮಾಡಬೇಕು ಎಂಬ* ಕುತಂತ್ರ ಬುದ್ಧಿ ಇದೆ. ಅಂಥ ಕೆಟ್ಟ ಲೇಖನಗಳನ್ನು ಆಗಾಗ ಬರೆಯುತ್ತಿರುತ್ತಾರೆ.

ಗುರು ಬಸವಣ್ಣನವರ ಜನನದ ಬಗ್ಗೆ ನಿರ್ಧಾರವಾಗಿಲ್ಲ ಎಂದು ಚಿ.ಮೂ. ಅಭಿಪ್ರಾಯ ಪಟ್ಟಿದ್ದಾರೆ. ಸಂಶೋಧಕರೆಂದು ಪ್ರಶಸ್ತಿಗಳನ್ನು ಬಾಚಿಕೊಳ್ಳುತ್ತಿರುವ ಅವರು ಈ ಮಾತು ಹೇಳಲು ನಾಚಿಕೆ ಪಡಬೇಕು. 2000 ವರ್ಷಗಳ ಪೂರ್ವದಲ್ಲಿ ಆಗಿರುವ ಗೌತಮ ಬುದ್ಧನ ಬಗ್ಗೆ ಖಚಿತವಾದ ಮಾಹಿತಿ, ದಿನಾಂಕಗಳು ಲಭ್ಯವಿವೆ. ಕೇವಲ 870 ವರ್ಷಗಳ ಹಿಂದೆ ಆಗಿ ಹೋಗಿರುವ ಗುರು ಬಸವಣ್ಣನವರ ಬಗ್ಗೆ ಇನ್ನೂ ಎಳೆದಾಡುತ್ತಿದ್ದಾರೆ ಎಂಬುದು ಸಾಹಿತಿಗಳಿಗೆ, ಸಂಶೋಧಕರಿಗೆ ನಾಚಿಕೆ ತರುವ ಸಂಗತಿಯಲ್ಲವೆ ? ಸಾಹಿತಿಗಳಿಗೆ ಮಹಾತ್ಮರ ಜನನ–ಜೀವನ–ಮರಣ ಕುರಿತು ಭಾವನಾತ್ಮಕ ಸಂಬಂಧವಿರದು. ಆದರೆ ಭಕ್ತ ವೃಂದಕ್ಕೆ ಅವು ಬಹು ಮುಖ್ಯ ಸಂಗತಿಗಳು. ಅವತಾರ ಪುರುಷರ ಜನ್ಮ ದಿನಾಂಕ, ಅವರಿಗೆ ಸಾಕ್ಷಾತ್ಕಾರವಾದುದು, ಅವರು ನೂತನ ಧರ್ಮವನ್ನು ಸಂಸ್ಥಾಪನೆ ಮಾಡಿದುದು, ಲಿಂಗೈಕ್ಯರಾದುದು ಬಹಳ ಮಹತ್ವಪೂರ್ಣವಾದ ದಿನಗಳು. ಆ ದಿನಗಳನ್ನು ಅನುಯಾಯಿಗಳು ಬಹು ಭಯಭಕ್ತಿಯಿಂದ ಆಚರಿಸುತ್ತಾರೆ.

ಬಿಜ್ಜಳ ಮಹಾರಾಜನು 1196ರ ವರೆಗೆ ಜೀವಿಸಿದ್ದು ಖಚಿತವಾಗಿದೆ. ಬಿಜ್ಜಳನ ಸಾವಿನ ನಂತರವೇ ಗುರು ಬಸವಣ್ಣನವರು ಲಿಂಗೈಕ್ಯರಾಗಿದ್ದಾರೆ. ಶ್ರಾವಣ ಶುದ್ಧ ಪಂಚಮಿಯಂದು ನಳನಾಮ ಸಂವತ್ಸರದಲ್ಲಿ ಅವರು ಲಿಂಗೈಕ್ಯರಾಗಿದ್ದಾರೆ. ಕಲ್ಯಾಣದಲ್ಲಿ ಅವರು ಇದ್ದುದು 36 ವರ್ಷ(1160–1196) ಮಂಗಳವೇಡೆಯಲ್ಲಿದ್ದುದು 5 ವರ್ಷ (1155–1160) ಕೂಡಲ ಸಂಗಮದಲ್ಲಿ ಇದ್ದುದು 12 ವರ್ಷ (1143–1155), ಕೂಡಲ ಸಂಗಮಕ್ಕೆ ಬಂದಾಗ ಅಂದಾಜು 8ರಿಂದ 9 ವರ್ಷ. ಗುರು ಬಸವಣ್ಣನವರು ಜನಿಸಿದ್ದು ಆನಂದನಾಮ ಸಂವತ್ಸರ, ವೈಶಾಖ ಮಾಸದ ರೋಹಿಣಿ ನಕ್ಷತ್ರದಲ್ಲಿ ಅಕ್ಷಯ ತೃತೀಯಾದಂದು (30–4–1134)ಅವರ ಜೀವಿತಾವಧಿ ಕೇವಲ 36ವರ್ಷಗಳಲ್ಲ. 62 ವರ್ಷ, 2 ತಿಂಗಳು, 3 ದಿವಸ. ಕಲ್ಯಾಣದಲ್ಲಿ ವಾಸವಾಗಿದ್ದ ಅವಧಿಯನ್ನೇ ಜೀವಿತಾವಧಿ ಎಂದು ಭಾವಿಸುವುದು ಶುದ್ಧಾಂಗ ತಪ್ಪು. ಸ್ವತಃ ಅವರ ವಚನದಲ್ಲೇ "ಅಯ್ಯಾ ಭಕ್ತಿಗೆ ಬೀಡಾದುದು 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ " ಎಂದು ಉಲ್ಲೇಖವಾಗಿದೆ ಎಂಬುದು ಗಮನಾರ್ಹ. *

ವಿಶ್ವಗುರು ಬಸವಣ್ಣನವರು ಮತ್ತು ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರ 817 ನೆಯ ಲಿಂಗೈಕ್ಯ ದಿನಾಚರಣೆ

ಸ್ಥಳ: ಸರ್.ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನ, ಬೆಂಗಳೂರು

ದಿ.23-07-2012, ಬೆಳಿಗ್ಗೆ. 10-30

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (30-4-1134)62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ)ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು **"ಬಸವ ಪಂಚಮಿ"** ಎಂದು ಖ್ಯಾತಿವೆತ್ತಿದೆ. ಈ ವರ್ಷ 817ನೆಯ ಲಿಂಗೈಕ್ಯ ದಿನವು ಶಿವ (ಸೋಮ) ವಾರ ದಿ. 23-7-2012ರಂದು ಒದಗಿ ಬಂದಿದೆ. ಆದಿ ಪ್ರಮಥ, ಗಣಾಧಿಪತಿ ಬಸವಣ್ಣನವರು ಲಿಂಗೈಕ್ಯರಾದ ಮರು ದಿವಸ ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರು ಸಹ ಉರಿಯುಂಡ ಕರ್ಪುರದಂತೆ ಲಿಂಗೈಕ್ಯರಾದರು. ಅವರ 817ನೆಯ ಲಿಂಗೈಕ್ಯ ಸಂಸ್ಮರಣೆಯನ್ನು ಸಹ ಆಚರಿಸಲಾಗುತ್ತಿದೆ. ಪವಿತ್ರ ಹಬ್ಬಗಳಾದ ಬಸವ ಪಂಚಮಿ ಮತ್ತು ನೀಲಾಂಬಿಕಾ ಷಷ್ಠಿಯನ್ನು ಭಕ್ತಿಪೂರ್ವಕವಾಗಿ ಆಚರಿಸಬೇಕಾದುದು ನಮ್ಮೆಲ್ಲರ ಕರ್ತವ್ಯ.

ದಿ. 23-7-2012ರಂದು ಸರ್. ಪುಟ್ಟಣ್ಣಶೆಟ್ಟಿ ಟೌನ್‌ಹಾಲ್‌ದಲ್ಲಿ ಬೆಳಗ್ಗೆ 10-30ರಿಂದ 817ನೆಯ ಬಸವ ಲಿಂಗೈಕ್ಯ ಸಂಸ್ಮರಣೆಯನ್ನು, ದಿ.24-7-2012ರಂದು ರಾಜಾಜಿನಗರದ 20ನೆಯ ಮುಖ್ಯರಸ್ತೆಯಲ್ಲಿರುವ ಬಸವ ಮಂಟಪದಲ್ಲಿ ಸಾಮೂಹಿಕ ಇಷ್ಟಲಿಂಗಪೂಜೆಯೊಡನೆ ನೀಲಾಂಬಿಕಾ ಷಷ್ಠಿಯನ್ನು ಆಚರಿಸಲಾಗುತ್ತಿದೆ.

ವಚನ ನೃತ್ಯ ರೂಪಕ

ಅತ್ಯಂತ ವಿಶೇಷವಾದ ವಚನ ನೃತ್ಯ ರೂಪಕಗಳನ್ನು ಏರ್ಪಡಿಸಲಾಗುವುದು. ವೈಭವಯುತವೂ ಅರ್ಥಗರ್ಭಿತವೂ ಆದ ನೃತ್ಯ ರೂಪಕಗಳು ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಲಿವೆ.

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಈ ಎರಡು ದಿನಗಳ ಕಾರ್ಯಕ್ರಮವನ್ನು, ಉಪನ್ಯಾಸ ಮತ್ತು ನಂತರ ಗಣ ಪ್ರಸಾದ (ಭೋಜನ)ವನ್ನು ವ್ಯವಸ್ಥೆ ಮಾಡಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ವ್ಯವಸ್ಥೆ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ಶರಣ ಎನ್. ಪುಟ್ಟರುದ್ರ, ಗೌರವಾಧ್ಯಕ್ಷರು,
ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮೀಜಿ
ಪ್ರಧಾನ ಕಾರ್ಯದರ್ಶಿ, ಬಸವ ಮಂಟಪ

ದಿ. 23ರ ಕಾರ್ಯಕ್ರಮ ವಿವರ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಸಮೀಪದಲ್ಲಿರುವ ಸರ್.ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ 817ನೆಯ ಬಸವ ಪಂಚಮಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

1. ಬೆಳಗ್ಗೆ 10-30ಗಂಟೆಗೆ ಕಾರ್ಯಕ್ರಮ ಆರಂಭ
2. ಕಾರ್ಯಕ್ರಮದ ನಂತರ 2 ಗಂಟೆಗೆ ಗಣದಾಸೋಹ (ಊಟ)
3. ಸಾಂಸ್ಕೃತಿಕ ಕಾರ್ಯಕ್ರಮ 3-30 ರಿಂದ 5-30

ನೀಲಾಂಬಿಕಾ ಷಷ್ಠಿ - ದಿ.24-07-2012ರಂದು ರಾಜಾಜಿ ನಗರದ ಬಸವ ಮಂಟಪದಲ್ಲಿ

ಸಾಮೂಹಿಕ ಇಷ್ಟಲಿಂಗ ಪೂಜೆಯೊಡನೆ

ಪರಮ ದಾಸೋಹವನು ನೆರೆ ಮಾಡಿ ಜಂಗಮದ
ಪರಮ ಪ್ರಸಾದವನು ಸವಿದು ಸುಖಿದಿ
ಕರದಿಷ್ಟಲಿಂಗದೊಳು ಶರೀರವನಿಂಬಿಟ್ಟ
ಕರುಣೆ ನೀಲಮ್ಮ ಶರಣು ಯೋಗಿನಾಥ

ತಾಯಿ ನೀಲಾಂಬಿಕೆಯವರು ಅಸಾಮಾನ್ಯ ಯೋಗಿಣಿ. ಇಚ್ಛಾಮರಣಿಯಾಗಿ ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದ ಮರುದಿವಸ ಅವರು ಕರದಿಷ್ಟ ಲಿಂಗದ ಪೂಜೆ ಮಾಡುತ್ತ ಲಿಂಗೈಕ್ಯರಾದರು. ಈ ನಿಮಿತ್ತ ದಿ. 24-7-2012ರಂದು 817ನೆಯ ನೀಲಾಂಬಿಕಾ ಷಷ್ಠಿಯನ್ನು ಬೆಳಿಗ್ಗೆ 10-30 ರಿಂದ ಬೆಂಗಳೂರಿನ ರಾಜಾಜಿ ನಗರದ ಬಸವ ಮಂಟಪದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಸನ್ನಿಧಿಯಲ್ಲಿ ಆಚರಿಸಲಾಗುತ್ತಿದೆ.

ಪರ ಊರುಗಳಿಂದ ಬರುವವರಿಗೂ ಸಹ ಬಸವ ಮಂಟಪದಲ್ಲಿ ವಸತಿ-ಊಟದ ವ್ಯವಸ್ಥೆ ಇರುವುದರಿಂದ ಆಗಮಿಸಿ ಬಸವ ಪಂಚಮಿ ಉತ್ಸವದಲ್ಲಿ ಭಾಗಿಗಳಾಗಲು ಕೋರುತ್ತೇವೆ. ಬಸ್ಸುಗಳಲ್ಲಿ ಬರುವವರು ರಾಜಾಜಿನಗರದ ನವರಂಗ್ ಟಾಕೀಸ್ ಬಳಿ ಇಳಿದರೆ ಬಸವ ಮಂಟಪವನ್ನು 10 ನಿಮಿಷದಲ್ಲಿ ತಲುಪಬಹುದು, ಬಸವ ಮಂಟಪವು ರಾಜಾಜಿನಗರದ 2ನೆಯ ಬ್ಲಾಕಿನಲ್ಲಿ 20ನೆಯ ಮುಖ್ಯರಸ್ತೆಯಲ್ಲಿ (ಸಿಟಿ ಆಸ್ಪತ್ರೆ ಪಕ್ಕ) ಇದೆ. ಬಸವ ಮಂಟಪದ ಮುಂದೆಯೂ ಬಸ್‌ಸ್ಟಾಪ್ ಇದೆ.

ವಿಶೇಷ ಮನವಿ :- ಸಾಮಾನ್ಯವಾಗಿ ಅನೇಕರು ಭಾನುವಾರಗಳನ್ನು ಶರಣರ ಜಯಂತಿ, ಲಿಂಗೈಕ್ಯ ಸಂಸ್ಮರಣೆ ಮಾಡಲು ಆಯ್ಕೆ ಮಾಡಿಕೊಳ್ಳುತ್ತಾರೆ. ಮಹಾನುಭಾವರಿಗೆ ಗೌರವ ತೋರಿಸಲು ನಾವು ಅಂದೇ ಮಾಡಬೇಕು. ಒಂದು ರಜೆಯನ್ನು ಸಹ ಹಾಕಲಾರದ ಮನೋಭಾವ ಸರಿಯಲ್ಲ; ಅಂದು ಒಂದು ದಿವಸವಾದರೂ ಅಂಗಡಿ ಮುಚ್ಚಿ ಮಹಾತ್ಮರಿಗೆ ಗೌರವ -ಕೃತಜ್ಞತೆ ಸಲ್ಲಿಸಬೇಕು ಎಂಬ ಮನೋಭಾವ ಹೊಂದದೆ ಇರುವುದು ಸೂಕ್ತವಲ್ಲ. ಧರ್ಮಕ್ಕಾಗಿ ತನು-ಮನ-ಧನಗಳನ್ನು ಮಾತ್ರವಲ್ಲದೆ ಅಭಿಮಾನ -ಸಮಯ-ಪ್ರಾಣಗಳನ್ನು ಮೀಸಲಿಡಬೇಕು. ಬಸವ ಪಂಚಮಿ ಸೋಮವಾರ ಬಂದಿದ್ದು ರಜಾ ದಿನ ಅಲ್ಲದಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

ಬಸವ ಮಂಟಪಕ್ಕೆ ಬಸ್ ಮಾರ್ಗ

ಮೆಜೆಸ್ಟಿಕ್‌ನಿಂದ 78A, 80A, 80E, 252F, 252H ರೂಟಿನ ಸಿಟಿ ಬಸ್ಸುಗಳು ಬರುತ್ತವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಚನ ಮಂಗಲ

ಕೊಡಗು ಜಿಲ್ಲೆಯ ಕುಶಾಲ ನಗರದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಚನವು ದಿ.17-5-2012 ರಂದು ಆರಂಭವಾಗಿ 40 ದಿವಸಗಳ ಕಾಲ ನಡೆದು ದಿ.25-6-2012ರಂದು ಮುಕ್ತಾಯಗೊಂಡಿತು. ಮುಕ್ತಾಯ ಸಮಾರಂಭದಲ್ಲಿ ಭಾಗಿಯಾಗಲು ಆಗಮಿಸಿದ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರನ್ನು ಮತ್ತು ಪ್ರವಚನ ಮಾಡಿದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರನ್ನು ಮೆರವಣಿಗೆಯಲ್ಲಿ ವೇದಿಕೆಗೆ ಕರೆತರಲಾಯಿತು.

ವಿಶ್ವಶಾಂತಿ ಕುರಿತು ಬಸವಣ್ಣನವರ ಸಂದೇಶ

-ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಮರ್ತ್ಯಲೋಕವೆಂಬ ಕರ್ತಾರನ ಈ ಕಮ್ಮಟದಲ್ಲಿ ಜೀವಿಗಳು ಸಲ್ಲುವ ನಾಣ್ಯಗಳಾಗಬೇಕು. ಎಂದು ಬೋಧಿಸಿದ ವಿಶ್ವವಿಭೂತಿ ಬಸವಣ್ಣನವರ ವಚನಗಳಲ್ಲಿ ಜಾಗತಿಕ ಶಾಂತಿ ಸ್ಥಾಪನೆಯ ಪ್ರಯತ್ನಕ್ಕೆ ಸಿಕ್ಕುವ ಪೋಷಕ ಅಂಶಗಳನ್ನು ಕುರಿತು ಚಿಂತಿಸುತ್ತಿದೆ ಈ ಲೇಖನ.

ಜಗತ್ತು ವೈಜ್ಞಾನಿಕ ಸಾಧನೆಯ ಹಿನ್ನೆಲೆಯಲ್ಲಿ ಹೊಸ ಹೊಸ ಸಂಶೋಧನೆಗಳನ್ನು ಮಾಡುತ್ತ, ದಾಪುಗಾಲಿಡುತ್ತ ಸಾಗಿರುವಾಗ ಮಾನವ ಕುಲವು ವಿನಾಶದ ದೈತ್ಯಾಲಿಂಗನದೊಳಕ್ಕೆ ಸಿಕ್ಕುತ್ತಿರುವುದು ದಿನದಿನಕ್ಕೂ ಸ್ಪಷ್ಟವಾಗುತ್ತಿರುವ ಸಂಗತಿ. ಅಂಕೆ ತಪ್ಪಿಸಾಗುವ ವಿಜ್ಞಾನದ ನಡೆ ಏನೇನು ವಿಪತ್ತುಗಳನ್ನು ತಂದು ಹೇಗುವುದೋ ಎಂಬ ನಿರಂತರ ಭಯದ ಕರಿನೆರಳಿನ ಛಾಯೆಯಲ್ಲಿಯೇ ಇಂದಿನ ಮನುಷ್ಯ ಬದುಕತೊಡಗಿದ್ದಾನೆ. "ನಮ್ಮ ಹಿಂದಿನವರು ಬಿಟ್ಟು ಹೋದ ಶ್ರೇಷ್ಠ ಬಳುವಳಿ ಸಾಹಿತ್ಯ, ಕಲೆ, ಸಂಸ್ಕೃತಿ" ಎಂದು ಇಂದಿನವರು ಹೇಳಿಕೊಳ್ಳುವ ಪರಿಸ್ಥಿತಿ ಕೆಲವೇ ದಶಕಗಳಲ್ಲಿ ಹೋಗಿ ಮುಂದಿನ ಜನಾಂಗ "ನಮ್ಮ ಹಿಂದಿನವರು ಬಿಟ್ಟು ಹೋದ ಕೊಡುಗೆಗಳೆಂದರೆ ಮೆಗಾಟನ್ ಬಾಂಬ್‌ಗಳು, ಅಣ್ವಸ್ತ್ರ ಕ್ಷಿಪಣಿಗಳು ಮತ್ತು ಮಲಿನಗೊಂಡ ಪರಿಸರ." ಎಂದು ಮುಂತಾಗಿ ಹೇಳುವ ಕಾಲ ಬಂದೀತಲ್ಲ ಎಂಬುದು ಒಂದು ಚಿಂತೆಯಾದರೆ, ಅದನ್ನಾದರೂ ಹೇಳಲು ಮನುಷ್ಯ ಜೀವಂತವಿರಬಹುದೆ ಎಂಬುದು ಇನ್ನೊಂದು ಸಮಸ್ಯೆ

"ತಾ ಮಾಡಿದುದು ತನ್ನ ತೊಡೆಯನೇರಿತ್ತು, ತನ್ನ ಎದೆಯನೇರಿತ್ತು, ತನ್ನ ತಲೆಯನೇರಿತ್ತು" ಎಂಬಂತೆ ಸಂಶೋಧನೆಯ ಪ್ರತಿಫಲವಾಗಿ ಹುಟ್ಟಿದ ಮಾರಕಾಸ್ತ್ರಗಳು ಎಲ್ಲರ ಹಿಡಿತ ತಪ್ಪಿ ಆಳತೊಡಗಿವೆ. ಸೃಷ್ಟಿಯ ಕಿರೀಟದಂತಿರುವ ಮಾನವನ ಈವರೆಗಿನ ಎಲ್ಲ ಸಾಧನೆ, ಸಂಶೋಧನೆ ಉರಿಗೊಡ್ಡಿದ ಅರಗಿನಂತೆ ಕರಗಿ ಹೋಗಬಹುದೆಂಬ ಭಯಾನಕ ವಾತಾವರಣ ಸೃಷ್ಟಿಯಾಗಿರುವ ಇಂದಿನ ಕಾಲಮಾನದಲ್ಲಿ ಎಚ್ಚೆತ್ತ ವಿಚಾರಶೀಲರು ವಿಶ್ವಶಾಂತಿಯ ಸ್ಥಾಪನೆಯತ್ತ ತಮ್ಮ ಚಿಂತನೆಯನ್ನು ಹರಿಯಬಿಟ್ಟಿರುವುದು ಮಾತ್ರವಲ್ಲ, ಅಣ್ವಸ್ತ್ರಗಳಿಂದ ಉಂಟಾಗುವ ಅಪಾಯದ ಬಗ್ಗೆ ಜನತೆಯನ್ನು ಎಚ್ಚರಿಸತೊಡಗಿದ್ದಾರೆ.

ಈ ಎಚ್ಚರ ಅನಿವಾರ್ಯ, ಸ್ವಾಭಾವಿಕವಷ್ಟೇ ಅಲ್ಲ, ಆವಶ್ಯಕ ಕೂಡ. ಏಕೆಂದರೆ ವಿಜ್ಞಾನದ ನೆರವಿನಿಂದ ಕಾಲ (time) ಮತ್ತು ದೇಶ(space)ಗಳ ಮಿತಿಯನ್ನು ದಾಟಿರುವ ಮಾನವನಿಗೆ ಇಡೀ ವಿಶ್ವವು ಒಂದು ಅಖಂಡ ಮನೆ, ಮಾನವ ಕುಲವೇ ಕುಟುಂಬ. ದೇಹದ ಯಾವುದೇ ಭಾಗಕ್ಕೆ ತೊಂದರೆಯಾದರೆ ಇನ್ನಿತರ ಅಂಗಗಳು ನೋವನ್ನು ಅನುಭವಿಸುವುದು ಮಾತ್ರವಲ್ಲ ದೇಹದ ಸ್ವಾಸ್ಥ್ಯವು ಕೆಡುವಂತೆ, ಭೂಮಿಯ ಒಂದು ಭಾಗದಲ್ಲಿ ಅವಗಡ ಸಂಭವಿಸಿದರೂ ಇನ್ನುಳಿದ ಭಾಗದ ಮೇಲೆ ಅದರ ಪರಿಣಾಮವಿದ್ದೇ ಇರುವುದು. ಆದ್ದರಿಂದ ಅಣ್ವಸ್ತ್ರಗಳಿಂದ ಮುಕ್ತವಾದ ಒಂದು ಸುಭದ್ರ ಜಗತ್ತನ್ನು ತನ್ನ ಭಾವೀ ಜನಾಂಗಕ್ಕೆ ಬಳುವಳಿಯನ್ನಾಗಿ ನೀಡಬೇಕಾದ ಹೊಣೆ ಇವತ್ತಿನ ಮನುಷ್ಯನ ಮೇಲಿದೆ. ಈ ದಿಶೆಯಲ್ಲಿ ಚಿಂತಿಸುವ ಎಲ್ಲರಿಗೂ ಬಸವಣ್ಣನವರಂತಹ ವಿಚಾರಶೀಲ ತತ್ತ್ವಜ್ಞಾನಿಗಳು, ಸಮಾಜ ಸುಧಾರಕರು, ಮಾನವತಾವಾದಿಗಳು ಈ ಬಗ್ಗೆ ಏನು ಹೇಳಬಹುದು ಎಂಬ ಕುತೂಹಲವಿರುವುದು ಸ್ವಾಭಾವಿಕ. ಆ ದಿಶೆಯಲ್ಲಿ ಈ ಲೇಖನ ಒಂದು ಚಿಕ್ಕ ಪ್ರಯತ್ನವನ್ನು ಮಾಡುತ್ತಿದೆ.

ಮರ್ತ್ಯಲೋಕವೊಂದು ಮಹಾಮನೆ

ವಿಶ್ವಗುರು ಬಸವಣ್ಣನವರು ಸಾಧಿಸಿದ ಕಾರ್ಯ, ಹಮ್ಮಿಕೊಂಡ ಬೃಹತ್ ಯೋಜನೆಗಳ ಭವ್ಯತೆಯನ್ನು ಕಂಡೇ ಪ್ರಭುದೇವರು, ಬಸವಣ್ಣನವರ ಹುಟ್ಟಿನಲ್ಲಿ ಒಂದು ವಿಶೇಷ ಉದ್ದೇಶವನ್ನು ಗುರುತಿಸುತ್ತಾರೆ.

ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು
ಕರ್ತನಟ್ಟಿದನಯ್ಯ ಒಬ್ಬ ಶರಣನ
ಆ ಶರಣ ಬಂದು ಮರ್ತ್ಯವನ್ನೇ ಕೈಲಾಸವ ಮಾಡಿದನಾಗಿ
ಮರ್ತ್ಯಲೋಕ ಶಿವಲೋಕವೆರಡಕ್ಕೆ ನಿಚ್ಚಣಿಕೆಯಾದನು

ಈ ಜಗತ್ತು ಕರ್ತನೆಂಬುವವನ ಮಹಾಮನೆ. ಅದು ವಿವಿಧ ಬಗೆಯ ವೈಷಮ್ಯಗಳು, ವಿಪತ್ತುಗಳಿಂದ ನಾಶವಾಗಬಾರದೆಂದು ಅದನ್ನು ರಕ್ಷಿಸಲೆಂದೇ ಬಸವಣ್ಣನವರು ಹುಟ್ಟಿಬಂದಿದ್ದಾರೆ ಎಂದು ಪ್ರಭುದೇವರು

ಹೇಳುತ್ತಿರುವರೆಂದ ಮೇಲೆ ವಿಶ್ವಕಲ್ಯಾಣ ಕುರಿತು ಬಸವಣ್ಣನವರ ವಿಚಾರಧಾರೆ ಏನಿರಬಹುದು ಎಂಬುದನ್ನು ಸ್ವಲ್ಪ ವಿಚಾರಿಸೋಣ.

ವಿಶ್ವಶಾಂತಿಯನ್ನು ಬಯಸುವವರು ಮೊದಲು ಈ ಜಗತ್ತನ್ನು ಜೀವನವನ್ನು ಬಹಳಷ್ಟು ಪ್ರೀತಿಸಬೇಕು ಮತ್ತು ಇದರ ವಾಸ್ತವಿಕತೆಯನ್ನು ಒಪ್ಪಬೇಕು. ಐಹಿಕ ಬದುಕಿಗೆ, ಮೌಲ್ಯಗಳಿಗೆ ಎಳ್ಳಷ್ಟು ಬೆಲೆಕೊಡದವನು ಇದರ ಸುಸ್ಥಿತಿಯ ಬಗ್ಗೆ ಚಿಂತಿಸಲಾರ. ಈ ಸಂಗತಿಯ ಹಿನ್ನೆಲೆಯಲ್ಲಿ ಬಸವಣ್ಣನವರ ವಚನ: "ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ ; ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು. ಇಲ್ಲಿ ಸಲ್ಲದವರು ಅಲ್ಲಿ ಸಲ್ಲರಯ್ಯ." ಎಂಬುದು ಬಲು ಮಹತ್ವಪೂರ್ಣ. ನಮ್ಮ ಪಂಚೇಂದ್ರಿಯಗಳ ಅಳವಿಗೆ ಸಿಕ್ಕುವ ಈ ಮರ್ತ್ಯವು ಒಂದು ವಾಸ್ತವಿಕ ಸುಂದರ ಕೃತಿಯಷ್ಟೇ ಅಲ್ಲ ವ್ಯಕ್ತಿಗಳನ್ನು ರೂಪುಗೊಳಿಸುವ 'ಕಮ್ಮಟ' ಕಾರ್ಯಾಗಾರ, ಟಂಕಸಾಲೆ. ನಾವು ಕೇವಲ ಅಧ್ಯಾತ್ಮಿಕವಾದಿಗಳಾಗಿ ಈ ಬಹಿರಂಗ ಜಗತ್ತಿನ ಏಳಿಗೆಯ ಬಗ್ಗೆ ಚಿಂತಿಸದೆ ಕುಳಿತರೆ ಆಗದು. ಇದನ್ನು ಸುಸ್ಥಿತಿಯಲ್ಲಿಡುವ ಬಗ್ಗೆ ಚಿಂತಿಸಬೇಕಾದುದು ನಮ್ಮ ಕರ್ತವ್ಯ. ಇಲ್ಲಿ ಸಂದಾಗ ಮಾತ್ರ ಪರಮಾತ್ಮನಲ್ಲಿಯೂ ನಮಗೆ ಸ್ಥಾನ.

ಬಸವಣ್ಣನವರ ದೃಷ್ಟಿಯಲ್ಲಿ ದೇವಲೋಕ, ಮೃತ್ಯುಲೋಕ ಎಂಬುದು ಬೇರೆ ಇಲ್ಲ. ಸತ್ಯ-ಸದಾಚಾರ-ಶಾಂತಿ-ಸುಜ್ಞಾನ ನೆಲೆಸಿದಾಗ ಈ ಮರ್ತ್ಯಲೋಕವೇ ದೇವಲೊಕ ; ಮಿಥ್ಯ-ದುರಾಚಾರ-ಅಶಾಂತಿ-ಅಜ್ಞಾನ-ಶೋಷಣೆಯ ಬೀಡಾದಾಗ ಇದುವೇ ಮೃತ್ಯುಲೋಕ. ಆಚಾರವು ನೆಲೆಗೊಂಡಾಗ ಇದುವೇ ಸ್ವರ್ಗ. ಅನಾಚಾರವು ಬೀಡುಬಿಟ್ಟಾಗ ಇದುವೇ ನರಕ. ಆದ್ದರಿಂದ ಈ ಮರ್ತ್ಯವನ್ನು ದೇವಲೋಕವನ್ನಾಗಿಸುವುದು ಮನುಷ್ಯನ ಕೈಲೇ ಇದೆ.

ಅತ್ಯಂತ ಹೀನರು ಯಾರು ? ಕೊಲ್ಲುವವನು, ಮೆಲ್ಲುವವನು. ಕೊಲ್ಲುವುದು ಹಲವಾರು ಬಗೆಯಲ್ಲಿ. ಧರ್ಮದ ಹೆಸರಿನಲ್ಲಿ ಕೊಲ್ಲುವವರು ಕೆಲವರಾದರೆ, ಸ್ವಪ್ರತಿಷ್ಠೆಯ ಸೋಗಿನಲ್ಲಿ ಕೊಲ್ಲುವವರು ಮತ್ತೆ ಕೆಲವರು. ಈ ಹಿನ್ನೆಲೆಯಲ್ಲಿ ಅಣ್ವಸ್ತ್ರಗಳ ಪ್ರಯೋಗಗಳ ಮೂಲಕ ಪರಿಸರವನ್ನು ಮಲಿನಗೊಳಿಸುವವರು, ಅಣುವಿಕಿರಣದಿಂದ ಮಾನವನ ಕುಲವನ್ನೇ ವಿನಾಶದತ್ತ ಕೊಂಡೊಯ್ಯುತ್ತಿರುವವರು ದೊಡ್ಡ ಕೊಲೆಗಡುಕರೇ ಸರಿ !

ಬಸವಣ್ಣನವರ ದೃಷ್ಟಿಯಲ್ಲಿ ಅತ್ಯಂತ ಶ್ರೇಷ್ಠ ಕುಲಜರು ಯಾರು ? " ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವವರು." ಸಕಲ ಜೀವಾವಳಿಗೆ ಲೇಸನ್ನು ಏಕೆ ಬಯಸಬೇಕು? ಏಕೆಂದರೆ ಎಲ್ಲ ಜೀವರಾಶಿಗಳಿಗೂ ಬದುಕುವ ಹಕ್ಕಿದೆ. ದೇವರು ಆ ಹಕ್ಕನ್ನು ಅವುಗಳಿಗೆ ದಯಪಾಲಿಸಿದ್ದಾನೆ. ಅದಕ್ಕೆಂದೇ ಶರಣಧರ್ಮಿಯು ಪೂಜಾ ಕಾಲದಲ್ಲಿ ದೇವರಿಗೆ ಮಜ್ಜನಕ್ಕೆ ಎರೆಯುವಾಗ, "ನನ್ನ ಅಂತಃಕರಣಗಳೆಂಬ ಬಟ್ಟಲಿನಲ್ಲಿ ಕರುಣೆ ಎಂಬ ಉದಕವನ್ನು ತುಂಬಿ ಸಕಲ ಜೀವರಾಶಿಗಳಿಗೆ ಎರೆಯುತ್ತಿದ್ದೇನೆ ಎಂದು ಭಾವಿಸಿ ದೇವಾ, ನಿನಗೆ ಮಜ್ಜನವನ್ನು ಎರೆಯುತ್ತೇನೆ." ಎಂದು ಹೇಳಿಕೊಳ್ಳುವುದು.

ಸಾಮಾನ್ಯ ಯುದ್ಧವೇ ಆಗಲಿ ಅದರಿಂದ ಆಗುವ ಸಾವು-ನೋವು ಅಪಾರ ; ಇನ್ನು ಅಣ್ವಸ್ತ್ರಯುದ್ಧವಾದರಂತೂ ಅದರ ಭಯಂಕರತೆಯನ್ನು ಹೇಳಲೂ ಯಾರೂ ಉಳಿಯಲಿಕ್ಕಿಲ್ಲ. ಮನುಷ್ಯನು ತನ್ನ ವರ್ತಮಾನದ ಬಗ್ಗೆ ಪೂರ್ತಿ ತೆರೆ ಎಳೆದು, ಭವಿಷ್ಯತ್ತನ್ನು ಶೂನ್ಯದಿಂದಲೇ ಆರಂಭಿಸಬೇಕಾಗುತ್ತದೆ. ಅಣ್ವಸ್ತ್ರ ಯುದ್ಧವಿರಲಿ, ಬರೀ ಅವುಗಳ ಪ್ರಯೋಗಗಳಿಂದಲೇ ಸಾವು-ನೋವು. ಅಗಲಿಕೆ ಆಕ್ರಂದನಗಳಿಂದ ಜಗತ್ತು ನೋವಿನಕೊಳ್ಳವಾದೀತು. ಅದು ಆಗಬಾರದೆಂದೇ ಬಸವಣ್ಣನವರ ಮಾತನ್ನು ಅಣ್ವಸ್ತ್ರ ಪೈಪೋಟಿ ನಡೆಸುತ್ತ, ಮಾರಕಾಸ್ತ್ರಗಳನ್ನು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಮಾರಿ, ಆ ದೇಶಗಳ ಗಮನವನ್ನು ಶಸ್ತ್ರಾಸ್ತ್ರ ಸಂಗ್ರಹಗಳ ಕಡೆಗೆ ಕೇಂದ್ರೀಕರಿಸುತ್ತ ತಮ್ಮ ರಾಷ್ಟ್ರದ ಆದಾಯ ಹೆಚ್ಚಿಸಿಕೊಳ್ಳುತ್ತಿರುವ ಬಲಿಷ್ಠ ರಾಷ್ಟ್ರಗಳಿಗೆ ಹೇಳುವುದು ಬಲು ಉಚಿತ. ಇಂದು ಆ ರಾಷ್ಟ್ರಗಳು ಮಾಡುತ್ತಿರುವುದು 'ಶಿಶುವನಗಲಿಸಿ, ತಾಯ ಮರುಗಿಸಿ ತಾವು ಹಾಲು ಕರೆದುಕೊಂಡು ಉಣ್ಣುವುದೇ ಆಗಿದೆ."

ಈ ಬಲಿಷ್ಠ ರಾಷ್ಟ್ರಗಳ ಕೆಲಸ, ಕಾಣಿಯ ಲೋಭವು ಕೋಟಿಯ ಲಾಭವನ್ನು ಕೆಡಿಸಿದಂತಹುದೇ ಆಗಿದೆ. ಏಕೆಂದರೆ ತಮಗೆ ಸಿಕ್ಕುವ ಕೋಟ್ಯಾಂತರ ಡಾಲರಗಳ ಲೋಭಕ್ಕಾಗಿ ಮಾನವ ಕುಲಕ್ಕೆ ಆಗುವ ಉದಾತ್ತ ಲಾಭವನ್ನು ಕೆಡಿಸುವ ತಂತ್ರದಲ್ಲಿ ಇವುಗಳು ನಿರಂತರವಾಗಿ ನಿರತವಾಗಿವೆ.

ಒಂದು ಕಡೆಯಲ್ಲಿ ವಿಜ್ಞಾನವು ಮಹತ್ವದ ಸಂಶೋಧನೆಗಳನ್ನು ಮಾಡುತ್ತ, ಭಯಂಕರ ರೋಗಗಳಿಗೆ ಪರಿಹಾರ ಕಂಡು ಹಿಡಿಯುತ್ತ ವ್ಯಕ್ತಿಯ ಆಯುಷ್ಯವನ್ನು ಹೆಚ್ಚಿಸುವುದರಲ್ಲಿ ತೊಡಗಿದ್ದರೆ, ಇನ್ನೊಂದು

ಕಡೆಯಲ್ಲಿ ತಾರಾಯುದ್ಧಕ್ಕೆ ಮನುಷ್ಯನನ್ನು ಅಣಿಮಾಡುತ್ತಲಿದೆ ಬಸವಣ್ಣನವರ ವಚನವೊಂದರ ಹಿನ್ನೆಲೆಯಲ್ಲಿ ಮನುಷ್ಯನ ಪರಿಸ್ಥಿತಿಯನ್ನು ಹೀಗೆ ವರ್ಣಿಸಬಹುದು : "ಹಾವಿನ ಬಾಯಕಪ್ಪೆ ಹಸಿದು ಹಾರುವ ನೊಣಕ್ಕೆ ಆಸೆಯ ಮಾಡುವಂತೆ."

ಒಂದು ವಚನದಲ್ಲಿ ಅವರು ಹೀಗೆ ಹೇಳುತ್ತಾರೆ. ಹರಕೆಯ ಒಂದು ಕುರಿ ಹಲವಾರು ಚಣಗಳಲ್ಲಿ ಬಲಿಯಾಗುವುದಿದೆ. ಇದರ ಪರಿವೆಯಿಲ್ಲದೆ ಹಬ್ಬಕ್ಕೆ ತಂದಿರುವ ಹಸಿರು ತೋರಣವನ್ನು ಮೇಯುತ್ತಿದೆ. ಅದು ಹೇಗೆ ಭವಿಷ್ಯದ ಭಯನಕತೆಯ ಬಗ್ಗೆ ಯೋಚಿಸದೆ ತಾತ್ಕಾಲಿಕ ಸುಖದಲ್ಲಿ ತನ್ಮಯವಾಗಿದೆಯೋ: ಮನುಷ್ಯನ ಸ್ಥಿತಿಯೂ ಹಾಗೆ ಆಗಿದೆ. ಬಲಿಗೊಡಲು ಸಿದ್ಧನಾಗಿರುವ ಧೂರ್ತನಂತೆ ಬಲಿಷ್ಠ ರಾಷ್ಟ್ರಗಳಿದ್ದರೆ, ತಳಿರು ತಿನ್ನುವ ಹರಕೆಯ ಕುರಿಗಳಂತೆ ಅಭಿವೃದ್ಧಿಶೀಲ ದೇಶಗಳಿವೆ. ಬಲಿಷ್ಠ ರಾಷ್ಟ್ರಗಳ ನೇತಾರರ ಹೃದಯ ಪರಿವರ್ತನೆ ಅತ್ಯಂತ ಅವಶ್ಯಕ. "ಹಾವು ತಿಂದವರ ನುಡಿಸಬಹುದು. ಗರ ಬಡಿದವರ ನುಡಿಸಬಹುದು. ಸಿರಿಗರ ಬಡಿದವರ ನುಡಿಸಲಾಗದು." ಎಂದು ಬಸವಣ್ಣನವರು ಹೇಳುವಂತೆ ಅಧಿಕಾರ ಶಾಹಿ, ಧನದಾಹ, ಸ್ವಪ್ರತಿಷ್ಠೆಗಳಿಂದ ಬೀಗಿರುವ ಅಂಥ ರಾಷ್ಟ್ರಗಳ ನೇತಾರರ ಹೃದಯ ಪರಿವರ್ತನೆ ಕಷ್ಟಸಾಧ್ಯ

ಕಾಂಚನವೆಂಬ ನಾಯನಚ್ಚಿ ನಿಮ್ಮ ನಾನು ಮರೆದೆನಯ್ಯ
ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲ
ಹಡಿಕೆಗೆ ಮೆಚ್ಚಿದ ಸೊಣಗ ಅಮೃತದ ರುಚಿಯ ಬಲ್ಲುದೆ ?

ಎಂದು ಬಸವಣ್ಣನವರ ಮಾತಿನ ಅಂತರಾರ್ಥವನ್ನು ಗುರುತಿಸಿ ಹೀಗೆ ಹೇಳಬಹುದು.

ಕಾಂಚನವೆಂಬುದ ನಚ್ಚಿ ವಿಶ್ವಶಾಂತಿಯ ಮರೆದೆನಯ್ಯಾ
ಕಾಂಚನಕ್ಕೆ ವೇಳೆಯಲ್ಲದೆ ಲೋಕಹಿತ ಚಿಂತಿಸಲು ವೇಳೆಯಿಲ್ಲ
ಅಣ್ವಸ್ತ್ರ ಬಲವ ನಚ್ಚಿದ ಮನ ಮನುಕುಲದ ಶಾಂತಿಯ ಸವಿಯಬಲ್ಲುದೆ ?

ನಿಜ, ಬಲಿಷ್ಠ ರಾಷ್ಟ್ರಗಳು ಕಣ್ಣು ಕಿವಿಗಳನ್ನು ಜಡಗೊಳಿಸಿಕೊಂಡು ಅಂತಃಸಾಕ್ಷಿಯನ್ನು ನಿರ್ಜೀವಗೊಳಿಸಿ ಆದಾಯ ಮತ್ತು ಸ್ವಪ್ರತಿಷ್ಠೆಗಳನ್ನು ಪ್ರಮುಖವಾಗಿ ಇಟ್ಟುಕೊಂಡು ಜಾಗತಿಕ ಶಾಂತಿಯನ್ನು ಮರೆಯುತ್ತಿದೆ. ಪರಿಣಾಮವಾಗಿ ವಿಶ್ವದ 650 ಕೋಟಿ ಜನರನ್ನು ಕೊಲ್ಲಲು ಬೇಕಾದಷ್ಟು ಪ್ರಮಾಣಕ್ಕಿಂತಲೂ 50 ಪಟ್ಟು ಹೆಚ್ಚಾಗಿ ಯುದ್ಧ ಸಾಮಾಗ್ರಿಗಳನ್ನು ಸಂಗ್ರಹಿಸಿವೆ. ಅಂದು 1945ರಲ್ಲಿ ಅಮೇರಿಕೆಯು ಜಪಾನಿನ ಹಿರೋಷಿಮಾ ಮತ್ತು ನಾಗಾಸಾಕಿಯ ಮೇಲೆ ಎಸೆದ ಬಾಂಬುಗಳು ಇಂದಿನ ಅಣ್ವಸ್ತ್ರಗಳಿಗೆ ಹೋಲಿಸಿದಾಗ ತೀರಾ ಅಲ್ಪ. ಇಂದಿನ ಮೆಗಾಟನ್ ಬಾಂಬುಗಳು ಆ ಬಾಂಬಿಗಿಂತ ಎಂಭತ್ತು ಪಟ್ಟು, ನೂರುಪಟ್ಟು ಶಕ್ತಿಶಾಲಿಯಾಗಿವೆ. ಪ್ರತ್ಯಕ್ಷವಾಗಿ ಜೀವರಾಶಿ, ಆಸ್ತಿ, ಕಟ್ಟಡಗಳ ನಾಶವನ್ನೇ ಅಲ್ಲದೆ ಪರೋಕ್ಷವಾಗಿ ಪರಿಸರವನ್ನೇ ವಿಷಪೂರಿತವನ್ನಾಗಿ ಮಾಡುತ್ತವೆ. ಜಗತ್ತಿನ ಸುಮಾರು 570 ಮಿಲಿಯನ್ ಜನರು ಪೌಷ್ಟಿಕ ಆಹಾರವಿಲ್ಲದೆ ಬಳಲುವಾಗ, 500 ಮಿಲಿಯನ್ ವಯಸ್ಕರು ಅನಕ್ಷರಸ್ಥರಾಗಿರುವಾಗ, 250 ಮಿಲಿಯನ್ ಮಕ್ಕಳು ವಿದ್ಯಾಭ್ಯಾಸದ ಸೌಲಭ್ಯ ಹೊಂದಿಲ್ಲದೆ ಇರುವಾಗ ಕೋಟಿಗಟ್ಟಳೆ ಡಾಲರ್ ಹಣವು ಮಿಲಿಟರಿ ವೆಚ್ಚ ಮತ್ತು ಅಣ್ವಸ್ತ್ರ ತಯಾರಿಕೆಗೆ ಬಳಕೆಯಾಗುತ್ತಿರುವುದು ಶೋಚನೀಯ. ಆದ್ದರಿಂದ ಮಾನವ ಕುಲದ ಉಳುವಿಗಾಗಿ ಬಸವಣ್ಣನವರ ಈ ಮಹಾನ್ ಸಂದೇಶ ಎಲ್ಲೆಡೆ ತಲ್ಪಬೇಕಾಗಿದೆ.

ದಯವಿಲ್ಲದ ಧರ್ಮವದೇವುದಯ್ಯಾ ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ
ದಯವೇ ಧರ್ಮದ ಮೂಲವಯ್ಯ
ಲಿಂಗದೇವ ಇಂತಲ್ಲದೊಲ್ಲನಯ್ಯ

ಈ ಉದಾತ್ತ ಸಂದೇಶದ ಮರ್ಮವನ್ನು ಜಗತ್ತಿನ ಜನರಿಗೆ, ಬಲಿಷ್ಠ ರಾಷ್ಟ್ರಗಳ ಪ್ರಮುಖರಿಗೆ ಮನವರಿಕೆ ಮಾಡಿಕೊಡುವುದು ಅವಶ್ಯವಿದೆ. ***

ನೆನಪಿನ ಬುತ್ತಿ ಬಿಚ್ಚಿದಾಗ – 10

ಬಿಜಾಪುರ ಜಿಲ್ಲೆಯ ಸಿಂದಗಿಯಲ್ಲಿ 1969 ಡಿಸೆಂಬರ ಒಂದರಿಂದ 10ರವರೆಗೆ ನಾನು ಪ್ರವಚನ ಮಾಡಿದೆ. ಎರಡೂ ಹೊತ್ತು ಪ್ರವಚನ ಸಾಗುತ್ತಿತ್ತು. ಅದೊಂದು ಅಭೂತಪೂರ್ವ ಸಮಾರಂಭ. ಸರ್ವಜಾತಿ, ಮತ, ಪಂಥಗಳವರೂ ಪ್ರವಚನದಲ್ಲಿ ಭಾಗಿಗಳಾಗುತ್ತಿದ್ದರು. ಈ ಊರಿನ ಇತಿಹಾಸದಲ್ಲಿಯೇ ಸೇರದಷ್ಟು ಜನ ಪ್ರವಚನಕ್ಕೆ ಸೇರುತ್ತಿದ್ದರು. ಸುತ್ತಲಿನ ಹಳ್ಳಿಯವರು ಗಾಡಿ ಕಟ್ಟಿಕೊಂಡು ಪ್ರವಚನದ ಅಮೃತವಾಣಿಯನ್ನಾಲಿಸಲು ಬರುತ್ತಿದ್ದರು. ಡಾ॥ ಶಿವಪ್ಪ ಬೊಮ್ಮಣ್ಣೆಯವರು, ಜಿ.ಎಂ. ವಾರದರವರು ಮುಂದಾಳುಗಳಾಗಿ ಕಾರ್ಯಕ್ರಮವನ್ನು ನೆರವೇರಿಸಿದರು. ಅಲ್ಲಿರುವ ಸಾರಂಗಮಠದ ಪೂಜ್ಯ ಶ್ರೀಗಳವರು ತುಂಬಾ ಸಹಕರಿಸಿದರು. ಅವರ ಅಧ್ಯಕ್ಷತೆಯಲ್ಲೇ ಪ್ರವಚನ ಸಮಾರಂಭ ಮುಕ್ತಾಯವಾಯಿತು; ಇನ್ನೂ ಕೆಲವು ದಿನ ಕಾರ್ಯಕ್ರಮ ಮುಂದುವರಿಯಬೇಕೆಂಬ ಭಕ್ತರ ಆಗ್ರಹ ಬಹಳವಿದ್ದರೂ ಕೂಡ ಉಡುಪಿ ಸಮ್ಮೇಳನಕ್ಕೆ ನಾನು ಹೋಗಲಿದ್ದ ಕಾರಣ ಹತ್ತರಂದು ಮುಕ್ತಾಯ ಮಾಡಬೇಕಾಯಿತು. ಹನ್ನೊಂದನೆಯ ತಾರೀಖು ಇಂಡಿಗೆ ಹೋಗಬೇಕಾಯಿತು. ಪೂಜ್ಯ ಶ್ರೀ ಸಂಗನ ಬಸವ ಸ್ವಾಮಿಗಳು, ಬಂಥನಾಳ್ ಇವರ ಅಧ್ಯಕ್ಷತೆಯಲ್ಲಿ ನಾನು ಮುಖ್ಯ ಅತಿಥಿಯಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದೆ. ದಿನಾಂಕ ಹನ್ನೊಂದರರಂದು ಕಾರ್ಯಕ್ರಮ ಮುಗಿಸಿಕೊಂಡು ರಾತ್ರಿ ಹನ್ನೆರಡೂವರೆಗೆ ಹೊರಟು ಬೆಳಗಿನ ಜಾವಕ್ಕೆ ಧಾರವಾಡವನ್ನು ಸೇರಿದೆ. ದಿನಾಂಕ 13ರಂದು ಉಡುಪಿಗೆ ಹೋಗಬೇಕಾಗಿತ್ತು. ಅದಕ್ಕಾಗಿ 12ರ ರಾತ್ರಿ 9 ಗಂಟೆಗೆ ಧಾರವಾಡವನ್ನು ಬಿಟ್ಟು ಮುಂಜಾನೆ 8 ಗಂಟೆಗೆ ಉಡುಪಿಯನ್ನು ಸೇರಿದೆವು. 9 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿತ್ತು. ಅಂದು ವಿಶೇಷಾಧಿವೇಶನದ ಉದ್ಘಾಟನಾ ಸಮಾರಂಭ; ಉದಯಪುರ ಮಹಾರಾಣಿಯವರ ಅಧ್ಯಕ್ಷತೆಯಲ್ಲಿ, ಜನರಲ್ ಕಾರಿಯಪ್ಪನವರ ಹಸ್ತದಿಂದ ಇದ್ದಿತು. ದಿನಾಂಕ 14 ರಂದು ಮುಂಜಾನೆ ಪೂಜ್ಯ ಗುರುಗಳ ಕಾರ್ಯಕ್ರಮವಿದ್ದಿತು. ಅನೇಕ ಸಲಹೆಗಳನ್ನು ಈ ಕಾರ್ಯಕ್ರಮದಲ್ಲಿ ಕೊಡಬೇಕೆಂಬ ಪ್ರಬಲ ಇಚ್ಛೆ ಇದ್ದರೂ, ವೇಳೆಯ ಅಭಾವಕ್ಕೋ ಅಥವಾ ಮತ್ತಾವ ಕಾರಣಕ್ಕೋ ಹೆಚ್ಚು ಮಾತನಾಡಲು ಪೂಜ್ಯರಿಗೆ ಅನುವು ದೊರೆಯಲಿಲ್ಲ. ಹೀಗಾಗಿ ಹಿಂದೂ ಸಮಾಜ ಸುಧಾರಣೆ ಮತ್ತು ಪ್ರಚಾರವನ್ನು ಕುರಿತು ಕೈಗೊಳ್ಳಬೇಕಾದ ವಿಷಯಗಳನ್ನು ತಿಳಿಸಲವಕಾಶವಾಗಲಿಲ್ಲ. ಅಂದಿನ ಪೂಜ್ಯರ ಭಾಷಣದ ಸಾರಾಂಶವನ್ನು ಕುರಿತು "ಹಿಂದವಃ ಸೋದರಾಃ ಸರ್ವೆ" ಎಂಬ ಹೊತ್ತಿಗೆಯಲ್ಲಿ ಹೀಗೆ ಕೊಡಲಾಗಿದೆ.

"ಧಾರವಾಡದ ಶ್ರೀ ಸ್ವಾಮಿ ಲಿಂಗಾನಂದರು ಮಾತನಾಡಿ, 'ಹುಟ್ಟಿನಿಂದ ಜಾತಿ ಬರಬಹುದು. ಆದರೆ ಸಂಸ್ಕಾರದಿಂದ ಧರ್ಮ ಬರುತ್ತದೆ. ಅಂತೆಯೇ ಹಿಂದುವಿನ ಜೀವನದಲ್ಲಿ ಮೊದಲಿಂದ ಕೊನೆಯವರೆಗೆ ಸಂಸ್ಕಾರಗಳುಂಟು. ಸಂಸ್ಕಾರದಿಂದಲೇ ಪಾವಿತ್ರ್ಯತೆ ಕಂಡುಬರುತ್ತದೆ. ಸಗಣಿಯನ್ನು ಯಾರೂ ಮೈಗೆ ಬಳಿದುಕೊಳ್ಳಲಾರರು. ಆದರೆ ಅದನ್ನೇ ಬೆರಣಿಯಾಗಿ ಮಾಡಿ ಒಣಗಿಸಿ ಸುಟ್ಟು ಬೂದಿಮಾಡಿ ಸಂಸ್ಕಾರ ನೀಡಿದಾಗ ಹಣೆಯನ್ನು ಅಲಂಕರಿಸುವ ಪವಿತ್ರ ಭಸ್ಮವಾಗುತ್ತದೆ. ಇದೇ ಸಂಸ್ಕಾರದ ಗುಟ್ಟು. ಎಲ್ಲರಿಗೂ ಶೂದ್ರನೇ ಆಗಲಿ ಸ್ತ್ರೀ ಆಗಲಿ–ಧಾರ್ಮಿಕ ಸಂಸ್ಕಾರ ಇರಲೇಬೇಕು. ನಮ್ಮಲ್ಲಿ ಎಷ್ಟೊ ಪಂಥ, ಉಪಪಂಥಗಳಿರುವಾಗ ಎಲ್ಲರಿಗೂ ಸಮಾನವಾಗಿ ಸಮ್ಮತವಾಗುವ ಸಂಕೇತವೆಂದರೆ ಓಂಕಾರ ಒಂದೇ? ಪರಿಷತ್ತು ಇದನ್ನು ಜನಪ್ರಿಯಗೊಳಿಸಲಿ' ಎಂದರು. ರಾಜಕಾರಣ ಮತ್ತು ಧರ್ಮಗಳ ಪರಸ್ಪರ ಸಂಬಂಧವನ್ನು ಕುರಿತು 'ಧರ್ಮದಲ್ಲಿ ರಾಜಕೀಯ ಪ್ರವೇಶಬೇಡ. ಆದರೆ ರಾಜಕಾರಣದ ಮೇಲೆ ಧರ್ಮದ ನಿಯಂತ್ರಣವಿರಲಿ' ಎಂಬ ಸೂತ್ರವನ್ನು ಮುಂದಿಟ್ಟರು. ದೇಶದ ಬಡತನ ನಿವಾರಣೆಗೆ ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ಮಂತ್ರವಲ್ಲದೆ ಬೇರೆ ದಾರಿಯೆಲ್ಲಿದೆ? ಎಂದು ಪ್ರಶ್ನಿಸಿದರು. 'ರೋಗಿಯನ್ನು ಮುಟ್ಟುವುದಕ್ಕೆ ಹೇಸುವವನು ವೈದ್ಯನಲ್ಲ; ಪತಿತನನ್ನು ಕುರಿತು ಅಸಹ್ಯಪಡುವವನು ಧರ್ಮಗುರುವಾಗಲಾರ' ಎಂದು ಮಾರ್ಮಿಕವಾಗಿ ನುಡಿದರು.

ದಿನಾಂಕ 14–12–1969 ರಂದು ನನ್ನ ಭಾಷಣವಿದ್ದಿತು. ಅಂದಿನ ಸಭೆಯ ಅಧ್ಯಕ್ಷತೆ ಶ್ರೀಮತಿ ಜಯದೇವಿತಾಯಿ ಲಿಗಾಡೆಯವರು ವಹಿಸಿದ್ದರು. ಉದ್ಘಾಟಕರು ಗ್ವಾಲಿಯರ್ ಮಹಾರಾಣಿ ವಿಜಯರಾಜೆ ಸಿಂಧೆ ಅವರು. ಅಂದಿನ ನನ್ನ ಭಾಷಣ, ವ್ಯಕ್ತಿತ್ವಗಳಿಗೆ ಶ್ರೋತೃಗಳು ಮಾರುಹೋದರು. ಮಹಾರಾಣಿಯವರು ತಮ್ಮ ಉದ್ಘಾಟನಾಪರ ಭಾಷಣದಲ್ಲಿ "ಇಂದು ದುರ್ಗಿಯರ ಅವತಾರವಾಗಬೇಕಾಗಿದೆ" ಎಂದು ನುಡಿದಿದ್ದರು. ನನ್ನ ಭಾಷಣ ಆರಂಭವಾದ ನಂತರ

ಮಹಾರಾಣಿಯವರು ಶ್ರೀಮತಿ ಲಿಗಾಡೆಯವರೊಡನೆ "ನಾನು ಹೇಳಿದ ಸ್ವಲ್ಪ ಹೊತ್ತಿನಲ್ಲಿಯೇ ದುರ್ಗಿಯ ಅವತಾರ ಹೊತ್ತವರನ್ನು ಇಲ್ಲೇ ಕಂಡೆ" ಎಂದು ಉದ್ಗರಿಸಿದರಂತೆ. ನನ್ನ ಪ್ರವಚನ ನಡೆಯುವಾಗ ಮಂತ್ರಮುಗ್ಧರಾದ ಜನತೆ ಮೂಕರಾಗಿ ಕುಳಿತಿದ್ದರು, ವೇಳೆಯ ಅಭಾವವೆಂದು ಸಂಚಾಲಕರು ಎಚ್ಚರಿಸುತ್ತಿದ್ದರು. ಆದರೇನು ಇನ್ನೂ ಬೇಕು ಎಂದು ಶ್ರೋತೃಗಳು ಪ್ರೇರೇಪಿಸುತ್ತಿದ್ದರು. ವಿಶ್ವ ಹಿಂದೂ ಪರಿಷತ್ತಿನಲ್ಲಿ ಭಾಗಿಯಾದ ಯಾವ ವ್ಯಕ್ತಿಯೂ ಅಂದಿನ ಪ್ರಸಾದವಾಣಿಯನ್ನು ಮರೆಯಲಾರ. ಅದರಿಂದ ಪ್ರಭಾವಿತರಾಗಿ ಅನೇಕರು ಪತ್ರ ಬರೆದರು.

ನಾನು ನನ್ನ ಭಾಷಣದಲ್ಲಿ ಹೇಳಿದೆ : "ಪರದೇಶದ ಧರ್ಮೀಯರು ಬಂದು ನಮ್ಮ ಹಣದಿಂದ ನಮ್ಮ ಮಕ್ಕಳಿಗೆ ತಮ್ಮ ಸಂಸ್ಕೃತಿ ಕಲಿಸಿ ಹೋಗುತ್ತಾರೆ. ಆದರೆ ನಾವು ನಮ್ಮ ಮಕ್ಕಳಿಗೆ ನಮ್ಮ ಹಣದಿಂದ ನಮ್ಮ ಸಂಸ್ಕೃತಿ ಕಲಿಸಲಾರೆವು. ಭಾರತೀಯರ ಹೊಟ್ಟೆ ಅಮೇರಿಕಾದ್ದು, ತಲೆ ಬ್ರಿಟನ್ನಿನದು. ಅಮೇರಿಕಾದ ಗೋದಿ, ಹಾಲುಪುಡಿ ಉಪಯೋಗಿಸಿ ರಕ್ತವೆಲ್ಲ ಅಮೇರಿಕಾಮಯವಾಗುತ್ತಿದ್ದರೆ ಬ್ರಿಟೀಷರ ಸಂಸ್ಕೃತಿಗೆ ಮಾರು ಹೋಗಿ ವ್ಯಕ್ತಿತ್ವವೆಲ್ಲ ಅವರ ಅನುಕರಣೆಯಲ್ಲಿ ಸಾಗಿದೆ."

"ಈ ಮಹಿಳಾ ಗೋಷ್ಠಿಯಲ್ಲಿ ನಿರ್ಧರಿಸಬೇಕಾದ ಮತ್ತೊಂದು ವಿಷಯವೆಂದರೆ, ಸಂತತಿ ನಿಯಂತ್ರಣ ನಿಯಮವನ್ನು ಎಲ್ಲಾ ಧರ್ಮಿಯರೂ ಸಮಾನವಾಗಿ ಆಚರಣೆಗೆ ತರುವಂತೆ ಮಾಡಲಿ; ಇಲ್ಲವೆ ಹಿಂದೂಗಳ ನಿಯಂತ್ರಣ ನಿಯಮ ತೆಗೆದುಹಾಕಲಿ; ಕುರಾನದಲ್ಲಿ ನಿಯಂತ್ರಣಕ್ಕೆ ಒಪ್ಪಿಗೆ ಕೊಟ್ಟಿಲ್ಲವಾದರೆ ವೇದೋಪನಿಷತ್ತು ಭಗವದ್ಗೀತೆಗಳಲ್ಲೂ ಕೊಟ್ಟಿಲ್ಲ. ಭಾರತದ ತಾಯಂದಿರ ಹೊಣೆ ಬಹಳ ಇದೆ. ಅಶ್ಲೀಲ ಸಂಸ್ಕೃತಿಗೆ ಮಕ್ಕಳನ್ನು ಪ್ರೇರೇಪಿಸದೆ ಸುಸಂಸ್ಕೃತಿಗೆ ಮುನ್ನಡೆಸಬೇಕು" ಎಂದು ಮುಂತಾಗಿ ನಾನು ಹೇಳಿದೆ. ನನ್ನ ಭಾಷಣದ ಸಂಕ್ಷಿಪ್ತ ವರದಿಯನ್ನು ವಿಶ್ವ ಹಿಂದು ಪರಿಷತ್ತು ಪ್ರಕಟಿಸಿದಂತೆ ಕೆಳಗೆ ಕೊಡಲಾಗಿದೆ.

ಧಾರವಾಡದ ಅಕ್ಕಮಹಾದೇವಿ ಆಶ್ರಮದ ಪೂಜ್ಯ ಶ್ರೀ ಮಾತೆ ಮಹಾದೇವಿಯರು ಮಾತನಾಡುತ್ತಾ, "ವಿಜ್ಞಾನದ ಬಲದಿಂದ ಮನುಷ್ಯ ಹಕ್ಕಿಯಂತೆ ಹಾರಬಲ್ಲ, ಮೀನಿನಂತೆ ಈಜಬಲ್ಲ. ಆದರೆ ಮಾನವನಾಗಿ ಬಾಳಬೇಕಾದರೆ ಬೇಕಾದದ್ದು ಧರ್ಮ. ಕೇವಲ ವಿಜ್ಞಾನವು ಈ ಕೆಲಸ ಮಾಡಲಾರದು. ವಿಜ್ಞಾನದಿಂದ ಬೇಕುಬೇಕಾದ್ದನ್ನೆಲ್ಲಾ ಪಡೆದು ಸುಖಿಸಬಹುದು; ಧರ್ಮದಿಂದೇನು? ಎಂಬ ಭಾವನೆ ಬೆಳೆದರೆ ಮಾನವ ನಾಶ ನಿಶ್ಚಿತ. ಕರ್ತವ್ಯನಿಷ್ಠೆ, ಮೈತ್ರಿ, ಸಮನ್ವಯಗಳು ಭಾರತೀಯ ಧರ್ಮದ ಮೂಲ ಸೂತ್ರಗಳು. ಬಿದ್ದವರನ್ನು ಎತ್ತಿ ಹಿಡಿಯುವುದು, ಸಮಾಜವನ್ನು ಒಟ್ಟಾಗಿ ಹಿಡಿದು ನಿಲ್ಲಿಸುವುದೇ ಧರ್ಮ. ಕೆಳಗೆ ಬಿದ್ದವರನ್ನು ಕಾಲಿನಿಂದ ತುಳಿಯುತ್ತ ಹೋಗುವ ಜಾತೀಯತೆ ಧರ್ಮವಲ್ಲ. ಪತಿತರನ್ನು ಪಾವನಗೊಳಿಸದೆ ದೂರ ಇಡುವುದು ಎಂಥ ಧರ್ಮ? ಸ್ವಧರ್ಮವನ್ನು ನಿಷ್ಠೆಯಿಂದ ಪಾಲಿಸೋಣ; ಅನ್ಯಮತಗಳನ್ನೂ ಗೌರವಿಸೋಣ. ಆದರೆ ಸ್ವಧರ್ಮತ್ಯಾಗ ಮಾಡುವುದು ಬೇಡ. ಧರ್ಮದ ಸಂಸ್ಕಾರಗಳು ಎಲ್ಲರಿಗೂ ಅವಶ್ಯವಾಗಿ ಬೇಕು. ಶೂದ್ರರು, ಸ್ತ್ರೀಯರು ಎಲ್ಲರಿಗೂ ಸಮಾನವಾಗಿ ಧರ್ಮಾಚರಣೆಗೆ ಅಧಿಕಾರವಿರಬೇಕು." ಎಂದು ಕಳಕಳಿಯಿಂದ ಕರೆ ನೀಡಿದರು. ಮುಂದುವರಿದು, ವಿದೇಶಿ ಸಂಸ್ಕೃತಿಯ ಅನಿಷ್ಟ ಪ್ರಭಾವದಿಂದ ಸ್ತ್ರೀಯರು ತಮ್ಮನ್ನು ರಕ್ಷಿಸಿಕೊಂಡು, ತಮ್ಮ ಮಕ್ಕಳನ್ನು ಕಾಪಾಡಿಕೊಳ್ಳಬೇಕೆಂದು ಎಚ್ಚರಿಸಿದರು. 'ಮನೆಗಳಲ್ಲಿ ಸೀತಾ, ಅಕ್ಕಮಹಾದೇವಿಯರ ಚಿತ್ರಗಳು ಕಂಗೊಳಿಸುತ್ತಿರಲಿ; ಸಿನಿಮಾ ತಾರೆಯರ ಚಿತ್ರಗಳೇ ತುಂಬಿದ್ದರೆ ಮಕ್ಕಳ ಮೇಲೆ ಒಳ್ಳೆಯ ಪ್ರಭಾವ ಹೇಗೆ ಮೂಡೀತು?' ಎಂದು ಪ್ರಶ್ನಿಸಿದರು. ಕ್ರೈಸ್ತರು ನಡೆಸುವ ಶಿಶುವಿಹಾರ ಮತ್ತು ಕಾನ್ವೆಂಟ್ ಶಾಲೆಗಳ ಶಿಕ್ಷಣ ಬಾಲಕಿಯರನ್ನು ಹಿಂದೂ ತತ್ವದ ಹಾಗೂ ನಾರೀತ್ವದ ಶ್ರೇಷ್ಠ ಆದರ್ಶಗಳಿಂದ ದೂರ ಮಾಡುತ್ತಿರುವ ಬಗ್ಗೆ ಎಚ್ಚರಿಸಿದರು.

ಅವರು ಪ್ರಸ್ತಾಪಿಸಿದ ವಿಚಾರಗಳು ಹಲವಾರು. ಉದಾಹರಣೆಗೆ ಸಂತತಿ ನಿಯಂತ್ರಣದಿಂದ ಹಿಂದೂ ಸಂಖ್ಯಾಬಲ ಕಡಿಮೆಯಾಗುತ್ತ ಹೋಗುತ್ತದೆ. ಮುಂದೆ ನಮ್ಮ ಸ್ಥಿತಿ ಏನಾದೀತು? ವರದಕ್ಷಿಣೆ ಮತ್ತು ಮದುವೆ, ಆಡಂಬರಗಳ ಅತಿರೇಕದಿಂದ ಸಮಾಜಕ್ಕೆ ಆಗುತ್ತಿರುವ ಹಾನಿ... ಇತ್ಯಾದಿ ಇತ್ಯಾದಿ. ತಮ್ಮ ಚಿಕ್ಕ ವಯಸ್ಸು, ವಿದ್ಯೆ ಮತ್ತು ಅಪಾರವಾದ ಉತ್ಸಾಹಗಳಿಂದ ಪ್ರೇರಿತರಾಗಿ ಅವರು ಮಾಡಿದ ದೀರ್ಘ ಭಾಷಣವನ್ನು ಅಷ್ಟೆ ಉತ್ಸಾಹದಿಂದ ಮಹಿಳಾವೃಂದ ಕೇಳಿ ಸಂತೋಷ ವ್ಯಕ್ತಪಡಿಸಿತು."

ಅನಂತರ ಮಹಾರಾಣಿಯವರು, ಶ್ರೀಮತಿ ಲಿಗಾಡೆಯವರು ಆನಂದವನ್ನು ವ್ಯಕ್ತಪಡಿಸಿದರು. ಮಹಾರಾಣಿಯವರು "ನನಗೆ ಇಂದು ಪವಾಡದರ್ಶನವಾದಂತಾಯಿತು. ನಿಮ್ಮ ಭಾಷಣ

ಆರಂಭವಾದಾಗ ಏನೋ ವಿದ್ಯುತ್ ಸಂಚಾರವಾದಂತಾಯಿತು. ನೀವು ಕನ್ನಡದಲ್ಲಿ ನುಡಿದುದರಿಂದ ಪೂರ್ಣ ಅರ್ಥವಾಗದಿದ್ದರೂ ಭಾವವನ್ನೆಲ್ಲಾ ಗ್ರಹಿಸಿದೆ. ಶ್ರೋತೃಗಳು ಉದ್ಗಾರ ತೆಗೆಯುವಾಗ ಶ್ರೀಮತಿ ಲಿಗಾಡೆಯವರನ್ನು ಕೇಳಿ ತಿಳಿದುಕೊಳ್ಳುತ್ತಿದ್ದೆ. ಸಾಕ್ಷಾತ್ ಪಾರ್ವತಿ ಎನಿಸಿತು. ನಿಮ್ಮ ವಯಸ್ಸಿಗೆ ಮೀರಿದ ವಿದ್ವತ್ತಿಗೆ ನಾನು ಮಾರುಹೋದೆ. ನೀವು ಯಾವ ಆದರ್ಶ ಹಿಡಿದಿರುವಿರಿ?" ಎಂದರು. ಅದಕ್ಕೆ ನಾನು "ಕರ್ನಾಟಕದಲ್ಲಿ 12ನೇ ಶತಮಾನದಲ್ಲಿ ವೀರವಿರಾಗಿಣಿ ಅಕ್ಕಮಹಾದೇವಿ ಆಗಿ ಹೋಗಿರುವಳು. ಆಕೆಯ ಆದರ್ಶವೇ ನನ್ನ ಆದರ್ಶ" ಎಂದೆ. "ಆ ತಾಯಿಯನ್ನು ಕುರಿತು ಯಾವ ಗ್ರಂಥಗಳಾದರೂ ಇಂಗ್ಲೀಷ್‌ದಲ್ಲಿವೆಯೇ?" ಎಂದು ಪ್ರಶ್ನಿಸಿದರು ಮಹಾರಾಣಿಯವರು. ಆಗ ನಾನು "ಈಗಂತೂ ಯಾವುವೂ ಪ್ರಕಟವಾಗಿಲ್ಲ. ಬರೆದು ಪ್ರಕಟವಾದಾಗ ತಮಗೆ ಕಳಿಸುವೆ" ಎಂದೆ. ನಮ್ಮಲ್ಲಿರುವ ಕೆಚ್ಚನ್ನು ನೋಡಿ ಮಹಾರಾಣಿಯವರು ವಿಸ್ಮಯಗೊಂಡು "ಗ್ವಾಲಿಯರಕ್ಕೆ ಬನ್ನಿ, ಅಲ್ಲಿ ತಮ್ಮ ಭಾಷಣ ಏರ್ಪಡಿಸುವೆ" ಎಂದರು.

1970ರ ದಶಕ ನಮ್ಮ ಜೀವನದಲ್ಲಿ ಬಹಳ ಮಹತ್ವಪೂರ್ಣ. ಮಹತ್ವ ತಂದುಕೊಟ್ಟ ಮೊದಲ ಘಟನೆ ಮಾಸ ಪತ್ರಿಕೆ 'ಕಲ್ಯಾಣ ಕಿರಣ'ದ ಪ್ರಾರಂಭ. ಬಾಗಲಕೋಟೆಯ ಶರಣರಾದ ಕಾಶಪ್ಪ ನಾರಾ ಅವರ ಮನೆಯಲ್ಲಿ ದಿ.14-1-1970ರಂದು (ಮಕರ ಸಂಕ್ರಾಂತಿ-ಬಸವ ಧರ್ಮ ಸಂಸ್ಥಾಪನಾ ದಿನ) ಬಿಡುಗಡೆಗೊಂಡ ಕಲ್ಯಾಣ ಕಿರಣ. ನಮ್ಮ ವಿಚಾರಧಾರೆ **(views)***ಮತ್ತು ಸುದ್ದಿ ವಿವರ***(news)***ಗಳನ್ನು ಕೊಡುವ ಮಹತ್ವಪೂರ್ಣ ಸಾಧನವಾಗಿ ಕೆಲಸ ಮಾಡಿತು. ಧರ್ಮಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳನ್ನು ಇನ್ನಿತರ ಪತ್ರಿಕೆಗಳು ಪ್ರಕಟಿಸುವುದಿಲ್ಲ. ನಮ್ಮ ಅಂತರಂಗವನ್ನು ತೆರೆದಿಡಲು ಕಲ್ಯಾಣ ಕಿರಣ ಒಂದು ಉತ್ತಮ ಸಾಧನವಾಯಿತು. ಪ್ರತಿ ತಿಂಗಳೂ ಪತ್ರಿಕೆಯನ್ನು ಹೊರತರಲೇಬೇಕಾದ ಒತ್ತಡದಿಂದ ಸಾಕಷ್ಟು ಸಾಹಿತ್ಯ ರಚನೆಯಾಯಿತು. 'ನುಡಿ ನೈವೇದ್ಯ' ಎಂಬ ಶೀರ್ಷಿಕೆಯಲ್ಲಿ ಅನೇಕ ಕವನಗಳು ಹೊರಬಂದವು. ದೃಷ್ಟಾಂತ ಕಥೆಗಳು, ಸ್ಫುರಣ-ಕಿರಣ, ವಚನ-ನವನೀತ ಮುಂತಾದ ವೈವಿಧ್ಯಪೂರ್ಣ ಸಾಹಿತ್ಯ ಸೃಷ್ಟಿಯಾಯಿತು. ಎಲ್ಲಕ್ಕಿಂತ ಮಿಗಿಲಾಗಿ ನಾವು ಜೀವಂತವಿದ್ದೇವೆ ಎಂಬ ವಾರ್ತೆಯನ್ನು ಕಲ್ಯಾಣ ಕಿರಣ ದೃಢಪಡಿಸುತ್ತಿತ್ತು. ಹೀಗೆಂದರೆ ನಿಮಗೆ ಆಶ್ಚರ್ಯವಾಗಬಹುದಲ್ಲವೆ ? ಹೌದು. ಅದು ಸಂಘರ್ಷದ ಕಾಲ. ಲಿಂಗಾಯತ ಸಮಾಜದೊಳಗಣ ಪುರೋಹಿತಶಾಹಿಯ ಜೊತೆ ಸಂಘರ್ಷ ನಡೆದಿತ್ತು. ಪ್ರವಚನದ ಪ್ರಭಾವ ಅದ್ಭುತವಾಗಿ ಆದರೂ ನಾವು ಒಂದು ಊರಲ್ಲಿ ಪ್ರವಚನ ಮಾಡಿ ಮುಗಿಸಿ ಇನ್ನೊಂದು ಊರಿಗೆ ಹೋಗುತ್ತಿದ್ದಂತೆಯೇ ಸಂಪ್ರದಾಯವಾದಿಗಳು ಬಗೆಬಗೆಯ ಸುದ್ದಿಯನ್ನು ಹಬ್ಬಿಸುತ್ತಿದ್ದರು. "ಅವರು ಸತ್ತೇ ಹೋದರು, ಓಡಿ ಹೋದರು, ಆ ಊರವರು ಓಡಿಸಿಬಿಟ್ಟರು"-ಹೀಗೆ ವದಂತಿಗಳು ರೆಕ್ಕೆ-ಪುಕ್ಕ ಇಲ್ಲದೆ ಹಾರಾಡುತ್ತಿದ್ದವು. ಕಲ್ಯಾಣ ಕಿರಣ ಪತ್ರಿಕೆಯು ಪ್ರವಚನ ಮಾಡಿದ ಜಾಗದಲ್ಲೆಲ್ಲ ಹೋಗುತ್ತಿದ್ದುದರಿಂದ ವದಂತಿಗಳಿಗೆ ಪೂರ್ಣವಿರಾಮ ಬೀಳುತ್ತಿತ್ತು, ಅಭಿಮಾನಿಗಳ ಸಂಖ್ಯೆಯೂ ವೃದ್ಧಿಯಾಯಿತು. ಆರಂಭದಲ್ಲಿ ವಾರ್ಷಿಕ ಚಂದಾ 10ರೂ. ಆಜೀವ ಸದಸ್ಯತ್ವ 100 ರೂ. ಇತ್ತು. ನಂತರ 150, 200 ಹೀಗೆ ಏರುತ್ತ ಬಂದು 1000ರೂ ಆಯಿತು. ಆದರೆ ನಾವು 100 ರೂ ಕೊಟ್ಟವರಿಂದ ಆಜೀವ ಸದಸ್ಯರಾದ ಎಲ್ಲರಿಗೂ 40 ವರ್ಷಕಾಲ ಪತ್ರಿಕೆ ಕಳಿಸಿದೆವು. ಇದರಿಂದ ಸಂಸ್ಥೆಗೆ ಬಹಳಷ್ಟು ನಷ್ಟವಾಗುತ್ತಿತ್ತಾದರೂ ಪ್ರಚಾರ ದೃಷ್ಟಿಯಿಂದ ಕಳಿಸುತ್ತಿದ್ದೆವು. ಬೆಂಗಳೂರು ರಾಷ್ಟ್ರೀಯ ಬಸವ ದಳದವರು ಒಂದು ಸಭೆ ಸೇರಿ ಹಿಂದೆ ಆಜೀವ ಸದಸ್ಯರಾದವರಿಗೆ ಪತ್ರಿಕೆ ನಿಲ್ಲಿಸಬೇಕೆಂದು; ಅದಕ್ಕೆ ಮೊದಲು ಅವರಿಗೆ 3-4 ತಿಂಗಳ ಕಾಲ ಸೂಚನೆ ನೀಡಬೇಕೆಂದು ನಿರ್ಧರಿಸಿದರು. ದಿನದಿನಕ್ಕೂ ಬೆಲೆ ಏರುತ್ತಿರುವ ಕಾಲದಲ್ಲಿ ಆಜೀವ ಸದಸ್ಯತ್ವ ಕಲ್ಪನೆಯೇ ತಪ್ಪು ಎಂದು ನಿರ್ಣಯಿಸಿ ವಾರ್ಷಿಕ ಚಂದಾ 200ರೂ, ಪಂಚವಾರ್ಷಿಕ ಚಂದಾ 1000ರೂ. ಮಾಡಿದರು. ಈ ನಿರ್ಣಯದಂತೆ ಸುಮಾರು 41 ವರ್ಷಗಳಿಂದ ಕಳಿಸುತ್ತಿದ್ದ ಆಜೀವ ಸದಸ್ಯರಿಗೆ ಇದೇ ಜೂನ್ ಸಂಚಿಕೆಯಿಂದ ನಿಲ್ಲಿಸಲಾಯಿತು.*

ಏಪ್ರಿಲ್ ತಿಂಗಳ 21ನೇ ತಾರೀಖು ದವನದ ಹುಣ್ಣಿಮೆ. ನಾನು ಬಸವ ಕಲ್ಯಾಣದಲ್ಲಿ ಪ್ರತಿಜ್ಞೆಗೈದುದನ್ನು

ಕಾರ್ಯರೂಪಕ್ಕೆ ತರಬೇಕಾಗಿತ್ತು. ಅದಕ್ಕಾಗಿ ಉತ್ತಮ 'ಪೀಠ' ಒಂದನ್ನು ರಚಿಸಬೇಕೆಂದು ಶಿಲ್ಪಿಯೋರ್ವರನ್ನು ಕರೆದು, ರೂಪುರೇಷೆ ಕೊಟ್ಟಾಗ ಅದರ ಮೌಲ್ಯ ಒಂದೂವರೆ ಸಾವಿರವಾಗಬಹುದೆಂದು ಅವರು ಹೇಳಿದರು. ಆಗ ನಾನು ಗುರುಗಳಿಗೆ "ಹೋಗಲಿ ಬಿಡಿ; ಮುಂದೆ ನೋಡೋಣ; ಈಗೆಲ್ಲಿ ಅಷ್ಟು ದುಡ್ಡಿನ ಅನುಕೂಲ" ಎಂದು ನುಡಿದೆ. ಸುಮ್ಮನಾದರು. ಶಿಲ್ಪಿಯವರೂ ಹೊರಟುಹೋದರು. ಕೆಲವೇ ನಿಮಿಷದಲ್ಲಿ ಶ್ರೀ ಬಸವರಾಜ ಸಾಂಬ್ರಾಣಿಯವರು ಆಗಮಿಸಿದರು. "ನೋಡಿ ಸಾಂಬ್ರಾಣಿಯವರೇ, ಮಹಾತಾಯಿ ಅಕ್ಕನ ಹೆಸರಿನ ಪೀಠ ಒಂದನ್ನು ಮಾಡಬೇಕೆಂದರೆ ಆರ್ಥಿಕ ಅನಾನುಕೂಲತೆಯಿಂದ ಸಾಧ್ಯವಾಗುತ್ತಿಲ್ಲ. ಈಗ ಆ ವಿಚಾರ ಕೈಬಿಡಬೇಕಾಗಿದೆ..."

"ಇಲ್ಲ... ತಾಯಿಯವರೆ, ನನ್ನ ತಾಯಿ ಗೌರಮ್ಮನವರು ಬಹಳ ದಿನಗಳಿಂದ ಕಾಶೀಯಾತ್ರೆ ಮಾಡಬೇಕೆಂದು ಇಚ್ಛಿಸುತ್ತಿದ್ದರು. ಅವರ ಆಶೆಯನ್ನು ಪೂರ್ತಿ ಮಾಡಲೇಬೇಕೆಂದು ನಾನು ಅದಕ್ಕಾಗಿ ಪ್ರತಿ ತಿಂಗಳ ಲಾಭದಲ್ಲಿ ಸ್ವಲ್ಪ ಹಣ ತೆಗೆದಿಡುತ್ತಿದ್ದೆ. ಈಗವರು ತುಂಬಾ ವಯಸ್ಸಾಗಿ ಅಶಕ್ತರಾಗಿರುವುದರಿಂದ ಎಲ್ಲೂ ಪ್ರವಾಸ ಮಾಡಲು ಸಾಧ್ಯವಾಗದು. ಅದೇ ದುಡ್ಡಿನಿಂದ ನನ್ನ ತಾಯಿಯ ಸೇವೆಯನ್ನು ಮಹಾತಾಯಿಯ ಸೇವೆಮಾಡುವುದರ ಮೂಲಕ ಮಾಡುವೆನು. ಎಷ್ಟೇ ಆಗಲಿ ತಮ್ಮ ಸಂಕಲ್ಪ ಸಿದ್ಧಿಯಾಗಲೇಬೇಕು. ತಮ್ಮ ಮಠಕ್ಕೆ ಪಾದದರ್ಶನಕ್ಕೆ ಬರಲಾರಂಭವಾದಾಗಿನಿಂದ ನನ್ನ ವ್ಯಾಪಾರದಲ್ಲಿ ಶಕ್ತಿ ಸಂಚಾರವಾಗಹತ್ತಿದೆ. ತುಂಬಾ ಗಿರಾಕಿಗಳು ಬರುತ್ತಾರೆ. ಈ ಲಾಭವೆಲ್ಲಾ ಮಹಾತಾಯಿಯ ದಯೆ ಎಂದೇ ಅರ್ಪಿಸುತ್ತೇನೆ" ಎಂದು ಶ್ರೀ ಸಾಂಬ್ರಾಣಿಯವರು ಉದಾರ ಹೃದಯರಾಗಿ ಮುಂದೆ ಬಂದರು. ಹೀಗೆ ಇರುವಿಕೆಯಲ್ಲಿ ಕೊಡುವಿಕೆಯಲ್ಲಿ, ಎರಡರಲ್ಲೂ ಅವರು ಶ್ರೀಮಂತರು. ಪೀಠದ ರೂಪು ರೇಷೆಯೊಡನೆ ಪೀಠ ತಯಾರಿಕೆಗೆ ಹೇಳಲಾಯಿತು.

ಏಪ್ರಿಲ್ ತಿಂಗಳ ದಿನಾಂಕ ಒಂದರಿಂದ 8ರ ವರೆಗೆ ರೋಣ ತಾಲೂಕಿನ ಜಕ್ಕಲಿಯಲ್ಲಿ ಪ್ರವಚನ ಮಾಡಿದೆ. ಇದರ ಉಪಯೋಗ ಪಡೆದು ಅಬ್ಬಿಗೇರಿ, ಬೂದಿಹಾಳು ಇತ್ಯಾದಿ ಅನೇಕ ಗ್ರಾಮದವರು ಅಮೃತವನ್ನೀಂಟಿದಷ್ಟು ಧನ್ಯರಾದರು. ಶ್ರೀ ವೀರನಗೌಡ ಪಾಟೀಲರು, ಡಾ॥ ಆದಿಯವರು ಇವರ ನೇತೃತ್ವದಲ್ಲಿ ಪ್ರವಚನ ಚೆನ್ನಾಗಿ ಸಾಗಿತು. ಎಲ್ಲೆಲ್ಲೂ ಒಂದೇ ಉದ್ಗಾರ; "ಸಣ್ಣ ವಯಸ್ಸಿನ ಮಾತಾಜಿಯವರು ನಮಗೆಲ್ಲ ತಿಳಿಯುವಂತೆ ಬೋಧೆ ಮಾಡುತ್ತಾರೆ. ಪಂಡಿತರು, ಪಾಮರರು, ಕಾಯಕಜೀವಿಗಳು ವಿದ್ವಾಂಸರು ಎಲ್ಲರಿಗೂ ಬೇಕಾಗುವಂತೆ, ಅವರವರ ಬುದ್ಧಿ, ಮನ, ಭಾವಗಳು ತಣಿಯುವಂತೆ ಪ್ರವಚನ ಮಾಡುತ್ತಾರೆ." ನಾವು ಪ್ರವಚನ ಮಾಡಿದ ಎಲ್ಲ ಊರುಗಳು ನಮಗೆ ತವರು ಮನೆಗಳೇ! ಪ್ರವಚನ ನಂತರ ಅವರನ್ನಗಲುವಾಗ ಜನ ಅತ್ತು ಬೀಳ್ಕೊಡುತ್ತಾರೆ; ಕರುಳ ಕುಡಿ ಮಗಳನ್ನು ಕಳಿಸುವಂತೆ.

(ಮುಂದುವರಿಯುವುದು.......)

ವಧು ವರಾನ್ವೇಷಣೆ ವಿಭಾಗ

1. ಡಾ॥ ಎಮ್. ಚಂದ್ರಶೇಖರ್, MBBS, MD, (Phy), ತಂದೆ-ಎಮ್ ಚನ್ನಪ್ಪ, ವಾಸ-ಮಿಲ್ಲರ್ ಪೇಟೆ, ಬಳ್ಳಾರಿ, ಜನ್ಮ ದಿನಾಂಕ : 29-6-1978, Thursday 12.45 pm, Height-6'-0, Fair Cell No. 99862 50303 / 88846 51148. ವಧು : MBBS ಆಗಿರಬೇಕು.
2. ಪ್ರತಿಭಾ. ತಂದೆ ಅಜ್ಜಣ್ಣ, ತಾಯಿ. ಸಾವಿತ್ರಮ್ಮ ಊರು ಚಳ್ಳಕೆರೆ. ಜನ್ಮ ದಿನಾಂಕ-1982 ಶಿಕ್ಷಣ : ಬಿ.ಎ, ದೂರವಾಣಿ : 08195-222775, 94814 15427. ಬಸವ ತತ್ತ್ವದ ವರ. ಸರಕಾರಿ ನೌಕರಿ ಅಥವಾ ಬಿಜಿನೆಸ್

ವಧು-ವರರ ವಿವರಗಳನ್ನು ಸತತವಾಗಿ ಮೂರು ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು. ಆದ್ದರಿಂದ ವಧು-ವರಾನ್ವೇಷಿಗಳಾದವರು ಇನ್ನು ಮುಂದೆ ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ 500/-ರೂ.ಗಳ ಎಂ.ಓ/ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್ ತೆಗೆದು ವಿವರಗಳೊಡನೆ ಕಳಿಸಬೇಕಾಗಿ ಕೋರಿಕೆ. ಹಣ ಕಳಿಸದಿದ್ದರೆ ವಿವರಗಳನ್ನು ಪ್ರಕಟಿಸಲಾಗುವುದಿಲ್ಲ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ :
ಶರಣ. ಚಂದ್ರಮೌಳಿ ಎಮ್ಮಿಗನೂರು, ದೂ. 9448466805

108 ಅಡಿ ಬಸವ ಪುತ್ಥಳಿಯ ಅನಾವರಣ 2012, ಅಕ್ಟೋಬರ್ 28ರಂದು

ಬೀದರ್ ಜಿಲ್ಲೆಯ ಬಸವ ಕಲ್ಯಾಣದ ಬಸವ ಮಹಾಮನೆಯ ಶರಣ ಶೈಲದ ಮೇಲೆ ರೂಪಗೊಳ್ಳುತ್ತಿರುವ ಶರಣಲೋಕದಲ್ಲಿ ನಿರ್ಮಾಣವಾಗುತ್ತಿರುವ 108ಅಡಿ ಬಸವ ಪುತ್ಥಳಿಯ ಕಾರ್ಯ ಮುಗಿಯುತ್ತ ಬಂದಿದ್ದು ಇದೇ 2012ರ ಅಕ್ಟೋಬರದಲ್ಲಿ ಅನಾವರಣಗೊಳ್ಳುತ್ತಲಿದೆ. ಅಕ್ಟೋಬರ್ 27,28 ಮತ್ತು 29ರಂದು 11ನೆಯ ಕಲ್ಯಾಣ ಪರ್ವವು ಬಸವ ಕಲ್ಯಾಣದಲ್ಲಿ ನಡೆಯುತ್ತಲಿದ್ದು ದಿ.28ರಂದು ಬೃಹತ್ ಬಸವ ಪುತ್ಥಳಿಯ ಅನಾವರಣವು ಜರುಗುವುದು. ಒಂದೂವರೆ ಕೋಟಿಯ ಅಂದಾಜಿನೊಡನೆ ಪ್ರಾರಂಭವಾದ ಈ ಯೋಜನೆಗೆ ಈಗಾಗಲೇ ಖರ್ಚು ಸುಮಾರು ನಾಲ್ಕು ಕೋಟಿ ದಾಟಿದೆ. ಮುಗಿಯುವ ಹಂತದಲ್ಲಿ ಹೆಚ್ಚಿನ ಖರ್ಚು ಇದ್ದು ಸದ್ಭಕ್ತರು ಉದಾರವಾಗಿ ಧನ ಸಹಾಯ ಮಾಡಬೇಕೆಂದು ಕೋರುತ್ತೇವೆ. ವಾಗ್ದಾನ ಮಾಡಿದವರು ಬೇಗನೆ ತಮ್ಮ ವಾಗ್ದಾನವನ್ನು ಪೂರೈಸಬೇಕೆಂದು ಸೂಚಿಸುತ್ತೇವೆ.

ಜೀವನ ಚರಿತ್ರೆ ಚಿತ್ರಣ

ಗುರು ಬಸವ ಮೂರ್ತಿಯ ಕೆಳಗಿನ ಪೀಠದಲ್ಲಿ 24 ಅಡಿ ಎತ್ತರದ ಎರಡು ಅಂತಸ್ತಿನ ಕಟ್ಟಡವಿದ್ದು ಅದರಲ್ಲಿ ಗುರು ಬಸವಣ್ಣನವರ ಸಮಗ್ರ ಜೀವನದ ಪರಿಚಯ ಮಾಡಿಕೊಡಲಾಗುವುದು. ಅವರ ಜೀವನದ 32 ಪ್ರಸಂಗಗಳನ್ನು ಆಯ್ಕೆ ಮಾಡಿದ್ದು ಅವುಗಳ **3D** ಚಿತ್ರಣ ಮಾಡಲಾಗುವುದು. ಒಂದೊಂದು ಚಿತ್ರಣಕ್ಕೆ ಒಂದೂವರೆ ಲಕ್ಷ ರೂ.ಗಳ ವೆಚ್ಚವಾಗುತ್ತಿದ್ದು ಕೊಡುವ ಧನ ದಾಸೋಹಿಗಳ ಹೆಸರಿನ ನಾಮಫಲಕವನ್ನು ಹಾಕಿ, ಅವರ ಭಾವ ಚಿತ್ರವನ್ನು ಆ ಚಿತ್ರದ ಕೋಣೆಯ ಮುಂಭಾಗದಲ್ಲಿ ಪ್ರದರ್ಶಿಸಲಾಗುವುದು. ಈಗಾಗಲೇ ಆರೇಳು ದಾನಿಗಳು ಕೊಟ್ಟಿದ್ದು ಇನ್ನೂ ಬಹಳಷ್ಟಕ್ಕೆ ಅವಕಾಶವಿದೆ. ಆದ್ದರಿಂದ ಈ ಅಪರೂಪದ ಕೊಡುಗೆಗೆ ಮುಂದಾಗಬೇಕೆಂದು ಸೂಚಿಸುತ್ತೇವೆ.

ಸಾಲ ರೂಪದಲ್ಲಿ ಸಹಾಯ

ಮುಗಿಯುವ ಹಂತದಲ್ಲಿ ಖರ್ಚು ಬಹಳವಿದ್ದು ದೇಣಿಗೆಯೇ ಅಲ್ಲದೆ ಸಾಲ ರೂಪದಲ್ಲಿಯೂ ಸಹಾಯ ಮಾಡಬಹುದು. ಬಡ್ಡಿ ರಹಿತವಾಗಿ, ಬಡ್ಡಿ ಸಹಿತವಾಗಿ ಸಾಲವನ್ನು ಕೊಡಬಹುದು. ಪುನಃ ಅವರಿಗೆ ಅಗತ್ಯಬಿದ್ದಾಗ ವಾಪಸ್ಸು ಮಾಡಲಾಗುವುದು. ಬಡ್ಡಿ ಸಹಿತವಾಗಿ ಸಾಲ ಕೊಟ್ಟವರಿಗೆ 12%ಬಡ್ಡಿಯನ್ನು ಕೊಡಲಾಗುವುದು. ಸಹಕರಿಸುವಿರಾಗಿ ನಿರೀಕ್ಷಿಸುತ್ತೇವೆ.

ಈ ಭವ್ಯ ದಿವ್ಯ ಪುತ್ಥಳಿಯ ನಿರ್ಮಾಣಕ್ಕೆ
ಧನ ಸಹಾಯ ಮಾಡಲು ಕೆಳಗಿನಂತೆ ಅವಕಾಶವಿದೆ.

1. 11,000 (ಹನ್ನೊಂದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಡೋನರ್ ಬೋರ್ಡ್, ದಾನಿಗಳ ಫಲಕದಲ್ಲಿ ಬರೆಸಲಾಗುವುದು.
2. 25,000 (ಇಪ್ಪತ್ತೈದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಸಾಮೂಹಿಕವಾಗಿ ಗ್ರಾನೈಟ್‌ನಲ್ಲಿ ಕೆತ್ತಿಸಲಾಗುವುದು.
3. 50,000 (ಐವತ್ತು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಶಿಲೆಯಲ್ಲಿ ಕೆತ್ತಿಸಿ, ಪುತ್ಥಳಿಯ ಕೆಳಗಿನ ಪೀಠದ ಮೂರು ಬದಿಗಳಲ್ಲಿ (ಹಿಂದೆ, ಎಡ, ಮತ್ತು ಬಲ ಪಕ್ಕ) ಬರುವ ಸ್ಥಳಗಳಲ್ಲಿ ಒಂದು ಕಡೆ ಹಾಕಿಸಲಾಗುವುದು.
4. 1,00,000 (ಒಂದು ಲಕ್ಷ)ರೂ. ಮತ್ತು ಮೇಲೆ ಕೊಟ್ಟವರ ಹೆಸರನ್ನು ಕಪ್ಪು ಗ್ರಾನೈಟ್ ಶಿಲೆಯಲ್ಲಿ ಕೆತ್ತಿಸಿ, ಪುತ್ಥಳಿಯ ಕೆಳಗಿನ ಪೀಠದ ಮೂರು ಬದಿಗಳಲ್ಲಿ ಬರುವ ಸ್ಥಳಗಳಲ್ಲಿ ಒಂದು ಕಡೆ ಒಳಗಿನ ಮ್ಯೂಸಿಯಮ್‌ನಲ್ಲಿ ಹಾಕಿಸಲಾಗುವುದಲ್ಲದೆ ಅವರ ಒಂದು ಫೋಟೋ ಸಹ ಪ್ರದರ್ಶಿಸಲಾಗುವುದು.

80G ಇನ್ ಕಮ್ ಟ್ಯಾಕ್ಸ್ ರಿಯಾಯಿತಿ ಬೇಕೆನ್ನುವ ದಾನಿಗಳು ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಹೆಸರಿನಲ್ಲಿ ಬ್ಯಾಂಕ್ ಡ್ರಾಫ್ಟ್ / ಚೆಕ್ ಕಳಿಸಬೇಕೆಂದು ತಿಳಿಸುತ್ತಾ ಉದಾರ ಹೃದಯಿಗಳಾಗಿ ಬಸವ ಪುತ್ಥಳಿಯ ನಿರ್ಮಾಣಕ್ಕೆ ಧನ ಸಹಾಯ ಮಾಡಬೇಕೆಂದು ಕೋರುತ್ತೇವೆ.

ಬಸವ ಧರ್ಮ ಪೀಠ (ರಿ.)
ಬಸವ ಮಂಟಪ, 20ನೆಯ ಮುಖ್ಯರಸ್ತೆ
ರಾಜಾಜಿನಗರ, 2ನೆಯ ಬ್ಲಾಕ್
ಬೆಂಗಳೂರು - 560 010
ದೂ : 9448137508 / 9663385657

ಬಸವ ಧರ್ಮ ಪೀಠ (ರಿ.)
ಬಸವ ಮಹಾಮನೆ, ಮುಖ್ಯ ರಸ್ತೆ
ಬಸವ ಕಲ್ಯಾಣ- 585 327
ತಾ-ಬಸವಕಲ್ಯಾಣ ಜಿಲ್ಲೆ -ಬೀದರ್
ದೂ : 94487 32456/94804 97346

ಬಸವ ವಚನಾಮೃತ

- ಮಾತಾಜಿ

930. ಪ್ರಾಣಲಿಂಗ ಪೂಜೆ

ಜಲವ ನುಂಗಿತ್ತಯ್ಯಾ ಎನ್ನ ಕರವು,
ಪತ್ರೆಯ ನುಂಗಿತ್ತಯ್ಯಾ ಎನ್ನ ಶಿಖೆ;
ಎನ್ನಯ ಮಂತ್ರ ಭಿನ್ನವಾಯಿತ್ತು!
ಇಂತೀ ದ್ವಿವಿಧ ಒಂದಾಗದ ಮುನ್ನ
ಲಿಂಗದೇವರು ಪೂಜೆಗೊಂಡರು. –ಬವದೀ. 932

ಅಷ್ಟವಿಧಾರ್ಚನೆಯುಕ್ತವಾದ ಇಷ್ಟಲಿಂಗ ಪೂಜೆಯನ್ನು ಮಾಡುತ್ತ ಮುಂದೆ ಪ್ರಾಣಲಿಂಗದ ಅನುಸಂಧಾನಕ್ಕೆ ಸಾಧಕ ಏರಿದಾಗ ಭಕ್ತಿಯು ಪರಾಕಾಷ್ಠ ಸ್ಥಿತಿಯನ್ನು ತಲುಪುತ್ತದೆ. ಆಗ ಕೈ ಮಜ್ಜನವನ್ನು ಮರೆಯುತ್ತದೆ. ಜ್ಞಾನವೂ ಪರಾಕಾಷ್ಠ ಸ್ಥಿತಿಯನ್ನು ತಲುಪಿ ಶಿಖೆಯು ಪತ್ರೆ-ಪುಷ್ಪಗಳನ್ನು ಏರಿಸಲು ಮರೆಯುತ್ತದೆ. ಈವರೆಗೂ ಹೇಳುತ್ತದ್ದ ಶಾಬ್ದಿಕ ಮಂತ್ರ ನಿಂತು ಹೋಗಿ ಅದರ ಉಚ್ಚಾರ ಮಾನಸಿಕವಾಗುತ್ತದೆ. ಎರಡು ತತ್ತ್ವಗಳಾದ ಅಂಗ-ಲಿಂಗಗಳು ಒಂದಾಗುವ ಮುನ್ನ ಲಿಂಗದೇವನ ಪೂಜೆ ನಡೆಯುತ್ತದೆ. ನಂತರ ಆ ಪೂಜೆಯು ನಿರಾಕಾರಗೊಳ್ಳುತ್ತದೆ.

ಇಲ್ಲಿ ಒಂದು ಎಚ್ಚರಿಕೆ ಅಗತ್ಯ. ಅವಧೂತ ಮಾರ್ಗಿಗಳು ಮತ್ತು ವಾಗದ್ವೈತಿಗಳು ಅಹಂ ಬ್ರಹ್ಮಾಸ್ಮಿಯನ್ನು ಪ್ರತಿಪಾದಿಸುತ್ತ ಪೂಜೆ-ಪ್ರಾರ್ಥನೆ ಇತ್ಯಾದಿ ಕ್ರಿಯೆಗಳು ಅಗತ್ಯವಿಲ್ಲ. ಅವು ಆರಂಭದ ದಿನಗಳಲ್ಲಿ ಮಾತ್ರ ಅಗತ್ಯ ಎನ್ನುತ್ತಾರೆ. ಅದಕ್ಕೆ ಅವರು ಆಟದ ಕಟ್ಟಿಗೆ ಕುದುರೆಯನ್ನು ಹತ್ತಿ ಮಕ್ಕಳು ಆಟವಾಡುತ್ತಾರೆ. ನಿಜವಾದ ಕುದುರೆ ಹತ್ತಲು ಬಂದ ಪ್ರೌಢರು ಆಟದ ಕುದುರೆ ಹತ್ತುವುದಿಲ್ಲ ಎಂದು ವಾದಿಸುತ್ತಾರೆ. ಇಷ್ಟಲಿಂಗಾರ್ಚನೆ (ಅಧ್ಯಾತ್ಮಿಕ) ಟೆಲಿವಿಷನ್ ನೋಡಿದಂತೆ. ಒಂದು ದಿನ ನೋಡಿ ಟೆಲಿವಿಷನ್ ಅನ್ನು ಬೀಸಾಡುವುದಿಲ್ಲ. ನೋಡಬೇಕೆನಿಸಿದಾಗಲೆಲ್ಲ ಸ್ವಿಚ್ ಹಾಕಿಕೊಳ್ಳಲಾಗುವುದು. ಹಾಗೆ ಶರಣರು ಪೂಜೆ ಆರಂಭಿಸಿ ಅದರಲ್ಲಿ ತನ್ಮಯರಾಗಿ ಮೈಮರೆಯುವವರೇ ವಿನಾ ಪೂಜೆ ಬಿಡುವುದಲ್ಲ. ಜೀವನದ ಕಡೆಯ ಕ್ಷಣದವರೆಗೂ ಇಷ್ಟಲಿಂಗಾರ್ಚನೆ ಮಾಡುವರು.

931. ದೇವರ ಬೇಡಲು ಮರೆದರು

ಎಲ್ಲವ ಬೇಡಿದರೆಮ್ಮವರು,
ಒಂದ ಬೇಡ ಮರೆದರಯ್ಯಾ,
ಮರ್ತ್ಯಲೋಕದ ಗಣಂಗಳು ಒಂದ ಬೇಡ ಮರೆದರು.
ಲಿಂಗದೇವಾ, ನಿನ್ನ ಬೇಡ ಮರೆದರು. –ಬವದೀ. 933

ಧಾರ್ಮಿಕ ಜನರೆಲ್ಲ ಅಧ್ಯಾತ್ಮ ಜೀವಿಗಳಲ್ಲ. ಸಾಮಾನ್ಯವಾಗಿ ಭಕ್ತಿಯನ್ನು ಮಾಡುವವರೆಲ್ಲ ಫಲಾಕಾಂಕ್ಷಿಗಳಾಗಿ ಧನ, ಕನಕ, ವಸ್ತು, ವಾಹನ, ಪತಿ, ಪತ್ನಿ, ಮಕ್ಕಳು, ಆಸ್ತಿ-ಪಾಸ್ತಿ ಮುಂತಾದುವನ್ನು ದೇವರಲ್ಲಿ ಬೇಡುವರು. "ಮರ್ತ್ಯಲೋಕದ ಸಾಮಾನ್ಯ ಭಕ್ತರು (ಗಣಂಗಳು) ದೇವರ ಅನುಗ್ರಹ, ದೇವರನ್ನೇ ಬೇಡುವುದನ್ನು ಮರೆತು ಬರಿಯ ಲೌಕಿಕ ವಸ್ತುಗಳನ್ನೇ ಬೇಡುವರು." ಎಂದು ಗುರು ಬಸವಣ್ಣನವರು ವಿಷಾದಿಸುತ್ತಾರೆ. ಸಾಮಾನ್ಯ ಜನರ (ಗಣಂಗಳು) ಭಕ್ತಿ ಇಂತಹುದಾದರೆ ಶರಣರು ದೇವರ ಕೃಪೆಗಾಗಿ, ಅವನ ಸಾಮರಸ್ಯಕ್ಕಾಗಿ ಹಂಬಲಿಸುವರು.

932. ವ್ಯರ್ಥವಾದ ವ್ಯವಹಾರ

ಭಿತ್ತಿಯಿಲ್ಲದ ಚಿತ್ತಾರದಂತೆ
ಭಕ್ತಿಯಿಲ್ಲದ ಪ್ರಮಥನಾಗಿ ಎಂದಿಪ್ಪೆನಯ್ಯಾ?
ಸತ್ಯವಿಲ್ಲದ ಶರಣನಾಗಿ ಎಂದಿಪ್ಪೆನಯ್ಯಾ?
ಗರಿಯಿಲ್ಲದ ಕೋಲಿನಲ್ಲಿ ಉದ್ದರೆಯನಿಕ್ಕಿದ
ಭಂಡದ ಹರದನಂತಾದೆನಯ್ಯಾ ಲಿಂಗದೇವಾ! –ಬವದೀ. 934

ಭಿತ್ತಿ(ಗೋಡೆ) ಇಲ್ಲದೆ ಚಿತ್ತಾರವನ್ನು ಬರೆಯಲು ಸಾಧ್ಯವಿಲ್ಲ. ಕಲಾವಿದನ ಕಲ್ಪನಾ ಭಿತ್ತಿಯಲ್ಲಿ ಮಾತ್ರ ಕಾಲ್ಪನಿಕ ಚಿತ್ತಾರ ಮೂಡಿರಲು ಸಾಧ್ಯ. ಹಾಗೆ ನನ್ನ ಮನಸ್ಸು ಅಂಥ ಸ್ಥಿತಿಗೆ ಎಂದು ಏರುವುದು. ಸಾಕಾರ ಭಕ್ತಿಗೆ ಅತೀತವಾದ ಪ್ರಮಥನಾಗಿ ಎಂದಿರುವೆನು. ? ಪರಮ ಸತ್ಯವನ್ನರಿತ ಶರಣನಾಗಿ ಎಂದಿರುವೆನೊ ? ಅಳತೆಯ ಗುರುತು ಇಲ್ಲದ ಕೋಲಿನಲ್ಲಿ ಧಾನ್ಯವನ್ನು ಅಳೆದು, ಉದ್ಧರಿಯಾಗಿ ಧಾನ್ಯವನ್ನು ಕೊಟ್ಟ ಧಾನ್ಯದ ವ್ಯಾಪಾರಿಯಂತೆ ನನ್ನ ಭಕ್ತಿಯು ವ್ಯರ್ಥವಾಗಿ, ಸಮಯ ಹರಣವಾಗುತ್ತಿದೆ ಅಷ್ಟೆ.

933. ತಿದ್ದಬಾರದ ಡೊಂಕು

ಆಯತ ಒಂದೆಡೆಯಲ್ಲಿ ತೆರನನರಿಯರಾಗಿ
ನೋಡಬಾರದು, ನೋಡಿ ನುಡಿಸಬಾರದು.
ತಿದ್ದಬಾರದ ಡೊಂಕು ಲಿಂಗದೇವನ ಭಕ್ತಿ! –ಬವದೀ. 935

ಇಷ್ಟಲಿಂಗವನ್ನು ಆಯತ ಮಾಡಿಕೊಳ್ಳುವವರು ಬಹಳ ಜನ, ಆದರೆ ಅದರ ಮರ್ಮವನ್ನೇ ಅರಿಯರು. ದೃಷ್ಟಿಯೋಗಕ್ಕೆ ಸಾಧನವಾದ ಇಷ್ಟಲಿಂಗವನ್ನು ಹೇಗೆ ನೋಡಬೇಕು ಎಂದು ತಿಳಿಯರು ; ನೋಡಿ, ಲಿಂಗದೇವನೊಡನೆ ಹೇಗೆ ಮಾತನಾಡಬೇಕು ಎಂಬುದನ್ನು ಮೊದಲೇ ಅರಿಯರು. ಲಿಂಗದೇವನೊಡನೆ ಹೇಗೆ ಸಾಮರಸ್ಯ ಹೊಂದಬೇಕೆಂದು ಅರಿಯದ ಭಕ್ತರದು ತಿದ್ದಬಾರದ ಡೊಂಕು. (ಏನು ಮಾಡುವುದು? ಸಹಿಸಿಕೊಳ್ಳಲೇಬೇಕು.)

934. ಶರಣನ ನಿಲುವು

ಸತ್ತು ಹುಟ್ಟುವನಲ್ಲ, ಸಂದೇಹ ಸೂತಕಿಯಲ್ಲ,
ಆಕಾರ ನಿರಾಕಾರ ನೋಡಯ್ಯಾ!
ಕಾಯವಂಚಕನಲ್ಲ, ಜೀವ ವಂಚಕನಲ್ಲ
ನಿರಂತರ ಸಹಜ ನೋಡಯ್ಯಾ!
ಶಂಕೆಯಿಲ್ಲದ ಮಹಾಮಹಿಮನು ನೋಡಯ್ಯಾ,
ಲಿಂಗದೇವನ ಶರಣನುಪಮಾತೀತ ನೋಡಯ್ಯಾ. –ಬವದೀ. 936

ಶರಣನಿಗೆ ಈ ಜನ್ಮವೇ ಕಡೆ. ಅವನು ಸತ್ತು ಹುಟ್ಟುವವನಲ್ಲ. ಬೀಜವನ್ನು ಭೂಮಿಯಲ್ಲಿ ಹಾಕಿದರೆ ಮೊಳಕೆಯೊಡೆಯುತ್ತದೆ, ಬೀಜವನ್ನು ಹುರಿದು, ಬಿತ್ತಿದರೆ ಅದು ಮೊಳೆಯದೆ ಭೂಮಿಯಲ್ಲಿ ವಿಲೀನವಾಗುವುದು. ಹಾಗೆ ಜೀವಾತ್ಮನು ಪಾಪ-ಪುಣ್ಯ ಸಹಿತನಾಗಿ ಸತ್ತರೆ ಪುನಃ ಹುಟ್ಟುವನು. ಪಾಪ ಪುಣ್ಯಗಳಿಗೆ ಅತೀತನಾಗಿ ಕಾರ್ಯ ಮಾಡುತ್ತ ಅವನ್ನು ಜ್ಞಾನಾಗ್ನಿಯಲ್ಲಿ ಹುರಿದು ಸತ್ತರೆ ಪುನಃ ಹುಟ್ಟಿ ಬರುವುದಿಲ್ಲ. ಶರಣನು ಜ್ಞಾನಾಗ್ನಿಯಲ್ಲಿ ತನ್ನ ಕರ್ಮಗಳನ್ನು ಹುರಿಯುವ ಕಾರಣ ಅವನು ಪುನಃ ಹುಟ್ಟಿ ಬರುವುದಿಲ್ಲ. ನಾನಾ ಬಗೆಯ ಸಂದೇಹಗಳನ್ನು ಹೊಂದದೆ ದೃಢವಾದ ನಂಬಿಕೆಯಿಂದ ಶರಣನು ಮುಂದುವರಿಯುವನು. ಸೂತಕಗಳನ್ನು ನಂಬುವುದಿಲ್ಲ. ಮಾನಸಿಕವಾಗಿ ಸದಾ ನಿರ್ಮಲನು, ಅವನು ಆಕಾರ ವಿಶ್ವಾಸಿಯೂ ಅಹುದು. ನಿರಾಕಾರ ನಿರತನೂ ಅಹುದು. ಸಾಕಾರವಾದ ಇಷ್ಟಲಿಂಗವನ್ನು ಧರಿಸಿ ಸದಾಚಾರ ಸಂಪನ್ನನಾಗಿರುವನು. ನಿರಾಕಾರವಾದ ಲಿಂಗದೇವನಲ್ಲಿ ನಂಬಿಕೆಯನ್ನಿರಿಸಿ ಸಾಧನೆ ಮಾಡುವನು, ಕಾಯ ವಂಚಕನಲ್ಲ, ಜೀವ ವಂಚಕನಲ್ಲ. ತಾನು ಮಾಡುವ ಕೆಲಸ ಕಾರ್ಯ, ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸುವನು; ಅಂತಃಸಾಕ್ಷಿಯಾಗಿ ಮಾಡುವನು. ಶರಣನು ಜೀವಗಳ್ಳನಲ್ಲ. ತತ್ತ್ವಕ್ಕಾಗಿ ಪ್ರಾಣವನ್ನು ಕೊಡಲು ಸಿದ್ಧನಾಗಿರುವನು. ನಿರಂತರವಾಗಿ ಕಾರ್ಯಚಟುವಟಿಕೆಯಿಂದ ಕೂಡಿರುವನು. ಸಹಜವಾದ, ಸರಳ ಮತ್ತು ಆದರ್ಶ ಜೀವನವನ್ನು ನಡೆಸುವನು, ನಿಸ್ಸಂದೇಹಪೂರ್ವಕವಾದ ಪಾರದರ್ಶಕವಾದ ಜೀವನ ನಡೆಸುವ ಮಹಾಮಹಿಮನು. ಲಿಂಗದೇವನ ಶರಣನು ಉಪಮಾತೀತ, ಅವನಿಗೆ ಹೋಲಿಕೆ ಕೊಡಲು ಬೇರಾವ ಮಾರ್ಗಿಗಳೂ ಇಲ್ಲ.

935. ಲಿಂಗಾನುಭವದ ಆನಂದ

ದಶದಿಕ್ಕು ಧರೆ ಗಗನವೆಂಬುದ ನಾನರಿಯೆನಯ್ಯಾ,
'ಲಿಂಗಮಧ್ಯೇ ಜಗತ್ ಸರ್ವಂ' ಎಂಬುದ ನಾನರಿಯೆನಯ್ಯಾ,
ಲಿಂಗಸೋಂಕಿನ ಸುಖದೊಳಗೆ

ಲಿಂಗದೇವಯ್ಯಾ, ಅಂಬುಧಿಯೊಳಗೆ ಬಿದ್ದ ಆಲಿಕಲ್ಲಿನಂತೆ
ಭಿನ್ನಭಾವವನರಿಯದೆ 'ಶಿವಶಿವಾ' ಎನುತಿರ್ದೆನು ನಾನು. –ಬವದೀ. 937

ಇಷ್ಟಲಿಂಗಾರ್ಚನೆ ಮಾಡುತ್ತ ಮುಂದೆ ಪ್ರಾಣಲಿಂಗಾನುಸಂಧಾನ ಮಾಡುತ್ತ ಶರಣ ಸಾಧಕರಾದ ಬಸವಣ್ಣನವರು ಭಾವಲಿಂಗಾನುಸಂಧಾನ ಮಾಡುತ್ತಾರೆ. ಅವರ ಮನಸ್ಸು ಹಿರಿದಾಗಿ ಬ್ರಹ್ಮಾಂಡವನ್ನೇ ವ್ಯಾಪಿಸಿಕೊಂಡ ಅನುಭವವಾಗುತ್ತದೆ. ಆಗ ಹತ್ತು ದಿಕ್ಕು, ಧರೆ, ಗಗನವನ್ನು ಮನಸ್ಸು ಆವರಿಸಿಕೊಳ್ಳುತ್ತದೆ. ಸಮಸ್ತ ಬ್ರಹ್ಮಾಂಡವು ಲಿಂಗದೇವನ ಗರ್ಭದಲ್ಲಿ ಅಡಗಿರುವುದನ್ನು ಕಾಣುತ್ತಾರೆ. ಆ ಪರಮಾತ್ಮನ ಸಾಮರಸ್ಯ ಅನುಭವಿಸಿ ಆ ಆನಂದದೊಳಗೆ ಸಮುದ್ರದಲ್ಲಿ ಬಿದ್ದು ಕರಗುವ ಆಲಿಕಲ್ಲಿನಂತೆ ಕರಗಿ ಹೋಗುತ್ತಿದ್ದಾರೆ. ಅಂಗ–ಲಿಂಗ, ಜೀವಾತ್ಮ–ಪರಮಾತ್ಮ ಬೇರೆ ಬೇರೆ ಎಂಬ ಭಾವವು ಅಳಿದು ಹೋಗಿ ತನ್ಮಯತೆ ಆವರಿಸಿಕೊಂಡಿದೆ. ನಾಲಿಗೆ ಮಾತ್ರ ಯಾಂತ್ರಿಕವಾಗಿ ಶಿವಶಿವಾ ಎಂದು ಉಲಿಯುತ್ತಿದೆ.

936. ಪ್ರಸಾದಿಯ ಲಕ್ಷಣ

ಮಿಥ್ಯೆಯನಳಿದುಳಿದ ಸತ್ಯಪ್ರಸಾದಿ,
ಅಂಜನವಿಲ್ಲದ ನಿರಂಜನ ಪ್ರಸಾದಿ,
ದುಃಖವನಳಿದ ಘನಾನಂದಪ್ರಸಾದಿ,
ಅನಿತ್ಯವಿಲ್ಲದ ನಿತ್ಯಪ್ರಸಾದಿ,
ಖಂಡಿತವಿಲ್ಲದ ಅಖಂಡಿತ ಪ್ರಸಾದಿ,
ಲಿಂಗದೇವರಲ್ಲಿ ತಾನೆ ಪ್ರಸಾದಿ. –ಬವದೀ. 938

ಪ್ರಸಾದಿ–ಊಟದ ವಿಷಯದಲ್ಲಿ ನಿಯಮ ಪಾಲನೆ ಮಾಡುವವನಷ್ಟೇ ಅಲ್ಲ. ಅವನು ಒಂದು ವಿಶಿಷ್ಟ ಮಾನಸಿಕ ಸ್ಥಿತಿ ಪಡೆದವನು. ಮಿಥ್ಯ ತತ್ತ್ವಗಳನ್ನಾಗಲಿ ಸಂಗತಿಗಳನ್ನಾಗಲಿ ನಂಬದೆ ಇರುವ ಸತ್ಯವಾದಿಯಾದ ಪ್ರಸಾದಿಯು ರಂಜನ ಅಂದರೆ ಕೊಳೆ ಇಲ್ಲದ ನಿರಂಜನನು, ಅವನ ಜೀವನ ತಾತ್ತಿಕ ನಿಷ್ಠೆಯಿಂದ ಕೂಡಿರುವುದೇ ಅಲ್ಲದೆ ನೈತಿಕ ಶುದ್ಧಿಯಿಂದ ಕೂಡಿದುದು. ಸುಖದುಃಖಗಳಿಗೆ ಅತೀತನಾದ ಘನಾನಂದ ಪ್ರಸಾದಿಯು ಸುಖ ಬಂದರೆ ಹಿಗ್ಗನು, ದುಃಖ ಬಂದರೆ ಕುಗ್ಗನು. ಹೀಗೆ ಮಾನಸಿಕ ಸ್ಥಿಮಿತತೆಯನ್ನು ಕಾಪಾಡಿಕೊಳ್ಳುವನು. ನಿತ್ಯ ನೇಮಗಳಿಂದ ಶೋಭಿತನಾದ ಪ್ರಸಾದಿಯು ಎಂದೂ ಅನಿಯಮಿತತೆಗೆ ಒಳಗಾಗನು. ಲಿಂಗದೇವರ ಪ್ರಸಾದಿಯಾದ ಶರಣನು ಅಖಂಡಿತ ಪ್ರಸಾದಿ ; ತನ್ನ ಕಣ್ಣೆದುರಿಗೆ ಒದಗಿದ ಪ್ರಸಾದದ ಮೀಸಲು ಕೆಡದಂತೆ ಸರ್ವಾಂಗವನ್ನೂ ದೇವನಿಗೆ ಅರ್ಪಿಸಿರುವ ಕಾರಣ ಅವನು ಮುಟ್ಟಿದ್ದು, ನೋಡಿದ್ದು, ಕೇಳಿದ್ದು, ರುಚಿಸಿದ್ದು, ಘ್ರಾಣಿಸಿದ್ದು ಎಲ್ಲವೂ ಪ್ರಸಾದವೇ ಅರ್ಥಾತ್ ದೈವೀಕರಣಗೊಂಡುದು.

937. ಪ್ರಸಾದದಲ್ಲಿ ತದ್ಗತ

(ಹುಸಿಯಿಂದ) ಜನಿಸಿದೆನಯ್ಯಾ ಮರ್ತ್ಯಲೋಕದೊಳಯಿಂಕೆ.
(ಹುಸಿಯಿಂದ) ಲಿಂಗದ ಹೆಸರುಗೊಂಡು ಕರೆದೆನಯ್ಯಾ,
ಅದು ಎನಗೆ ಭಾವವೂ ಅಲ್ಲ, ನಿರ್ಭಾವವೂ ಅಲ್ಲದೆ ನಿಂದಿತ್ತಯ್ಯಾ.
ಅದರ ಅವಯವಂಗಳೆಲ್ಲವೂ ಜಂಗಮವಯ್ಯಾ,
ಅದಕ್ಕೆ ಎನ್ನಲ್ಲುಳ್ಳ ಸಯಿದಾನವ ಮಾಡಿ ನೀಡಿದೆನಯ್ಯಾ.
ಆ ಪ್ರಸಾದಕ್ಕೆ ಶರಣೆಂದೆನಯ್ಯಾ,
ಅದು ಸಾರವೂ ಅಲ್ಲ, ನಿಸ್ಸಾರವೂ ಅಲ್ಲ!
ಆ ಪ್ರಸಾದದಲ್ಲಿ ನಾನೇ ತದ್ಗತನಾದೆ ಕಾಣಾ, ಲಿಂಗದೇವಾ. –ಬವದೀ. 939

ನಾನು ಈ ಜಗತ್ತಿನಲ್ಲಿ ಹುಟ್ಟಿ ಬಂದೆ. ನಾಮ ರೂಪಗಳಿಲ್ಲದ ದೇವನಿಗೆ ಲಿಂಗದೇವನೆಂಬ ನಾಮವನ್ನು, ಇಷ್ಟಲಿಂಗದ ರೂಪವನ್ನು ಕೊಟ್ಟೆ. ದೇವನ ಪೂಜೆ ಎಷ್ಟು ಮಾಡಿದರೇನು ಅವನು ಭಾವ ರಹಿತ; ಅವನಿಗೆ ಉಣ್ಣಿಸಲು ತಿನ್ನಿಸಲು ಬರದು, ಊಡಿಸಲು ಉಡಿಸಲು ಬರದು. ಅಂಥ ದೇವನ ಸಾಕಾರ ರೂಪವೇ ಜಂಗಮ, ಸಮಾಜ ಎಂದು ಅರಿತೆನು. ಜಂಗಮಕ್ಕೆ ನನ್ನಲ್ಲಿದ್ದ ಪದಾರ್ಥಗಳನ್ನು ನೀಡಿ ಕೃತಾರ್ಥನಾದೆ. ಕಾಯಕದಿಂದ ಗಳಿಸಿದ್ದನ್ನು ದಾಸೋಹದ ಮೂಲಕ ನೀಡಿ ಜಂಗಮದ ಪ್ರಸಾದವನ್ನು ಪಡೆದುಕೊಂಡೆ. ಈ ಪ್ರಸಾದ ಸ್ವೀಕಾರದಲ್ಲಿ ನಾನು ಹರ್ಷಭರಿತನಾಗಿ ಇದ್ದೇನೆ.

ಗುರು ಬಸವಣ್ಣನವರು ಕೊಟ್ಟ ಸೈದ್ಧಾಂತಿಕ ಪರಿಕಲ್ಪನೆಯಲ್ಲಿ ಬಹು ಮುಖ್ಯವಾದುವು ಜಂಗಮ–ಕಾಯಕ–ದಾಸೋಹ. ಇವನ್ನು ಮತೀಯ ಚೌಕಟ್ಟಿನಲ್ಲಿ ನೋಡಿ ತಪ್ಪು ತಪ್ಪಾಗಿ ಗುರು ಬಸವಣ್ಣನವರ ಸಿದ್ಧಾಂತವನ್ನು ಅರ್ಥ ಮಾಡಲಾಗುತ್ತದೆ. ಜಂಗಮವೆಂದರೆ ಲಿಂಗಾಯತ ಪುರೋಹಿತ, ದಾಸೋಹವೆಂದರೆ ಅನ್ನದಾನ, ಪ್ರಸಾದವೆಂದರೆ ಊಟದಲ್ಲಿ ಮಾಡುವ ನೇಮ ಎಂದು ಅತ್ಯಂತ ಶಿಥಿಲವಾದ ಅರ್ಥದಲ್ಲಿ ತಿಳಿದುಕೊಳ್ಳಲಾಗುವುದು. ಜಂಗಮವೆಂದರೆ ತ್ಯಾಗಿ, ಯೋಗಿ, ಧರ್ಮ ಪ್ರಚಾರಕ ಎಂಬ ಅರ್ಥದೊಡನೆ ಜಂಗಮ ಎಂದರೆ ಸಮಾಜ ಎಂಬುದು ಬಹುಮುಖ್ಯ ಅರ್ಥ. ದಾಸೋಹವೆಂದರೆ ಧರ್ಮಕ್ಕಾಗಿ ತನು–ಮನ–ಧನ ಮೂರನ್ನೂ ವಿನಿಯೋಗಿಸುವುದು ಎಂಬ ಅರ್ಥದೊಡನೆ ದಾಸೋಹವೆಂದರೆ ಸಮಾಜ ಸೇವೆ ಎಂದೂ ಅರ್ಥ. ದೇವರು ನಿರಾಕಾರ, ಸಮಾಜವು ದೇವರ ಸಾಕಾರ ಮುಖ ಎಂಬುದನ್ನು ಒತ್ತಿ ಒತ್ತಿ ಹೇಳಲಾಗುವುದು. ಪ್ರಸಾದ ತತ್ತ್ವ ಕೇವಲ ಊಟಕ್ಕೆ ಸಂಬಂಧಿಸಿದ್ದಲ್ಲ ಅದು ಚಿತ್ತ ಸಮತೆಯನ್ನು ಕಾಯ್ದುಕೊಳ್ಳುವ ಬಗೆ. ತಾನು ತನ್ನ ಜೀವನಕ್ಕೆ ಬಳಸಿಕೊಂಡು ಮಿಕ್ಕುದನ್ನು ಜಂಗಮಕ್ಕೆ ಸಲ್ಲಿಸಬೇಕೆಂದು ಹೇಳದೆ ಗುರು ಬಸವಣ್ಣನವರು ಮೊದಲು ಜಂಗಮಕ್ಕೆ (ಧರ್ಮಕ್ಕೆ, ಸಮಾಜಕ್ಕೆ) ಸಲ್ಲಿಸಿ ಮಿಕ್ಕುದನ್ನು "ಪ್ರಸಾದ" ರೂಪದಲ್ಲಿ ಸ್ವೀಕರಿಸಬೇಕೆಂದು ಪ್ರಸ್ತುತ ವಚನದಲ್ಲಿ ಹೇಳಿ, ಹೀಗೆ ಸ್ವೀಕರಿಸಿದ ಪ್ರಸಾದದಲ್ಲಿ ನಾನು ಹರ್ಷದಿಂದಿದ್ದೇನೆ ಎನ್ನುವರು.

93೮. ಸಹಸ್ರಾರ ವಾಸ

ಬೆಳಗಿನೊಳಗಣ ಬೆಳಗು ಮಹಾಬೆಳಗೆಂಬ
ಪ್ರಸಾದದಲ್ಲೊದಗಿದ ಪ್ರಸಾದಿಯ ಪರಿಣಾಮದ
ಪರಮಾನಂದವನೇನೆಂದುಪಮಿಸುವೆನಯ್ಯಾ?
ಪರಮಾಶ್ರಯವೇ ತಾನಾಗಿ, ಶತಪತ್ರ ಕಮಲ ಕರ್ಣಿಕಾ ಮಧ್ಯದಲ್ಲಿ
ಸ್ವತಃ ಸಿದ್ಧನಾಗಿಪ್ಪ ನಮ್ಮ ಲಿಂಗದೇವಯ್ಯ –ಬವದೀ. 940

ಪರಮಾತ್ಮನು ಮಹಾಬೆಳಗು. ಅವನಿಂದ ಧಾರೈಸುವ ಪ್ರಸಾದವೆಂದರೆ ಅನುಗ್ರಹ. ಅಂಥ ಅನುಗ್ರಹವನ್ನು ಪಡೆದ ಪ್ರಸಾದಿ ಪರಮಾನಂದವನ್ನು ಅನುಭವಿಸುತ್ತಾನೆ. ಪರಮಾತ್ಮನು ಜೀವಾತ್ಮನಿಗೆ ಪರಮ ಆಶ್ರಯ. ಇಂಥ ಪರಮಾತ್ಮನು ನೂರು ದಳದ ಸಹಸ್ರಾರ ಚಕ್ರದಲ್ಲಿ ನೆಲೆಸಿದ್ದು ಮಹಾಬೆಳಗಾಗಿ ದರ್ಶನ ನೀಡುತ್ತಾನೆ.

939. ದೇವನು ಸರ್ವನಿವಾಸಿ

ಆಯತವೆಂಬುದು ಅಂಗ, ಸ್ವಾಯತವೆಂಬುದು ಭಂಗ,
ಆಯತವರಿಯೆ, ಸ್ವಾಯತವನರಿಯೆ,
ಭಾವದಲ್ಲಿ ವ್ರತಗೆಟ್ಟುದಾಗಿ ಆ ಭಾವದಲ್ಲಿ ಜೀವಸಂಹಾರಿ,
ಲಿಂಗದೇವ ಸರ್ವನಿವಾಸಿಯಾಗಿ. –ಬವದೀ. 941

ಆಯತ ಎಂಬ ಕ್ರಿಯೆ ಅಂಗಕ್ಕೆ ಸಂಬಂಧಿಸಿದೆ. ಇಷ್ಟಲಿಂಗವನ್ನು ಗುರುವಿನ ಮೂಲಕ ದೇಹಕ್ಕೆ ಧರಿಸಿಕೊಳ್ಳುವುದು ಆಯತ. ಸ್ವಾಯತ ಎಂಬ ಕ್ರಿಯೆ ಪ್ರಾಣಲಿಂಗಕ್ಕೆ ಸಂಬಂಧಿಸಿದೆ. ಪ್ರಾಣಲಿಂಗಾನುಸಂಧಾನದ ಬಳಿಕ ಭಾವಲಿಂಗವನ್ನು ಸನ್ನಿಹಿತ ಮಾಡಿಕೊಳ್ಳುವ ಕ್ರಿಯೆ ಸಾಗುತ್ತದೆ. ಆಗ ಯಾವ ಪೂಜಾಪರಿಕರಗಳೂ ಇರುವುದಿಲ್ಲ. ಜಪತಪ ನೇಮಾದಿ ವ್ರತವೂ ಇರುವುದಿಲ್ಲ. ಭಾವಲಿಂಗಾನುಸಂಧಾನದಲ್ಲಿ ದೇವನು ಜೀವ ಸಂಹಾರಿಯಾಗುತ್ತಾನೆ. ದೇವರ ದಿವ್ಯಾನುಭವವು ಜೀವಾತ್ಮ ಮೇಲೆ ಹೇರಲ್ಪಡುವ ಕಾರಣ ಪರಮಾತ್ಮನಲ್ಲಿ ಜೀವಾತ್ಮವು ಕರಗಿ ಹೋಗುತ್ತದೆ. ಲಿಂಗದೇವನು ಇಡೀ ವ್ಯಕ್ತಿತ್ವವನ್ನು ಆವರಿಸಿಕೊಳ್ಳುತ್ತಾನೆ. ಸರ್ವ ನಿವಾಸಿಯಾಗಿ.

940. ಶರಣನಲ್ಲಿ ಆಲಸ್ಯವಿಲ್ಲ.

ಸ್ವಯಲಿಂಗದನುಭಾವ ತನಗೆ ದೊರೆಕೊಂಡ ಬಳಿಕ
ದೇವಲೋಕವೆಂಬುದೇನೋ? ಮರ್ತ್ಯಲೋಕವೆಂಬುದೇನೊ?
ಆವುದರಲ್ಲಿಯೂ ಭೇದವೇನಯ್ಯಾ?
ಲಿಂಗದೇವನೊಲಿದ ಬಳಿಕ ಆಲಸ್ಯವುಂಟೆ? –ಬವದೀ. 942

ಪರಮಾತ್ಮನ ದಿವ್ಯಾನುಭವ ದೊರೆತ ಮೇಲೆ ಶರಣನಿಗೆ ಮರ್ತ್ಯಲೋಕದ ಬಗ್ಗೆ ಬೇಸರ ಅಥವಾ ತಿರಸ್ಕಾರ, ದೇವಲೋಕದ ಬಗ್ಗೆ ಆತುರ ಇರುವುದಿಲ್ಲ. ದೇವರು ಕೊಟ್ಟ ಆಯುಷ್ಯ ಇರುವವರೆಗೂ

ಕಾರ್ಯೋನ್ಮುಖವಾಗಬೇಕು ; ದೇವರ ಕರೆ ಬಂದಾಗ ಪ್ರಾಣಬಿಡಬೇಕು ಎಂಬ ಮನೋಭಾವವಿರುತ್ತದೆ. ಹೀಗಾಗಿ ಜೀವನದ ಅಂತಿಮ ಕ್ಷಣದವರೆಗೂ ಚಟುವಟಿಕೆ ಇರುವುದು, ಆಲಸ್ಯವಿರದು.

941. ಘನ ಲಿಂಗೈಕ್ಯ

ಏನೆಂಬೆ, ಏನೆಂಬೆ ಒಂದೆರಡಾದುದ?
ಏನೆಂಬೆ, ಏನೆಂಬೆ ಎರಡೊಂದಾದುದ?
ಏನೆಂಬೆ, ಏನೆಂಬೆ ಅವಿರಳ ಘನವ?
ಮಹಾದಾನಿ ಲಿಂಗದೇವಯ್ಯಾ, ತಾನೆ ಬಲ್ಲ. –ಬವದೀ. 943

ಒಂದು ಎರಡಾದುದು, ಆ ಎರಡು ಪುನಃ ಒಂದಾದುದು ಬಹಳ ರೋಚಕವಾದ ಲಿಂಗದೇವನ ಲೀಲೆ. ಒಂದೇ ಆಗಿದ್ದ ಪರಮಾತ್ಮ-ಲಿಂಗದೇವ ತನ್ನ ಲೀಲೆಗಾಗಿ ಲಿಂಗ ಮತ್ತು ಅಂಗ ಎಂದು ಎರಡಾದ. ಈ ಅಂಗ ಅಥವಾ ಆತ್ಮ ಅನಂತ ಜನ್ಮಗಳನ್ನು ಎತ್ತಿ ಪಡಬಾರದ ಪಾಡುಪಟ್ಟಿತು. ತನ್ನ ಮೂಲ ನೆಲೆಯಾದ ಲಿಂಗವನ್ನು ಕೂಡಿಕೊಳ್ಳಬೇಕೆಂದು ಹಂಬಲಿಸಿತು. ಗುರುವು ತಾನು ತೆತ್ತಿಗನಾಗಿ ಅಂಗ–ಲಿಂಗರನ್ನು ಬೆಸೆಯುವ ಸಾಧನವಾಗಿ ಇಷ್ಟಲಿಂಗವನ್ನು ಕೊಟ್ಟನು. ಇಷ್ಟಲಿಂಗ ದರ್ಪಣದ ಮೂಲಕ ಸ್ವರೂಪ ಸಾಕ್ಷಾತ್ಕಾರ ಮಾಡಿಕೊಂಡು ಶರಣ ಸಾಧಕನು ಲಿಂಗಾನುಭಾವಿಯಾಗಿ ಭಾವಲಿಂಗೈಕ್ಯ ಸ್ಥಿತಿಯನ್ನು ಅನುಭವಿಸಿ ಪರಮಾನಂದವನ್ನು ಹೊಂದುತ್ತಾನೆ. ಈ ದಿವ್ಯ ಸುಖದ ಮರ್ಮವನ್ನು ಲಿಂಗದೇವ ತಾನೇ ಬಲ್ಲ.

942. ಶರೀರದ ಮರೆಯ ಚೈತನ್ಯ

ಕುರುಹಿಲ್ಲ ಕುರುಹಿಲ್ಲ ಲಿಂಗವೆಂದೆಂಬಡೆ,
ತೆರೆಹಿಲ್ಲ ತೆರೆಹಿಲ್ಲ ಜಂಗಮವೆಂದೆಂಬಡೆ!
ಇದೆ ನೋಡಾ ಶಿವಾಚಾರ, ಇದೆ ನೋಡಾ ಶಿವದೊಡಕು!
'ಆತ್ಮಾನಾಮ್ ಪ್ರಕೃತಿಃ ಸ್ವಭಾವ' ಎಂದುದಾಗಿ
ಮುಟ್ಟಬಾರದ ಠಾವ ಮರೆಗೊಂಡಿರ್ಪ
ಮಮಕರ್ತ ಲಿಂಗದೇವ. –ಬವದೀ. 944

ಲಿಂಗ ಎಂದರೆ ಪರಾತ್ಪರ ವಸ್ತು ಪರಮಾತ್ಮ. ಅವನಿಗೆ ಸ್ತ್ರೀಯ ಕುರುಹು ಇಲ್ಲ. ಪುರುಷರ ಕುರುಹೂ ಇಲ್ಲ. ಯಾವ ಕುರುಹಿನ ಮೂಲಕವೂ ದೇವನನ್ನು ಸೀಮಿತಗೊಳಿಸಲು ಸಾಧ್ಯವಿಲ್ಲ. ಜಂಗಮನೊಡನೆ ಮುಚ್ಚುಮರೆ ಇರಬಾರದು. ತನ್ನ ದೋಷ-ದೌರ್ಬಲ್ಯ, ಸುಖ-ದುಃಖಗಳನ್ನು ಜಂಗಮನ ಮುಂದೆ ಹೇಳಿಕೊಂಡು ಪರಿಹಾರ ಪಡೆಯಬೇಕು. ಲಿಂಗ ಮತ್ತು ಜಂಗಮದೊಡನೆ ನಿರಂತರ ಸಂಬಂಧವನ್ನು ಇರಿಸಿಕೊಳ್ಳುವುದೇ ಶಿವಾಚಾರ. ಆತ್ಮವು ತನ್ನ ಪರಿಶುದ್ಧ ರೂಪದಲ್ಲಿ ಸತ್–ಚಿತ್–ಆನಂದ ಸ್ವರೂಪ ಹೊಂದಿದೆಯಾದರೂ ಶರೀರದಿಂದ ಬಂಧಿತವಾಗಿ ಪ್ರಕೃತಿ ಸ್ವಭಾವವನ್ನು ಧರಿಸಿದೆ. ಕರ್ತನಾದ ಲಿಂಗದೇವನು ಕೈಗೆ ಸಿಗದಂತೆ ಇಂದ್ರಿಯ ಗೋಚರವಾಗದ ಹಾಗೆ ಶರೀರದಲ್ಲಿ ಮರೆಯಾಗಿ ಹುದುಗಿಕೊಂಡಿರುವನು.

943. ಲಿಂಗದೇವ ಉಪಮಾತೀತ

ಭೂ ತೋಯ ಪಾವಕ ಸಮೀರಣ ಅಂಬರಾದಿಗಳೆಲ್ಲ
ಆದಿಯಾಧಾರದ ಪರಮಾತ್ಮ ಲಿಂಗದಲ್ಲಿ!
ಆದಿ ಮಧ್ಯ ಅವಸಾನವರಿಯದ
ಅಗಮ್ಯ ವೇದಾದಿ ಸಕಲ ಶಾಸ್ತ್ರಪ್ರಮಾಣರು
ಅದನಂತಿಂತೆಂದುಪಮಿಸಲಿಲ್ಲ, ಮಹಂತ ಲಿಂಗದೇವನ. –ಬವದೀ. 945

ಭೂಮಿ, ಜಲ, ಅಗ್ನಿ, ವಾಯು, ಆಕಾಶ ಎಂಬ ಪಂಚ ಭೂತಗಳೆಲ್ಲ ಇರುವುದು ಆದಿಯೂ, ಆಧಾರವೂ ಆದ ಪರಮಾತ್ಮ ಲಿಂಗದಲ್ಲಿ. ಸಮಸ್ತ ಸೃಷ್ಟಿಗೆ ಪರಮಾತ್ಮ ಲಿಂಗದೇವನೇ ಆದಿಯಾಗಿದ್ದಾನೆ ಮತ್ತು ಆಧಾರವೂ ಆಗಿದ್ದಾನೆ. ಈ ಜಗತ್ತಿನ ಆದಿ, ಮಧ್ಯ, ಅಂತ್ಯವನು ಅರಿಯದ ವೇದ, ಆಗಮ, ಶಾಸ್ತ್ರ, ಪುರಾಣಗಳು ಆ ಲಿಂಗದೇವನನ್ನು ಅರಿಯಲಿಲ್ಲ, ಬಣ್ಣಿಸಲಿಲ್ಲ.

944. ಲಿಂಗದೇವನು ನಿರೂಪನು.

ಮಹಾಲಿಂಗದ ಸ್ಥಾನಂಗಳು ಮಹಾಲಿಂಗದ ಹೆಸರಲ್ಲದೆ,
ಲಿಂಗ ಬೇರೆ ರೂಪನಿರೂಪನಲ್ಲ,
ಲಿಂಗ ಬೇರೆ ಕಾಯಸಂಬಂಧಿಯಲ್ಲ,
ಲಿಂಗ ಬೇರೆ ಜೀವ ಸಂಬಂಧಿಯಲ್ಲ,
ಲಿಂಗ ಬೇರೆ ಮಹಾಘನದಿಂದತ್ತತ್ತಲೆ!
ಲಿಂಗದೇವರ ನಿಲವು ಆರಿಗೆಯೂ ಅಳವಡದು! –ಬವದೀ. 946

ಲಿಂಗ ಎನ್ನುವ ಪದಕ್ಕೆ ಹಲವಾರು ಅರ್ಥಗಳಿವೆ. ಷಟ್ ಚಕ್ರಗಳಲ್ಲಿರುವ ಶಕ್ತಿಯನ್ನು ಲಿಂಗಗಳ ಹೆಸರಿನಿಂದ ಕರೆಯಲಾಗಿದೆ. ಪಂಚೇಂದ್ರಿಯಗಳು ಸ್ವಭಾವತಃ ಅಂಗೇಂದ್ರಿಯಗಳು. ಇವು ದೈವೀಕರಣಗೊಂಡು ಲಿಂಗೇಂದ್ರಿಯಗಳಾಗಬೇಕೆಂದು ಹೇಳಲಾಗುವುದು. ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದ ಲಿಂಗ, ಮಹಾಲಿಂಗ ಎಂಬ ಹೆಸರನ್ನು ಸರ್ವೇಂದ್ರಿಯಗಳಿಗೆ ಕೊಡಲಾಗಿದೆ. ಸೃಷ್ಟಿಕರ್ತ ಪರಮಾತ್ಮನನ್ನು ಮಹಾಲಿಂಗವೆಂದು ಕರೆಯಲಾಗುವುದು. ಪದ ಬಳಕೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. "ಲಿಂಗ" ಎಂಬ ಪದವು ಆತ್ಯಂತಿಕ ಶಕ್ತಿಯಾದ ಪರಮಾತ್ಮನಿಗೆ ಅನ್ವಯವಾಗುವ ಪದ. ದೇವನಿಗೆ ರೂಪವಿಲ್ಲ, ಹಾಗೆ ನೋಡಿದರೆ ನಿರೂಪನೂ ಅಲ್ಲ. ಸಗುಣರೂಪದಲ್ಲಿ ದರ್ಶನ ನೀಡಬಲ್ಲ. ಇಷ್ಟಲಿಂಗವು ದೇಹದ ಮೇಲೆ ಧರಿಸಲ್ಪಡುವುದು. ಇದು ದೇವರ ಕುರುಹೇ ವಿನಾ ದೇವರಲ್ಲ. ಹೀಗಾಗಿ ಲಿಂಗದೇವನು ಕಾಯಕ್ಕೆ ಸೀಮಿತನಲ್ಲ. ಲಿಂಗದೇವನು ಜೀವಾತ್ಮನಲ್ಲಿ ಹೂವಿನಲ್ಲಿ ವಾಸನೆ ಇರುವಂತೆ ನೆಲೆಸಿದ್ದಾನೆ. ಆದರೆ ಜೀವವೇ ದೇವನಲ್ಲ. ಮಹಾ ಘನ ಸ್ವರೂಪವಾದ ಲಿಂಗದೇವನ ಸ್ವರೂಪವು ಎಲ್ಲವನ್ನೂ ಮೀರಿದ್ದು. ಅದನ್ನು ಅರ್ಥಮಾಡಿಕೊಂಡು ಅಳವಡಿಸಿಕೊಳ್ಳುವುದು ಕಷ್ಟಸಾಧ್ಯ.

945. ನಿರ್ಭಾವ ಲಿಂಗದೇವ

ಹುತ್ತಕ್ಕೆ ಏಸು ಬಾಯಾದಡೇನು? ಸರ್ಪನಿಪ್ಪುದು ಒಂದೇ ಸ್ಥಾನ!
ಭಾವ ಭಾವಿಸಿ ಭ್ರಮೆಯಳಿದು ನೋಡಾ:
ಆ ಭಾವ ಭಾವಿಸಲು ನಿರ್ಭಾವ ಲಿಂಗದೇವ. –ಬವದೀ. 947

ಹುತ್ತಕ್ಕೆ ಹಲವಾರು ಬಾಯಿ(ಕೋವಿ)ಗಳಿರುತ್ತವೆ. ಅವೆಲ್ಲದರಲ್ಲಿ ಸರ್ಪವು ಓಡಾಡುತ್ತಲಿರುತ್ತದೆ. ಹಾಗೆ ಜೀವಾತ್ಮವು ಜ್ಞಾನೇಂದ್ರಿಯ, ಕರ್ಮೇಂದ್ರಿಯ ಎಲ್ಲದರಲ್ಲಿಯೂ ಕ್ರಿಯಾಶೀಲವಾಗಿರುವುದಾದರೂ ಅದು ವಿಶೇಷತಃ ನೆಲೆಸಿರುವುದು ಹೃದಯ ಕಮಲದಲ್ಲಿ. ಭಾವೇಂದ್ರಿಯದ ಮೂಲಕ ಮಾತ್ರ ಆ ಪರಮಾತ್ಮನ ಅಂಶವಾದ ಜೀವಾತ್ಮವನ್ನು (ಕಾಣಲು ಸಾಧ್ಯವಿಲ್ಲ) ಭಾವಿಸಿ, ಅನುಭವಿಸಲು ಸಾಧ್ಯ ಆ ಅನುಭವ ಪಡೆಯುವಾಗ ಭಾವ ನಿರ್ಭಾವವಾಗಿ ಸಮುದ್ರದಲ್ಲಿ ಬಿದ್ದ ಆಲಿಕಲ್ಲಿನಂತೆ ಕರಗಿ ಹೋಗುತ್ತದೆ.

946. ಶಾಸ್ತ್ರಾತೀತ

ವೇದ ವೇಧಿಸಲರಿಯದೆ ಅಭೇದ್ಯಲಿಂಗವೆಂದು ನಡುನಡುಗಿತ್ತು.
ಶಾಸ್ತ್ರ ಸಾಧಿಸಲರಿಯದೆ ಅಸಾಧ್ಯಲಿಂಗವೆಂದು ಸಾರುತ್ತೈದಾವೆ.
ತರ್ಕ ತರ್ಕಿಸಲರಿಯದೆ ಅತರ್ಕ್ಯಲಿಂಗವೆಂದು ಮನಂಗೊಳ್ಳವು.
ಆಗಮ ಗಮಿಸಲರಿಯದೆ ಆಗಮ್ಯಲಿಂಗವೆಂದು ಹೋದವು.
ನರರು ಸುರರು ಅಂತುವ ಕಾಣರು,
ನಮ್ಮ ಲಿಂಗದೇವನ ಪ್ರಮಾಣ ಶರಣ ಬಲ್ಲ! –ಬವದೀ. 948

ವೇದ ಶಾಸ್ತ್ರ, ತರ್ಕ ಮತ್ತು ಆಗಮ ಮುಂತಾದುವು ಶಬ್ದ ಜಾಲಗಳು. ಅವು ಊರಿಗೆ ದಾರಿ ತೋರುವ ಕೈಮರಗಳಂತೆ ಕೆಲವೊಂದು ಶಾಸ್ತ್ರಗಳು ತಪ್ಪುದಾರಿಗೂ ಕಳಿಸುತ್ತವೆ. ಉದಾಹರಣೆಗೆ ಯಜ್ಞಯಾಗಾದಿಗಳನ್ನು ಹೇಳುವ ಶಾಸ್ತ್ರ ಗ್ರಂಥಗಳು ಅಧ್ಯಾತ್ಮ ಶಾಸ್ತ್ರಕ್ಕೆ ವಿಮುಖವಾಗಿವೆ. ವೇದಗಳು ನಿಸರ್ಗದಲ್ಲಿ ಬರುವ ಅಗ್ನಿ, ವರುಣ, ಉಷಸ್, ಸಂಧ್ಯಾ ಮುಂತಾದವನ್ನು ದೈವೀಕರಿಸಿ ಸ್ತುತಿಸುವುದನ್ನು ಕಾಣುತ್ತೇವೆ. ಶಾಸ್ತ್ರ ಗ್ರಂಥಗಳು ತಾತ್ವಿಕ ಪದಗಳ ಅರ್ಥ ವಿಶ್ಲೇಷಣೆ ಬಗ್ಗೆ ಚಿಂತಿಸುತ್ತವೆಯೇ ವಿನಾ ಅವುಗಳ ಅನುಭವ ಪಡೆಯಲು

ಯತ್ನಿಸುವುದಿಲ್ಲ. ತರ್ಕವು ಕೇವಲ ಕ್ರಮ ಬದ್ಧ ವಾದದಲ್ಲಿ ಆಸಕ್ತವಾಗಿರುವುದೇ ವಿನಾ ಅದು ಸಹ ಅಧ್ಯಾತ್ಮಿಕ ಅನುಭೂತಿಯಲ್ಲಿ ಆಸಕ್ತವಾಗಿಲ್ಲ. ಅದಕ್ಕಾಗಿಯೇ ಅಲ್ಲಮಪ್ರಭುದೇವರು ತರ್ಕವೆಂಬುದು ಟಗರಿನ ಕಾಳಗದಂತಿದೆ ಎಂದು ಹೇಳಿರುವುದು. ಹೀಗೆ ವೇದ, ಶಾಸ್ತ್ರ, ತರ್ಕ, ಆಗಮಗಳು ದೇವರ ನಿಜ ಸ್ವರೂಪವನ್ನು ಅರಿಯಲು ಅಸಮರ್ಥವಾದವು. ಮಾನವರು, ದೇವತೆಗಳು ಸಹ ದೇವರ ಸ್ವರೂಪ ಅರಿಯುವುದರಲ್ಲಿ ಸೋತರು. ಆದರೆ ನಮ್ಮ ಶರಣರು ನಿಜವಾದ ದೇವರನ್ನು ನಿಜವಾಗಿಯೂ ನಂಬಿ ಧನ್ಯರಾದರು.

947. ಲಿಂಗದೇವನ ಸ್ವರೂಪ

ವೇದಾತೀತ, ಷಡುವರ್ಣರಹಿತ, ಅಷ್ಟತ್ರಿಂಶತ್ಕಳಾತೀತ,
ವ್ಯೋಮಾತೀತ, ಲಿಂಗದೇವ. –ಬವದೀ. 949

ಪರಮಾತ್ಮನು ವೇದ, ಆಗಮ, ಶಾಸ್ತ್ರ, ಪುರಾಣಗಳಿಗೆ ಅತೀತನು. ಷಡು ವರ್ಣಗಳಾದ ಪೀತ(ಹಳದಿ), ಹರಿತ(ಹಸಿರು), ರಕ್ತ(ಕೆಂಪು), ಶ್ವೇತ (ಬಿಳಿಯದು), ಕೃಷ್ಣ (ಕಪ್ಪು), ನೀಲ (ನೀಲಿ) ಬಣ್ಣಗಳು ಇಲ್ಲದವನು, 308 ಕಳೆಗಳಿಂದ ಅತೀತನಾಗಿರುವವನು, ವ್ಯೋಮ ಅಂದರೆ ಆಕಾಶಕ್ಕೆ ಅತೀತನಾದವನು.

948. ಲಿಂಗದೇವ ಮಹಾಬೆಳಗು

ವಿಶ್ವಜಿತನು, ಧನುಜಿತನು, ಸರ್ವಜಿತನು,
ಸುತ್ರಾಮಜಿತನು, ನೃಜಿತನು, ಊರ್ವರಾಜಿತನು
ಅಶ್ವಜಿತನು, ಗೋಜಿತನು,
ಸ್ವಜಿತನು, ಸ್ವಸಮ್ವೇದ್ಯನು, ವೇದನಾದಾತೀತನು.
ತುರೀಯಪರಮಾನಂದನು, ನಿರವಯ,
ಸೂರ್ಯಕೋಟಿಪ್ರಭೆಯ ಬೆಳಗಿನ
ಸಹಸ್ರಕಿರಣದ ಅಗ್ರಪಟಲದ ಬೆಳಗು ಲಿಂಗದೇವಯ್ಯನು –ಬವದೀ. 950

ಮೊದಲನೆಯ ಮೂರು ಸಾಲುಗಳು ಅರ್ಥವಾಗುತ್ತಿಲ್ಲ. ಜಿತ ಎಂದರೆ ಗೆದ್ದವನು, ಒಡೆಯನು ಎಂದರ್ಥ. ಸ್ವ ಸಂವೇದ್ಯನು– ಜ್ಞಾನ (ಪ್ರಜ್ಞಾ) ಸ್ವರೂಪನಾದ ದೇವನು ಸಂವೇದನೆಯುಳ್ಳವನು. ಭಕ್ತರ ಕರೆಗೆ ಓಗೊಡುವ ಕರುಣಾಮಯಿ.

949. ವೇದ ನಾದಾತೀತ

ಸಹಸ್ರಶೀರ್ಷನಾದಿಪುರುಷನೊಬ್ಬನು,
ವೇದಪುರುಷನೊಬ್ಬ ಪುರುಷನು.
ಜ್ಯೋತಿ ಪುರುಷನೊಬ್ಬ ಪುರುಷನು.
ತ್ರಿಪಾದೂರ್ಧ್ವನೊಬ್ಬ ಪುರುಷನು.
ಉದನ್ಮುಖನೊಬ್ಬ ಪುರುಷನು.
ಉದಯಮುಖನೊಬ್ಬ ಪುರುಷನು.
ವಿರಾಟ್ ಪುರುಷನೊಬ್ಬ ಪುರುಷನು.
ಆದಿಪುರುಷನೊಬ್ಬ ಪುರುಷನು.
ವಿಯತ್‌ಪುರುಷನೊಬ್ಬ ಪುರುಷನು,
ತದ್ವಿಯತ್ಪುರುಷ ಪುರುಷರಿಲ್ಲದ ಪ್ರಭೆಯ ನೋಡಿರೆ,
ವೇದನಾದಾತೀತ ತುರೀಯಪರಮಾನಂದ ನಿರವಯ
ಷಟ್ ತ್ರಿಶಂತ್ ಪ್ರಭಾಪಟಲಪ್ರಭೆಯ ಬೆಳಗಿದೆ ನೋಡಿರೆ.
ಬೆಳಗಿನೊಳಗಣ ಮಹಾಬೆಳಗಿನ ಬೆಳಗು ಲಿಂಗದೇವಯ್ಯ. –ಬವದೀ. 951

ಮೊದಲಿನ 10 ಸಾಲುಗಳು ಅರ್ಥವಾಗುತ್ತಿಲ್ಲ. ಪರಮಾತ್ಮನು ವೇದಾತೀತನು ಮತ್ತು ನಾದಾತೀತನು. ವೇದಾಗಮಶಾಸ್ತ್ರಗಳಿಗೆ ನಿಲುಕದವನು. ಶಾಸ್ತ್ರಗಳು ಊರಿಗೆ ದಾರಿ ತೋರುವ ಕೈಮರಗಳಿದ್ದಂತೆ. ಅವೇ ಊರಲ್ಲ. ದೇವರು ಕೇವಲ ನಾದಕ್ಕೆ ಒಲಿಯುವವನಲ್ಲ. ಅಂತರಂಗದಲ್ಲಿ ಅನಾಹತನಾದವೆಂಬುದು

ಕೇಳಿಬರುವುದು. ಈ ಅನಾಹತ ನಾದದಿಂದ ಅತೀತನಾಗಿ ನೆಲೆಸಿದ್ದಾನೆ. ತುರೀಯ ಅನುಭವಕ್ಕೆ ನಿಲುಕುವವನಾಗಿದ್ದಾನೆ. ಪರಮಾನಂದ ಸ್ವರೂಪನಾಗಿದ್ದಾನೆ. ಅವಯವ ರಹಿತನಾಗಿದ್ದಾನೆ. 36 ತತ್ತ್ವಗಳ ಪ್ರಭಾ ಪಟಲದ ಚಿತ್ಪ್ರಭೆಯಾಗಿದ್ದಾನೆ. ಪ್ರಕಾಶ ಸ್ವರೂಪನಾಗಿದ್ದಾನೆ.

950. ಶಬ್ದ ಮುಗ್ಧತೆ

ಘನಗಂಭೀರ ಮಹಾಘನದೊಳಗೆ
ಘನಕ್ಕೆ ಘನವಾಗಿದ್ದೆನಯ್ಯಾ.
ಲಿಂಗದೇವಯ್ಯನೆಂಬ
ಮಹಾಬೆಳಗಿನ ಬೆಳಗಿನೊಳಗಿದ್ದೇನೆಂಬ ಶಬ್ದ
ಮುಗ್ಧವಾದುದನೇನೆಂಬೆನಯ್ಯಾ?
–ಬವದೀ. 952

ಪರಮಾತ್ಮ ಲಿಂಗದೇವನು ಘನಗಂಭೀರ ಮಹಾಘನ; ವರ್ಣನಾತೀತ, ಇಂತಹ ಪರಮಾತ್ಮ ಲಿಂಗದೇವನೊಳಗೆ ಘನವಾದ ಅಂಗ, ಜೀವಾತ್ಮವು ಒಡವೆರೆದು ಒಂದಾಗುತ್ತಲಿದೆ. ಇದು ಒಂದು ಬೆಳಕನ್ನು ಇನ್ನೊಂದು ಬೆಳಕು ಕೂಡಿದಂತಹ ಅನುಭವ; ಉರಿಯೊಳಗೆ ಕರ್ಪೂರ ಕರಗುತ್ತ ನಿಶ್ಶೂನ್ಯವಾದ ಅನುಭವ. ಆಗ ಅನುಭವಿಸುವವನ ಮಾತು ನಿಂತು ಹೋಗಿ, ಶಬ್ದ ಮುಗ್ಧತ್ವ ಪ್ರಾಪ್ತಿಯಾಗುತ್ತದೆ.

ಲಿಂಗೈಕ್ಯದಲ್ಲಿ ಎರಡು ಬಗೆ 1. ಭಾವಲಿಂಗೈಕ್ಯ 2.ಕಾಯಲಿಂಗೈಕ್ಯ ಭಾವಲಿಂಗೈಕ್ಯವು ಜೀವಂತವಿರುವಾಗಲೇ ಆಗುವ ಅನುಭವ. ಹೃದಯ ಶಯನ ಗೃಹದಲ್ಲಿ ಲಿಂಗದೇವನು ಅಂಗ(ಜೀವಾತ್ಮ)ವನ್ನು ಅಪ್ಪಿಕೊಳ್ಳುವನು. ಭಾವವು ಈ ಅನುಭವವನ್ನು ಹೊಂದಿ ಪರಮಾನಂದವನ್ನು ಅನುಭವಿಸುವುದು. ಕಾಯ ಲಿಂಗೈಕ್ಯವೆಂದರೆ ಶರೀರವು ಪಂಚಭೂತಗಳಲ್ಲಿ ವಿಲೀನವಾಗಿ ದೇಹಾಂತರ್ಗತ ಆತ್ಮವು ಬ್ರಹ್ಮಾಂಡದೊಳಗಿರುವ ಪರಮಾತ್ಮ ಚೇತನದೊಳಗೆ ಬೆರೆಯುವುದು. ಈ ವಚನದಲ್ಲಿ ಬರುವ ಅನುಭವವು ಭಾವಲಿಂಗೈಕ್ಯ ಸ್ಥಿತಿಗೆ ಸಂಬಂಧಿಸಿದ್ದಾಗಿದೆ.

951. ಬೆಳಗುಗಳ ಕೂಟ

ಸಮಸ್ತ ಕತ್ತಲೆಯ ಮುಸಕವ ಕಳೆದಿಪ್ಪ ಇರವ ನೋಡಾ!
ಬೆಳಗಿಗೆ ಬೆಳಗು ಸಿಂಹಾಸನವಾಗಿ,
ಬೆಳಗು ಬೆಳಗ ಕೂಡಿದ ಕೂಟವ
ಲಿಂಗದೇವಯ್ಯ ತಾನೆ ಬಲ್ಲ! –ಬವದೀ. 953

ಒಂದು ಮಾನಸಿಕ ಸ್ಥಿತಿ ಪ್ರಾಪ್ತವಾಗುತ್ತದೆ. ಆಗ ಯಾವ ಬಗೆಯ ಕತ್ತಲೆಯೂ ಇರುವುದಿಲ್ಲ. ಇಂದ್ರಿಯಗಳಲ್ಲಿ ವಿಕಾರದ ಕತ್ತಲೆ ಇರುವುದಿಲ್ಲ. ಬುದ್ಧಿಯಲ್ಲಿ ಅಜ್ಞಾನದ ಕತ್ತಲೆ ಇರುವುದಿಲ್ಲ. ಮನಸ್ಸಿನಲ್ಲಿ ಸಂಕಲ್ಪ–ವಿಕಲ್ಪಗಳ ಹೊಯ್ದಾಟದ ಕತ್ತಲೆ ಇರುವುದಿಲ್ಲ. ಆಗ ಬೆಳಗಿಗೆ ಬೆಳಗು ಸಿಂಹಾಸನವಾಗುತ್ತದೆ. ಪರಮಾತ್ಮ ಎನ್ನುವ ಬೆಳಗನ್ನು ಕುಳ್ಳಿರಿಸಿಕೊಳ್ಳಲು ಜೀವಾತ್ಮ ಎನ್ನುವ ಬೆಳಗು ಸಿಂಹಾಸನ(ಪೀಠ)ವಾಗುತ್ತದೆ. ನಂತರ ಇವೆರಡೂ ಪರಸ್ಪರ ಒಂದಾಗುತ್ತವೆ. ಈ ಅಂಗ–ಲಿಂಗ ಲೀಲಾವಿನೋದ ಲಿಂಗದೇವರಿಗೆ ಮಾತ್ರ ವೇದ್ಯವಾಗುತ್ತದೆ.

952. ಆರೂಢದ ಕೂಟ

ಅಂತರಂಗ ಬಹಿರಂಗ ಆತ್ಮಸಂಗ ಒಂದೇ ಅಯ್ಯಾ!
ನಾದಬಿಂದುಕಳಾತೀತ, ಆದಿಯಾಧಾರ ನೀನೇ ಅಯ್ಯಾ!
ಆರೂಢದ ಕೂಟದ ಸುಖವ ಲಿಂಗದೇವಯ್ಯ ತಾನೇ ಬಲ್ಲ! –ಬವದೀ. 954

ಲಿಂಗದೇವನ ಸಾಮರಸ್ಯದ ಸುಖವು ಅಂತರಂಗ ಬಹಿರಂಗಗಳನ್ನೆಲ್ಲ ತುಂಬಿಕೊಂಡಿದೆ. ದೇವನು ನಾದ ಬಿಂದು ಕಳೆಗಳಿಗೆ ಅತೀತನಾಗಿದ್ದಾನೆ. ಈ ಜಗತ್ತಿನ ಆದಿ(beginning)ಯೂ ಮತ್ತು ಆಧಾರ(support)ವೂ ಆಗಿದ್ದಾನೆ. ಎಲ್ಲಕ್ಕೂ ಅತೀತವಾದ ಸುಖ –ದಿವ್ಯಾನಂದವನ್ನು ನೀಡಿದ ಲಿಂಗದೇವನು ಮಾತ್ರ ಆ ಆನಂದದ ಮರ್ಮವನ್ನು ಬಲ್ಲನು.

953. ಸ್ವಯಂಭು ಸ್ವರೂಪ

ಆದಿ ಅನಾದಿಗಳಿಲ್ಲದಂದು, ಸದಾಶಿವನಿಲ್ಲದಂದು,

ಶಿವನಿಲ್ಲದಂದು, ಏನೆಂಬುದೇನು ತಾನಿಲ್ಲದಂದು,
ಲಿಂಗದೇವಯ್ಯ ತನ್ನ ತಾನೇನೆಂದು ಅರಿಯನಂದು. –ಬವದೀ. 955

ಆದಿ ಎಂದರೆ ಈ ಜಗತ್ತು ಪ್ರಾರಂಭವಾದ ಸಮಯ. ಅನಾದಿ ಎಂದರೆ ಅದಕ್ಕೂ ಮುಂಚಿನದು. ಸಮಯದ ಕಲ್ಪನೆ ಪ್ರಾರಂಭವಾದುದು ಸೃಷ್ಟಿ ರಚನೆ ಆದಾಗಿನಿಂದ. ಅದಕ್ಕೂ ಹಿಂದಿನ ಸಮಯದಲ್ಲಿ ಸದಾಶಿವ–ಸೃಷ್ಟಿಕರ್ತನು ಇನ್ನೂ 'ಆಗಿರಲಿಲ್ಲ.' ಜಗತ್ತಿನ ಪ್ರಥಮ ಯೋಗಿಯಾದ ಶಿವನೂ ಇನ್ನೂ ಹುಟ್ಟಿರದಾಗ. ಇನ್ನೂ ಏನೂ ಚಟುವಟಿಕೆಗಳು ನಡೆಯದೆ ಇದ್ದಾಗ ಲಿಂಗದೇವನು ತನ್ನ ಅರಿವು ಇಲ್ಲದಂತೆ ಇದ್ದನು, ನಿರ್ವಿಕಾರ ಸ್ಥಿತಿಯಲ್ಲಿ.

954. ಲಿಂಗದೇವನ ಲೀಲಾವಿಲಾಸ

ಕಾಮ್ಯ ಕಲ್ಪಿತಂಗಳಿಲ್ಲದೆ, ನಿಮ್ಮಿಂದ ನೀವೆ ಸ್ವಯಂಭುವಾಗಿದ್ದಿರಯ್ಯ,
ನಿಮ್ಮ ಪರಮಾನಂದದ ಪ್ರಭಾಪರಿಣಾಮದಲ್ಲಿ ಒಂದನಂತಕಾಲವಿದ್ದಿರಲ್ಲಾ,
ನಿಮ್ಮಾದ್ಯಂತವ ನೀವೆ ಅರಿವುತಿದ್ದಿರಲ್ಲಾ,
ನಿಮ್ಮ ಸ್ವಭಾವದುದಯವ ನೀವೆ ಬಲ್ಲಿರಿ, ಲಿಂಗದೇವಾ. –ಬವದೀ. 956

ಸ್ವಯಂಭು ಎಂದರೆ ತನ್ನಲ್ಲಿ ತಾನೇ ಹುಟ್ಟಿದ್ದು. ದೇವನಿಗೆ "ಅದೊಂದು" ಸ್ಥಿತಿ ಇತ್ತು. ಆಗ ಅವನಿಗೆ ಯಾವುದೇ ಕಾಮ್ಯ–ಬಯಕೆ. ಆಸೆ ಇರಲಿಲ್ಲ. ಯಾವ ಕಲ್ಪಿತವೂ ಇರಲಿಲ್ಲ. ಸ್ವಯಂಭು ದೇವನು ತನ್ನ ಪರಮಾನಂದದ ಸ್ಥಿತಿಯಲ್ಲಿಯೇ ಅನಂತ ಕಾಲ ಇದ್ದನು. ತನ್ನಿಂದ ಭಿನ್ನವಾದ ಬೇರೆನೂ ವಸ್ತುವಿರಲಿಲ್ಲ. ಹೀಗಾಗಿ ತನ್ನ ಧ್ಯಾನದಲ್ಲಿಯೇ ತಾನು ಮೈಮರೆತಿದ್ದ. ನಂತರ ಅವನಲ್ಲಿ ತಾನು ಜಗತ್ತನ್ನು ಸೃಷ್ಟಿ ಮಾಡಲು ಬಲ್ಲೆ ಎಂಬ ಅರಿವು ಮೂಡಿತು. ಇಂಥ ಸ್ವಭಾವದ ಉದಯವನ್ನು "ದೇವಾ, ನೀವೇ ಬಲ್ಲಿರಿ. ನಮ್ಮ ಕಲ್ಪನೆಗೆ ಇದು ಕಾಲಾತೀತವಾದುದು." ಎನ್ನುತ್ತಾರೆ ಗುರು ಬಸವಣ್ಣನವರು.

955. ಪಿಂಡಸ್ಥ ಚೈತನ್ಯ

ಕಲ್ಲೊಳಗೆ ಹೊನ್ನುಂಟು, ಮರದೊಳಗೆ ಅಗ್ನಿಯುಂಟು,
ಹಾಲೊಳಗೆ ತುಪ್ಪವುಂಟು,
ಅಂತರ್ಯಾಮಿಯಲ್ಲಿ ಶಿವನಿಹನು.
ಇದೇನು ಕಾರಣ ? ಕತ್ತಲೆ ಕಾಣಬಾರದು,
ತೋರಬಲ್ಲ ಗುರು ಸುಳಿಯನು, ಲಿಂಗದೇವಾ. –ಬವದೀ. 957

ಬಂಗಾರದ ಅದಿರಿನಲ್ಲಿ ಬಂಗಾರವೆಂಬ ಲೋಹವಿದೆ. ಆದರೆ ಅದನ್ನು ಪಡೆದುಕೊಳ್ಳಬೇಕಾದರೆ ಸಾಕಷ್ಟು ಪ್ರಯತ್ನ ಮಾಡಬೇಕು. ಮರ(ಕಟ್ಟಿಗೆ)ದೊಳಗೆ ಅಗ್ನಿ ಇರುವುದು. ಅದು ಜಾಗೃತಗೊಳ್ಳಬೇಕಾದರೆ ಹೊರಗಿನಿಂದ ಕಿಡಿ ಹಚ್ಚಬೇಕಾಗುವುದು. ಹಾಲಿನಲ್ಲಿ ತುಪ್ಪವಿದೆ. ಅದನ್ನು ಕರಗತ ಮಾಡಿಕೊಳ್ಳಬೇಕಾದರೆ ಕಾಯಿಸಬೇಕು, ಹೆಪ್ಪು ಹಾಕಬೇಕು, ಮೊಸರು ಕಡೆಯಬೇಕು. ಬೆಣ್ಣೆಯನ್ನು ಸಂಗ್ರಹಿಸಿ ಕರಗಿಸಬೇಕು. ಅದೇ ರೀತಿಯಲ್ಲಿ ಅಂತರ್ಯಾಮಿಯಲ್ಲಿ ದೇವನಿದ್ದಾನೆ. ಪ್ರತಿಯೊಬ್ಬರಲ್ಲೂ ದೇವನಿದ್ದರೂ ಅವನು ಕಾಣಬರುತ್ತಿಲ್ಲವೇಕೆ ? ಅಜ್ಞಾನದ ಕತ್ತಲೆಯೇ ತುಂಬಿ ತುಳುಕುತ್ತಿದೆ. ನಿಧಿಯಂತೆ ಒಳಗೆ ಬಚ್ಚಿಡಲ್ಪಟ್ಟ ಆತ್ಮವನ್ನು ತೋರಿಸಬಲ್ಲ ಗುರು ಸುಳಿಯುತ್ತಿಲ್ಲ. ಗುರುದರ್ಶನವಾಗಿ ಲಿಂಗದೇವನ ಪರಿಜ್ಞಾನ ಉಂಟಾದಾಗ ತನ್ನೊಳಗೆ ಇರುವ ಆತ್ಮದ ದರ್ಶನವಾಗುತ್ತದೆ.

956. ಸೃಷ್ಟಿಯ ಲೀಲೆ

ಕೀಟಕ ಸೂತ್ರದ ನೂಲ ಗೂಡಮಾಡಿ ಸುತ್ತಿರ್ಪಂತೆ–
ಸೂತ್ರಕ್ಕೆ ನೂಲನೆಲ್ಲಿಂದ ತಂದಿತ್ತಯ್ಯಾ?
ರಾಟಿಯಿಲ್ಲ ಅದಕ್ಕೆ ; ಹಂಜಿ ಮುನ್ನವೆ ಇಲ್ಲ, ನೂತವರಾರೋ?
ತನ್ನೊಡಲ ನೂಲ ತೆಗೆದು ಪಸರಿಸಿ, ಅದರೊಳು ಪ್ರೀತಿಯಿಂದೊಲಿದಾಡಿ,
ತುದಿಯಲ್ಲಿ ತನ್ನೊಳಗದ ಮಡಗಿಕೊಂಡಿಪ್ಪಂತೆ,

ತನ್ನಿಂದಾದ ಜಗವ ತನ್ನೊಳಗೈದಿಸಿಕೊಳಬಲ್ಲ
ನಮ್ಮ ಲಿಂಗದೇವರು. –ಬವದೀ. 958

ಜೇಡರ (ರೇಷ್ಮೆ)ಹುಳುವು ನೂಲಿನ ಎಳೆಯಿಂದ ಬಲೆ(ಗೂಡು)ಯನ್ನು ಮಾಡಿ ಹರಡುವುದು. ಬಲೆಗೆ ಬೇಕಾದ ನೂಲನ್ನು ಎಲ್ಲಿಂದ ತಂದಿತು? ನೂಲಲು ರಾಟೆಯಿಲ್ಲ; ಹಂಜಿ (ದಾರ) ಮೊದಲೇ ಇಲ್ಲ. ನೇಯ್ದವರ್ಯಾರೊ ? ತನ್ನ (ಬಾಯೊಳಗಿನ ರಸ) ಒಡಲೊಳಗಿನ ನೂಲನ್ನು ತೆಗೆದು, ಬಲೆಯನ್ನಾಗಿ ನೇಯ್ದು, ಅದರಲ್ಲಿ ಪ್ರೀತಿಯಿಂದ ನಲಿದಾಡಿ, ತನಗೆ ಸಾಕೆನಿಸಿದಾಗ ಅದನ್ನು ಉಂಡೆ ಮಾಡಿ ತನ್ನ ಶರೀರದ ಕೆಳಭಾಗದಲ್ಲಿ ಇಟ್ಟುಕೊಳ್ಳುತ್ತದೆ. ಅದೇ ರೀತಿ ಲಿಂಗದೇವನು ತನ್ನ ಅಂತರ್ಗತವಾದ ಶಕ್ತಿಯಿಂದ ಜಗತ್ತೆಂಬ ಬಲೆಯನ್ನು ನೇಯ್ದು (ಚೈತನ್ಯಾತ್ಮಕರಾದ ಜೀವಾತ್ಮರೆಂಬ ಮರಿಗಳನ್ನು ಆಡಬಿಟ್ಟು) ಲೀಲೆಯಾಡುವನು. ಲೀಲೆ ಸಾಕೆನಿಸಿದಾಗ ಜಗತ್ತನ್ನು ತನ್ನೊಳಗೆ ಅಡಗಿಸಿಕೊಂಡು ಬಿಡುವನು.

ಪ್ರತಿಯೊಂದು ವಸ್ತುವು ಉತ್ಪತ್ತಿಯಾಗಲು ಎರಡು ಕಾರಣಗಳು ಅವಶ್ಯ, ಒಂದು ಉಪಾದಾನ ಕಾರಣ. ಇನ್ನೊಂದು ನಿಮಿತ್ತ ಕಾರಣ. ಯಾವುದರಿಂದ ವಸ್ತುವು ಮಾಡಲ್ಪಟ್ಟಿದೆಯೋ ಅದು ಉಪಾದಾನ ಕಾರಣ. ಯಾರು ವಸ್ತುವು ನಿರ್ಮಾಣವಾಗಲು ಕಾರಣರೋ ಅವರು ನಿಮಿತ್ತ ಕಾರಣ. ಉದಾ: ಮಡಕೆಗೆ ಮಣ್ಣು ಉಪಾದಾನ ಕಾರಣ. (material cause), ಕುಂಬಾರನು ನಿಮಿತ್ತ ಕಾರಣ (efficient cause) ಆಭರಣಕ್ಕೆ ಬಂಗಾರವು ಉಪಾದಾನ ಕಾರಣ, ಅಕ್ಕಸಾಲಿಗ ನಿಮಿತ್ತ ಕಾರಣ. ಈ ಜಗತ್ತಿಗೆ ದೇವರು ಎಂಥಾ ಕಾರಣ? ಉಪಾದಾನ ಕಾರಣವೊ, ನಿಮಿತ್ತ ಕಾರಣವೊ? ಗುರು ಬಸವಣ್ಣನವರ ಮೇಲ್ಕಂಡ ವಚನದ ಪ್ರಕಾರ ದೇವರು ಈ ಸೃಷ್ಟಿಗೆ ಅಭಿನ್ನ ನಿಮಿತ್ತೋಪಾದಾನ ಕಾರಣ. ಹೇಗೆ ಜೇಡರ ಹುಳು (ಮತ್ತು ರೇಷ್ಮೆ ಹುಳು) ಬಲೆಗೆ ಜೊಲ್ಲು ರಸ ನೀಡಿ ಉಪಾದಾನ ಕಾರಣವಾಗಿ, ತಾನೆ ನೇಯ್ದು ನಿಮಿತ್ತ ಕಾರಣವೂ ಆಗುವಂತೆ ದೇವನು ತನ್ನ ಅಂತರ್ಗತ ಶಕ್ತಿಯಿಂದ ಜಗತ್ತನ್ನು ಸೃಷ್ಟಿಸಿ ತಾನೇ ನಿಮಿತ್ತ ಕಾರಣನೂ ಆಗುವನು, ಉಪಾದಾನ ಕಾರಣನೂ ಆಗುವನು. ಹೀಗಾಗಿ ಅವನು ಅಭಿನ್ನನಿಮಿತ್ತೋಪಾದಾನ ಕಾರಣನು.

957. ಸೃಷ್ಟಿಯು ದೇವರ ಸಂಕಲ್ಪ

ಆದಿಪುರುಷನ ಮನವು ಮಹದಲ್ಲಿ ನಕ್ಕಾಡೆ,
ಮತ್ತಲ್ಲಿಯೆ ಆನಂದದಿಂದ ಆ ನಿರವಯವು ಬೆಸಲಾಯಿತ್ತು.
ಧರೆ, ಅಂಬರ, ವಾರಿಧಿ ಸಹಿತ,
ಜಾರೆಯೆಂದಡೆ ಜಗದಲ್ಲಿ ನಿಂದವು ಚೌರಾಸಿಲಕ್ಷ ಜೀವಜಾಲಗಳು.
ಹೋರೆಯೆಂದಡೆ ಆಕಾಶದಲ್ಲಿ ನಿಂದರು
ಗರುಡ ಗಂಧರ್ವ ಸಿದ್ಧ ವಿದ್ಯಾಧರ ದೇವರ್ಕಳು
ಮೊದಲಾದ ದೇವಸಮೂಹಂಗಳೆಲ್ಲ
ಲಿಂಗದೇವಾ, ನೀವು ಮನದಲ್ಲಿ ಸಂಕಲ್ಪಿಸಿ ಆಗೆಂದಡೆ ಆದವು. –ಬವದೀ. 959

ಆದಿ ಪುರುಷನೆಂದರೆ ಸೃಷ್ಟಿಕರ್ತನು, ಅವನ ಮನಸ್ಸು ನಕ್ಕು ಆಡಲು ಆ ಆನಂದದ ಪರಿಣಾಮವಾಗಿ ನಿರವಯನಾದ ಪರಮಾತ್ಮ ಸೃಷ್ಟಿ ಎಂಬ ಶಿಶುವನ್ನು ಹೆರಲು ಸನ್ನದ್ಧವಾಗಿ ಗರ್ಭ ಧರಿಸಿದ. ಪೃಥ್ವಿ, ಆಕಾಶ, ಸಮುದ್ರ ಸಹಿತ ಅಚರವಾದ ಜಗತ್ತು ಮತ್ತು ಹದಿನಾಲ್ಕು ಲಕ್ಷ ಜೀವಜಾಲಗಳು ಸೃಷ್ಟಿಯಾದವು. ದೇವರು 'ಹೋರೆ' ಎಂದು ಕೈ ಮಾಡಿದಾಗ ಆಕಾಶದಲ್ಲಿ ಗರುಡ, ಗಂಧರ್ವ, ಸಿದ್ಧ, ವಿದ್ಯಾಧರ, ದೇವತೆಗಳು ನಿಂತರು. ಹೀಗೆ ಲಿಂಗದೇವನು ಮನದಲ್ಲಿ ಸಂಕಲ್ಪಿಸಿ 'ಆಗು' ಎಂದಡೆ ಸೃಷ್ಟಿಯ ರಚನೆಯಾಯಿತು.

958. ಗುರು ಬಸವಣ್ಣನ ಸಾಧನೆ

ಕಕ್ಷೆ ಕರಸ್ಥಲ ಉತ್ತಮಾಂಗ, ಉರಸಜ್ಜೆ ಅಂಗಸೋಂಕು
ಅಮಳೋಕ್ಯವೆಂಬುದ
ನಾನು ಮನದಲ್ಲಿ ಅರಿಯದಂದು, ಭಾವ ನಿರ್ಭಾವವೆಂಬುದನರಿದು
ಆಯತ ಸ್ವಾಯತವ ಮಾಡಲ್ಕೆ ಬಂದ ಪದಾರ್ಥವು
ಲಿಂಗಮುಖದಲ್ಲಿ ಅರ್ಪಿತವಾಗದೆಂದು,

ಜಂಗಮಮುಖದಲ್ಲಿ ಬಂದ ಪದಾರ್ಥವಲ್ಲದೆ ಅರ್ಪಿತವಾಗದೆಂದು,
ಆ ಜಂಗಮವನೇ ಮನದಲ್ಲಿ ನೆನೆದುಕೊಂಡು.
ಆ ಜಂಗಮದಾಸೋಹಕ್ಕೆ ಎನ್ನ ಮನವು ವೇದ್ಯವಾದಲ್ಲಿ
ಅಂಗದ ಮೇಲೆ ಲಿಂಗವುಳ್ಳದೆಲ್ಲವೂ ಸಂಗಮನಾಥನೆಂದರಿದಲ್ಲಿ,
ಲಿಂಗವೂ ಹುಸಿ, ಜಂಗಮವೂ ಹುಸಿಯೆಂದು
ಪರವಾದಿ ಬಿಜ್ಜಳನು ಸಂಪಾದಿಸುವಲ್ಲಿ,
ಅವರನೂ ಆದಿಗಣೇಶ್ವರನೆಂದರಿಯದೆ ತರ್ಕಿಸುವಲ್ಲಿ,
ಅವನೆನ್ನ ಭಕ್ತಿಗೆ ಒರೆಗಲ್ಲಾದಲ್ಲಿ,
ಆತನು ಭಕ್ತಿಯ ಪಥವಲ್ಲೆಂಬುದ, ನಾನಹುದೆಂಬುದ-
ಈ ಎರಡನೂ ನೀನು ಸೂತ್ರಧಾರಿಯಾಗಿ ಆಡಿಸುವಲ್ಲಿ,
ಶಿವಭಕ್ತಿಯ ಮುಖಮುಸುಕ ತೆಗೆವಲ್ಲಿ,
ಮೂವತ್ತಾರು ಕೊಂಡೆಯವ ಪರಿಹರಿಸಿ
ಎಂಬತ್ತೆಂಟು ಪವಾಡವ ಮೆರೆವಲ್ಲಿ,
ಮುನ್ನೂರರುವತ್ತು ಸತ್ತ ಪ್ರಾಣವನೆತ್ತುವಲ್ಲಿ
ಅಂದು ನೀನೇನಾಗಿರ್ದೆ ಹೇಳಾ ಲಿಂಗದೇವಾ, –ಬವದೀ. 960

ಪದಾರ್ಥಗಳನ್ನು ಸಹಜ ರೂಪದಲ್ಲಿ ಸ್ವೀಕರಿಸದೆ ಪ್ರಸಾದ ರೂಪದಲ್ಲಿ ಸ್ವೀಕರಿಸಬೇಕೆಂದು ಇಷ್ಟಲಿಂಗವನ್ನು ಆಯತ ಮತ್ತು ಸ್ವಾಯತ ಮಾಡಲು ನಾನು ಯತ್ನಿಸಿದೆ. ವಿವಿಧ ಕಾಯಕಗಳವರು ತಮ್ಮ ಕಾಯಕಕ್ಕೆ ಅನುಕೂಲವಾಗುವಂತೆ ಇಷ್ಟಲಿಂಗವನ್ನು ರಟ್ಟೆ, ಕರ, ಶಿರಸ್ಸು, ಎದೆಯಭಾಗ, ಕುತ್ತಿಗೆ ಹೀಗೆ ಶರೀರಕ್ಕೆ ತಾಗುವಂತೆ (ಅಂಗ ಸೋಂಕು) ಧರಿಸಿಕೊಂಡು, ಸ್ವೀಕರಿಸುವ ಪದಾರ್ಥಗಳನ್ನೆಲ್ಲ ಲಿಂಗಮುಖದಲ್ಲಿ ಅರ್ಪಿತ ಮಾಡಲು ಕಲಿಸಿದೆ. (ಗುದ್ದಲಿ ಕಾಯಕ ಮಾಡುವವರು ರಟ್ಟೆಗೆ ಇಲ್ಲವೇ ಕುತ್ತಿಗೆಗೆ ಹತ್ತಿರದಲ್ಲಿ ಇಷ್ಟಲಿಂಗವನ್ನು ಕಟ್ಟುವರು.) ಕೇವಲ ಲಿಂಗಪೂಜೆಯೊಂದೇ ಜೀವನವನ್ನು ಪರಿಪೂರ್ಣಗೊಳಿಸದೆಂದು ಜಂಗಮ ಸೇವೆಯನ್ನು ಬೋಧಿಸಿದೆ. ದಾಸೋಹ ಎಂಬ ಸೇವಾ ಕೈಂಕರ್ಯವನ್ನು ಕಲಿಸಿದೆ. ಅಂಗದ ಮೇಲೆ ಇಷ್ಟಲಿಂಗವನ್ನು ಧರಿಸಿದವರೆಲ್ಲರೂ ಸಮಾನರು ಎಂದು ಭಾವಿಸಿ ನಾನು ಆಚರಿಸುವಲ್ಲಿ ಬಿಜ್ಜಳ ಮಹಾರಾಜ ಇದನ್ನು ಹುಸಿ ಎಂದು ತರ್ಕಿಸಿದ. ಇಷ್ಟಲಿಂಗಧಾರಣೆಯಾದ ಮಾತ್ರಕ್ಕೆ ಜಾತಿಗಳು ಅಳಿಯುತ್ತವೆಯೇ? ಎಲ್ಲರೂ ಸಮಾನರಾಗಲು ಸಾಧ್ಯವೇ ? ಎಂದು ವಾದಿಸಿದ. ಒಂದು ದೃಷ್ಟಿಯಿಂದ ಬಿಜ್ಜಳನೂ ಒಬ್ಬ ಗಣೇಶ್ವರನೆ ! ಏಕೆಂದರೆ ಆತ ನನ್ನ ಭಕ್ತಿಗೆ ಒರೆಗಲ್ಲಾದ. ಭಕ್ತಿಯು ಶಕ್ತಿಯುತವಾದುದೆಂದು ನಾನು ಅದು ಸುಳ್ಳೆಂದು ಬಿಜ್ಜಳ ವಾದಿಸಿದೆವು. ಈ ಎರಡೂ ವೈರುಧ್ಯಗಳನ್ನು ಸೂತ್ರಧಾರಿಯಾಗಿ ಆಡಿಸಿದವನು ನೀನು. ಶಿವಭಕ್ತಿಯ ಮುಖದ ಮುಸುಕನ್ನು ತೆಗೆದು ಭಕ್ತಿಯು ಪ್ರಜ್ವಲಿಸುವಂತೆ ಮಾಡಿದೆ. ಮೂವತ್ತಾರು ಚಾಡಿಯ ಆರೋಪಗಳು ಬಂದಾಗ ಅವನ್ನು ಪರಿಹರಿಸಿ ನನ್ನನ್ನು ಮತ್ತಷ್ಟು ಪ್ರಜ್ವಲಿಸಿದೆ. ನನ್ನ ಕೈಲಿ ಎಂಬತ್ತೆಂಟು ಪವಾಡಗಳನ್ನು ಮಾಡಿಸಿದೆ. ಮುನ್ನೂರು ಅರವತ್ತು ಜನ ಸತ್ತವರಿಗೆ ಪ್ರಾಣದಾನವನ್ನು ನನ್ನಿಂದ ಮಾಡಿಸಿದೆ. ಲಿಂಗದೇವಾ, ನಿನ್ನ ಲೀಲೆ ಅಗಾಧ !

959. ಸಂಸಾರ ಸರ್ಪನ ಆಟ

ಸಂಸಾರಸರ್ಪನ ಹೇಳಿಗೆಯ ಬಿಡಿಸಲು ಬಾರದು,
ಬಿಟ್ಟಡೆ ಕಟ್ಟಲು ಬಾರದು ನೋಡಾ. ಬಿಡಿಸುವ ಬೆಡಗಿನ್ನೆಂತೊ?
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ
ವಿಷದ ಹಲ್ಲಿಂಗಾವುದು ಗಾರುಡವಯ್ಯಾ,
ಮಹಾದಾನಿ ಲಿಂಗದೇವಾ?
–ಬವದೀ. 961

ನಾನು, ನನ್ನದು, ನನ್ನಿಂದ, ನನಗಾಗಿ ಎಂಬ 'ನಾನಿನ' ಸರಪಳಿಯಿಂದ ಕೂಡಿದ ಸಂಸಾರ ಎಂಬ ಸರ್ಪಕ್ಕೆ ಆರು ವಿಷದ ಹಲ್ಲುಗಳು. ಈ ಸರ್ಪವು ಶರೀರ ಎಂಬ ಬುಟ್ಟಿಯಲ್ಲಿ ಕುಳಿತಿರುವುದು. ಬುಟ್ಟಿಯ

ಮುಚ್ಚಳ ತೆಗೆಯುತ್ತಲೇ ಬುಸ್ಸೆಂದು ಸರ್ಪವು ಏಳುವಂತೆ ಶರೀರದ ಚಟುವಟಿಕೆಗಳಿಂದಾಗಿ ಈ ಸಂಸಾರ ಸರ್ಪವು ಹೆಡೆ ಬಿಚ್ಚುವುದು. ಈ ಸಂಸಾರ ಸರ್ಪನ ನಿಯಂತ್ರಿಸುವ ವಿಧಾನ ಹೇಗೋ ಮಹಾದಾನಿ ಲಿಂಗದೇವ ?

960. ಅಜ್ಞಾನವೇ ಭವಕ್ಕೆ ಬೀಜ

ಅಜ್ಞಾನದಿಂದ ಹುಟ್ಟಿತ್ತು ಅಹಂ ಮಮತೆ,
ಅಜ್ಞಾನದಿಂದ ಹುಟ್ಟಿತ್ತು ಮನಸ್ಸಂಚಲ,
ಅಜ್ಞಾನದಿಂದ ಹುಟ್ಟಿತ್ತು ಇಂದ್ರಿಯೋದ್ರೇಕ,
ಅಜ್ಞಾನದಿಂದ ಹುಟ್ಟಿತ್ತು ದೇಹಮೋಹ,
ಅಜ್ಞಾನದಿಂದ ಹುಟ್ಟಿತ್ತು ಅತಿಕಾಂಕ್ಷೆ,
ಅಜ್ಞಾನದಿಂದ ಹುಟ್ಟಿತ್ತು ತ್ರಿವಿಧಮಲ,
ಅಜ್ಞಾನದಿಂದ ಹುಟ್ಟಿತ್ತು ಸಂಸಾರ,
ಅಜ್ಞಾನದಿಂದ ಹುಟ್ಟಿತ್ತು ರಾಗದ್ವೇಷ,
ಅಜ್ಞಾನದಿಂದ ಹುಟ್ಟಿತ್ತು ಸರ್ವಪ್ರಪಂಚು,
ಅಜ್ಞಾನದಿಂದ ಹುಟ್ಟಿತ್ತು ಸರ್ವದುಃಖ,
ಲಿಂಗದೇವಾ, ಈ ಅಜ್ಞಾನಭ್ರಮೆಯ ಕೆಡಿಸಿದಲ್ಲದೆ
ನಿಮ್ಮನೊಡಗೂಡಬಾರದಯ್ಯಾ.
–ಬವದೀ. 962

ಮನುಷ್ಯನ ಎಲ್ಲ ಸಮಸ್ಯೆಗಳಿಗೆ ಅಜ್ಞಾನವೇ ಕಾರಣ. ಆಸೆಯೇ ದುಃಖಕ್ಕೆ ಮೂಲ ಎಂದ ಬುದ್ಧ. ಅಜ್ಞಾನವೇ ದುಃಖಕ್ಕೆ ಮೂಲ ಎನ್ನುತ್ತಾರೆ ಗುರು ಬಸವಣ್ಣನವರು. ನಾನು, ನನ್ನದು ಎಂಬ ಮೋಹ ಮಮಕಾರಗಳು ಅಜ್ಞಾನವಿದ್ದಲ್ಲಿ ಮಾತ್ರ ಸಾಧ್ಯ. ಲೌಕಿಕ ಸಂಬಂಧಗಳನ್ನು ಅತಿಯಾಗಿ ಮನುಷ್ಯ ಹಚ್ಚಿಕೊಳ್ಳಲು ಅಜ್ಞಾನವೇ ಕಾರಣ. ಏನಾದರೂ ಅವಗಡ ಉಂಟಾಗಿ ಒಬ್ಬನೇ ಮಗ ಅಥವಾ ಒಬ್ಬಳೇ ಮಗಳು ಸತ್ತುಹೋದರೆ ಕೆಲವು ತಾಯಿತಂದೆಗಳು ಹುಚ್ಚರೇ ಆಗುವರು, ಅವರು ಅಜ್ಞಾನಿಗಳು. ಏಕೆಂದರೆ ಲೌಕಿಕ ಸಂಬಂಧಗಳು ಈ ಜನ್ಮಕ್ಕಷ್ಟೇ ಸೀಮಿತ. ಜ್ಞಾನಿಗಳಾದ ತಾಯಿತಂದೆಗಳಾದರೆ ಮನೋರೋಗಿಗಳಾಗದೆ ತಮ್ಮ ಋಣಾನುಬಂಧ ಇಷ್ಟೇ ಇತ್ತು ಎಂದು ಸತ್ತು ಹೋದವರ ಹೆಸರಲ್ಲಿ ಉತ್ತಮ ಕೆಲಸ ಮಾಡುವರು. ಮನಸ್ಸಂಚಲ–ಮನಸ್ಸಿನ ಹೊಯ್ದಾಟಕ್ಕೂ ಅಜ್ಞಾನವೇ ಕಾರಣ. ಇಂದ್ರಿಯಗಳು ಉದ್ರೇಕಗೊಳ್ಳುವುದು ಅಜ್ಞಾನದಿಂದಲೆ. ಕಾಮ ಕ್ರೋಧಾದಿಗಳು ಉದ್ರೇಕಗೊಂಡು ವ್ಯಕ್ತವಾಗುವುದು ಇಂದ್ರಿಯಗಳ ಮೂಲಕವೆ. ವಿಷಯ ಸುಖವೇ, ಇಂದ್ರಿಯ ಭೋಗವೇ ಪರಮ ಸುಖ ಎಂದು ನಂಬಿರುವವನು ಬಲು ಬೇಗನೆ ಉದ್ರೇಕಗೊಳ್ಳುವನು. ದೇಹಮೋಹವು ಸಹ ಅಜ್ಞಾನದ ಪ್ರತಿಫಲ. ಶರೀರದ ಸುಖವೇ ನಿಜವಾದ ಸುಖ, ದೇಹದ ಸೌಂದರ್ಯವೇ ನಿಜವಾದ ಸೌಂದರ್ಯ ಎಂದು ದೇಹಮೋಹಿಯಾದವನು ಅಜ್ಞಾನಿಯೇ ಸರಿ. ಸಮಯದ ಬಹುಪಾಲನ್ನು ದೇಹಸೌಂದರ್ಯ ರಕ್ಷಣೆಗಾಗಿ ವ್ಯಯಿಸುವನು. ಅತಿಕಾಂಕ್ಷೆಯು ಅಜ್ಞಾನದ ಫಲ. ಪ್ರತಿಯೊಬ್ಬನಲ್ಲೂ ಆಕಾಂಕ್ಷೆ ಇರಬೇಕು. ಆದರದು ಎಲ್ಲೆ ಮೀರಿ ಅತಿಕಾಂಕ್ಷೆ ಆಗಬಾರದು. ತನ್ನ ಮಿತಿಗೆ ತಕ್ಕಂತೆ ಬದುಕಬೇಕೇ ವಿನಾ ಹುಲಿಯ ಬಣ್ಣ ನೋಡಿ ನರಿ ತನ್ನ ಬಾಲ ಸುಟ್ಟುಕೊಂಡಂತೆ ಇತರರನ್ನು ಅನುಕರಿಸಲು ಹೋಗಬಾರದು. ಜೀವಾತ್ಮನನ್ನು ಸುತ್ತುವರಿದವು ಮೂರು ಮಲಗಳು. 1. ಕಾರ್ಮಿಕ ಮಲ 2. ಮಾಯಾ ಮಲ ಮತ್ತು 3.ಆಣವ ಮಲ. ದುರ್ವೃತ್ತಿಗಳಿಂದ ಕಾರ್ಮಿಕ ಮಲ, ದುರ್ವಿಚಾರದಿಂದ ಮಾಯಾಮಲ, ದುರ್ಭಾವದಿಂದ ಆಣವ ಮಲ ಸುತ್ತಿಕೊಳ್ಳುತ್ತವೆ. ಅಜ್ಞಾನವೇ ಈ ತ್ರಿವಿಧ ಮಲಕ್ಕೆ ಕಾರಣ. ನಾನು, ನನ್ನದು, ನನ್ನಿಂದ, ನನಗಾಗಿ ಎಂಬ ಸರಪಳಿಯೇ ಸಂಸಾರ. ಈ ಸರಪಳಿಗೂ ಅಜ್ಞಾನವೇ ಕಾರಣ. ರಾಗ ಎಂದರೆ ಅತಿ ಪ್ರೀತಿ, ದ್ವೇಷ ಎಂದರೆ ತೀವ್ರ ತಿರಸ್ಕಾರ. ಯಾರನ್ನಾದರೂ ಅತಿಯಾಗಿ ಪ್ರೀತಿಸುವುದಕ್ಕೂ ಅಥವಾ ದ್ವೇಷಿಸುವುದಕ್ಕೂ ಅಜ್ಞಾನವೇ ಕಾರಣ. ಜ್ಞಾನಿಯು ರಾಗ ದ್ವೇಷಗಳಿಗೆ ಹೊರತಾಗುತ್ತಾನೆ. ಅಜ್ಞಾನಿಯಾದವನು ಪ್ರಾಪಂಚಿಕ ವಿಷಯಗಳಲ್ಲಿ ಅತಿ ಆಸಕ್ತನಾಗುವನು ಅಷ್ಟೇ ಅಲ್ಲ ಮತ್ತು ತನ್ನ ಸುತ್ತಲೂ ವ್ಯವಹಾರದ ಕೋಟೆಯನ್ನೇ ಕಟ್ಟಿಕೊಳ್ಳುತ್ತಾನೆ. ಎಲ್ಲ ದುಃಖಗಳಿಗೂ ಅಜ್ಞಾನವೇ ಕಾರಣ. ಈ ಜಗತ್ತಿನಲ್ಲಿ ಎರಡು ಬಗೆಯ ಸತ್ಯಗಳುಂಟು.

ಒಂದು ಶಾಶ್ವತ ಸತ್ಯ-ಪರಮಾತ್ಮ ಇನ್ನೊಂದು ತೋರಿಕೆಯ ಸತ್ಯ-ಜಗತ್ತು. ತೋರಿಕೆಯ ಸತ್ಯವನ್ನು ಅತಿಯಾಗಿ ನಂಬಿ ಶಾಶ್ವತ ಸತ್ಯವನ್ನು ಕಡೆಗಣಿಸಿದರೆ ವ್ಯಕ್ತಿಯು ದುಃಖಕ್ಕೆ ಈಡಾಗುವನು. ಅಜ್ಞಾನ ಎಂಬುದು ಭ್ರಮೆಗೆ ಕಾರಣವಾಗಿ ಶಾಶ್ವತವಾದುದನ್ನು ಅಶಾಶ್ವತವೆಂದು, ಅಶಾಶ್ವತವಾದುದನ್ನು ಶಾಶ್ವತವೆಂದು ನಂಬುವಂತೆ ಮಾಡುತ್ತದೆ. ಭ್ರಮೆಯ ಮುಸುಕು ಇರುವವರೆಗೆ ಲಿಂಗದೇವನ ಸಾಮರಸ್ಯ ಸಾಧ್ಯವಿಲ್ಲ. ಅದನ್ನು ಹರಿದು ನಿಮ್ಮನ್ನು ಒಡಗೂಡಬೇಕು ಎನ್ನುತ್ತಾರೆ ಗುರು ಬಸವಣ್ಣನವರು.

961. ದೇವನ ಚೆಲ್ಲಾಟ, ಜೀವನ ಸಂಕಟ

ಜಗತ್ತೆಂಬ ಯಂತ್ರದ ಹಾಹೆಗೆ
ಅಜ್ಞಾನವೆಂಬ ತುಪವ ತೊಡಿಸಿ,
ಅಹಂ ಮಮತೆಯೆಂಬ ಸೊಕ್ಕನಿಕ್ಕಿ, ಬಾರದ ಬಟ್ಟೆಯಲ್ಲಿ ಬರಿಸಿ,
ಕಾಣದ ದುಃಖವ ಕಾಣಿಸಿ, ಉಣ್ಣದ ಅಪೇಯವನುಣಿಸಿ,
ಮಾರಾರಿ ವಿನೋದಿಸಿದೆಯಯ್ಯಾ, ಲಿಂಗದೇವಾ. -ಬವದೀ. 963

ಜಗತ್ತು ಎಂಬ ಯಂತ್ರದ ಬೊಂಬೆಗೆ, ಅಜ್ಞಾನ ಎಂಬ ವೇಷವನ್ನು ತೊಡಿಸಿ, ಅಹಂಕಾರ-ಮಮಕಾರ ಎಂಬ ಸೊಕ್ಕನ್ನು ನೀಡಿ ಹೋಗಬಾರದ ದಾರಿಯಲ್ಲಿ ಓಡಾಡಿಸಿ ಬಗೆಬಗೆಯ ದುಃಖವನ್ನು ಉಣ್ಣುವಂತೆ ಮಾಡಿ, ತಿನ್ನಬಾರದ ಅಭಕ್ಷ್ಯವನ್ನೆಲ್ಲ ತಿನ್ನಿಸಿ, ಕುಡಿಯಬಾರದ ಅಪೇಯವನ್ನೆಲ್ಲ ಕುಡಿಸಿ ಲಿಂಗದೇವಾ ನೀನು ವಿನೋದಿಸುತ್ತಿರುವೆ. ನಿನಗೆ ಚೆಲ್ಲಾಟವಾದರೆ ಜೀವಾತ್ಮರಿಗೆ ಪ್ರಾಣಸಂಕಟ !

ಒಂದೊಂದು ಸಂದರ್ಭದಲ್ಲಿ ಒಂದೊಂದು ಉಪಮೆ ಕೊಟ್ಟು ಒಂದು ವಿಚಾರವನ್ನು ಗುರು ಬಸವಣ್ಣನವರು ಪ್ರತಿಪಾದಿಸುತ್ತಾರೆ. ಅದೇ ಅವರ ಅಂತಿಮ ಸೈದ್ಧಾಂತಿಕ ನಿಲುವಲ್ಲ. ಅಜ್ಞಾನದ ವೇಷವನ್ನು ತೊಟ್ಟು, ಅಹಂಕಾರ-ಮಮಕಾರ ಎಂಬ ಸೊಕ್ಕನ್ನು ತುಂಬಿಕೊಂಡು ಹೋಗಬಾರದ ದಾರಿಯಲ್ಲಿ ಹೋಗುವ ಮನುಷ್ಯನ ದೌರ್ಬಲ್ಯಕ್ಕೆ ದೇವರೆ ಕಾರಣ ಎಂಬ ವಿಚಾರಧಾರೆ ಅಂತಿಮವಾದುದಲ್ಲ. "ಸುಖ ಬಂದರೆ ಪುಣ್ಯದ ಫಲವೆಂಬೆನು" ಎಂಬ ವಚನದಲ್ಲಿ "ಕರ್ಮಕ್ಕೆ ಕರ್ತೃವೇ ಕಡೆ ಎಂದೆಂಬೆನು. ನೀ ಮಾಡಿದೊಡೆ ಆಯಿತ್ತೆನ್ನನು" ಎಂದಿದ್ದಾರೆ. ಆದ್ದರಿಂದ ಮೇಲ್ಕಂಡ ವಚನದಲ್ಲಿ ಬಂದಿರುವ ಭಾವ ಅರ್ಥ ಸತ್ಯ. ದೇವರೊಡನೆ ಸಲುಗೆಯಿಂದ ಮಾತನಾಡುವಾಗ ಹೀಗೆ ನುಡಿದಿದ್ದಾರೆ ಎಂದು ತಿಳಿದುಕೊಳ್ಳಬೇಕು.

962. ಶರಣಾಗತಿಯ ಕಾರಣ

ಅರಿವಿನರಿತವ ಕೆಡಿಸಿತ್ತು ಬಡತನವೆಂಬ ರಾಹು,
ಉಳ್ಳವನ ಉಳುವೆಯ ಕೆಡಿಸಿತ್ತು ಮೋಹವೆಂಬ ರಾಹು,
ಕಾಬವನ ಕಾಣಿಕೆಯ ಕೆಡಿಸಿತ್ತು ಕಾಮವೆಂಬ ಕತ್ತಲೆ,
ಎನ್ನ ಮನದ ಭಯಕ್ಕಂಜಿ
ನಿಮ್ಮ ಮರೆಹೊಕ್ಕೆ ಲಿಂಗದೇವಾ. -ಬವದೀ. 964

ಮನುಷ್ಯ ಎಷ್ಟೇ ಜ್ಞಾನಿಯಾದರೂ ಬಡತನ ಎಂಬ ರಾಹು ಸಂಕಷ್ಟವನ್ನೊಡ್ಡಿ ತನ್ನ ಧ್ಯೇಯಾದರ್ಶಕ್ಕೆ ವಿರುದ್ಧವಾಗಿ ನಡೆಯುವಂತೆ ಮಾಡುತ್ತದೆ. ಬಡತನದ ಕಷ್ಟದಿಂದ ತತ್ತರಿಸಿ ಹೋಗುವ ವ್ಯಕ್ತಿ ತಾನಿಟ್ಟುಕೊಂಡ ಆದರ್ಶಗಳನ್ನು ಪಾಲಿಸಲಾಗದ ಒತ್ತಡಕ್ಕೆ ಒಳಗಾಗುತ್ತಾನೆ. ಧನ ಕನಕ ಸಂಪತ್ತನ್ನು ಹೊಂದಿದ ಶ್ರೀಮಂತನನ್ನು ಅದರ ಮೋಹವೆಂಬ ರಾಹು ಆದರ್ಶವಿಹೀನನನ್ನಾಗಿ ಮಾಡುತ್ತದೆ. ಬಹಳ ಜನರನ್ನು ಕುರುಡರಂತೆ (ಕಾಮಾಂಧ) ಮಾಡುವುದು ಕಾಮ. ನಾನು ಎಲ್ಲಿ ಈ ಕೋಟಲೆಗಳಿಗೆ ಒಳಗಾಗುವೆನೋ ಎಂಬ ಅಂಜಿಕೆಯಿಂದ ಲಿಂಗದೇವಾ ನಿನ್ನ ಮೊರೆ ಹೊಕ್ಕಿದ್ದೇನೆ. ಎಂಥ ಪ್ರಸಂಗದಲ್ಲಿಯೂ ನನ್ನ ಅರಿವು ಮಂಕಾಗದಿರಲಿ, ಮೋಹವು ಮುಸುಕದಿರಲಿ, ಕಾಮವು ವಿಚಲಿತಗೊಳಿಸದಿರಲಿ ಎಂದು ನಿನ್ನಲ್ಲಿ ಬೇಡುತ್ತೇನೆ.

963. ನಿದ್ರೆಯ ಮಾಯೆ

ಅಂಧಕಾರವೆಂಬ ಗಹ್ವರದೊಳಗೆ ನಿದ್ರೆಯೆಂಬ ರಾಕ್ಷಸಿ ಗ್ರಹಿಸಿ,

ವೀರರ ನಿಗ್ರಹಿಸಿ ನೀರ ಮಾಡಿ, ಧೀರರ ಧೃತಿಗೆಡಿಸಿ,
ಶಾಪಾನುಗ್ರಹಸಮರ್ಥರ ಸತ್ತಂತಿರಿಸಿ,
ನಿಚ್ಚ ನಿಚ್ಚ ಜೀವನಾಶವ ಮಾಡುತ್ತಿಹಳು ನೋಡಾ, ಲಿಂಗದೇವ
-ಬವದೀ. 965

ಕತ್ತಲೆ ಎಂಬ ಗವಿಯಲ್ಲಿ ಅಡಗಿರುವ ನಿದ್ರೆ ಎಂಬ ರಾಕ್ಷಸಿ ಬಂದು ಆವರಿಸಿಕೊಳುತ್ತಲೇ, ನಿದ್ರೆಯು ವೀರರನ್ನು ನಿಯಂತ್ರಿಸಿ ದುರ್ಬಲಗೊಳಿಸುತ್ತದೆ. ಧೀರರನ್ನು ಧೃತಿಗೆಡಿಸುತ್ತದೆ. ನಿದ್ರೆ ಎಂಬ ಮಾಯೆ ಕವಿಯುತ್ತಲೇ ಶಾಪಾನುಗ್ರಹ ಸಮರ್ಥರಾದ ತಪಸ್ವಿಗಳನ್ನು ಸಹ ಸತ್ತವರನ್ನಾಗಿ ಅದು ಮಾಡುತ್ತದೆ. ಏಕೆಂದರೆ ನಿದ್ರೆ ಎಂದರೆ ಅರ್ಧ ಸಾವು ಎಂದು ಹೇಳಲಾಗುತ್ತದೆ. ನಿದ್ರೆ ಬಂದ ಮನುಷ್ಯನು ಎಚ್ಚರವಿಲ್ಲದೆ ಮಲಗಿರುವ ಕಾರಣ ಅದನ್ನು ನಿತ್ಯದ ಸಾವು ಎಂದು ಗುರು ಬಸವಣ್ಣನವರು ಕರೆಯುತ್ತಾರೆ. ನಿದ್ರೆ ಒಂದು ಅವಶ್ಯಕತೆಯೂ ಅಹುದು ಒಂದು ಉಪಾಧಿಯೂ ಅಹುದು. ವಿಶ್ರಾಂತಿಯನ್ನು ನೀಡುವ ಕಾರಣ ಅದು ಒಂದು ಅವಶ್ಯಕತೆ. ಮೈಮೇಲೆ ಏರಿ ಬಂದ ನಿದ್ರೆ ಪೂಜೆ, ಧ್ಯಾನ, ಅಧ್ಯಯನಗಳಿಗೆ ಅಡ್ಡಿಯನ್ನುಂಟುಮಾಡುವ ಕಾರಣ ಅದು ಉಪಾಧಿಯೂ ಅಹುದು. ಆದ್ದರಿಂದ ನಿದ್ರೆಯನ್ನು ನಿಗ್ರಹಿಸುವುದು ಜ್ಞಾನಿಯ ಲಕ್ಷಣ.

964. ವಿಧಿಯ ಆಟ

ನೋಡಿರೇ ನೋಡಿರೇ ಪೂರ್ವದರ್ಥವ :
ವರುಣ ಹೆಳವ, ರವಿ ಕುಷ್ಠ, ಶುಕ್ರನಂಧಕ,
ಶನಿಗೆ ಸಂಕಲೆ, ಬಲಿಗೆ ಬಂಧನ, ಸೀತೆಗೆ, ದ್ರೌಪದಿಗೆ ಸೆರೆ,
ಹರಿ ಹಂದಿಯಾದ, ಅರುಹಂಗೆ ಲಜ್ಜೆ,
ಬ್ರಹ್ಮನ ಶಿರಹೋಯಿತ್ತು,
ಬಲ್ಲಿದನೆಂಬವನ ಕೊಡೆವಿಡಿಸದೆ ವಿಧಿ?
ಜತ್ತಕನೆಂಬವನ ಕತ್ತೆಯ ಮಾಡಿತ್ತು.
ದಶಮುಖನ ನಾಯ ದೋಣಿಯಲ್ಲಿ ಉಣಿಸಿತ್ತು.
ದೇವೇಂದ್ರನ ಮೈಯ್ಯ ನಾಣುಗೆಡಿಸಿತ್ತು.
ಶೂದ್ರಕನ ತಲೆ ಕಂಚಿಯಾಲದಲ್ಲಿ ನೇರಿತ್ತು. ಲಿಂಗದೇವಯ್ಯಾ,
ನೀ ಮಾಡಿದ ಮಾಯೆ ಅನಂತರನಾಳಿಗೊಂಡಿತ್ತು. -ಬವದೀ. 966

ದೇವತೆಗಳು, ದಾನವರು, ಮಾನವರು, ವಿಧಿಯ ಬಲೆಯಲ್ಲಿ ಸಿಕ್ಕಿ ಸಂಕಷ್ಟ ಅನುಭವಿಸಿದರು.

965. ಜಗತ್ತೆಂಬ ಚಿತ್ರ

ಅಸ್ತಿ ಭಾತಿಯೆಂಬ ಭಿತ್ತಿಯ ಮೇಲೆ,
ಕ್ರೀನಾಮ ರೂಪವೆಂಬ ಚಿತ್ರ ಬರೆಯಿತ್ತು.
ಇಲ್ಲದ ಭಿತ್ತಿಯ ಮೇಲೆ ಉಂಟೆಂಬ ಚಿತ್ರದಂತಿರ್ದಿತ್ತು.
ಎನಗಿದೇ ಮಾಯೆಯಾಗಿ ಕಾಡಿತ್ತು, ಲಿಂಗದೇವ -ಬವದೀ. 967

ಈ ಜಗತ್ತಿನಲ್ಲಿ ಎರಡು ತತ್ತ್ವಗಳಿವೆ. 1. ಪರಮಾತ್ಮ ಚೈತನ್ಯ. 2.ತೋರಿಕೆಯ ಜಗತ್ತು. ಮೊದಲನೆಯದು ಇರುವಿಕೆ, ಎರಡನೆಯದು ತೋರಿಕೆ. ಈ ತೋರಿಕೆಯ ಜಗತ್ತು ನಾಮ ರೂಪ ಕ್ರಿಯೆಗಳಿಂದ ತುಂಬಿದೆ. ಹೀಗಾಗಿ ವೈವಿಧ್ಯಮಯವಾಗಿ ನಮ್ಮ ಕಣ್ಣೆದುರು ಕಾಣಬರುತ್ತದೆ. ವಾಸ್ತವವಾಗಿ ಈ ಜಗತ್ತು ಇಲ್ಲವೇ ಇಲ್ಲ. ಈ ತೋರಿಕೆಯ ಜಗತ್ತೇ ಒಂದು ಭ್ರಾಂತಿ. ಇದು ಮಾಯೆಯಾಗಿ ಕಾಡುತ್ತದೆ.

966. ವೈರಾಗ್ಯದ ಬದುಕು

ನಿಮ್ಮುದರದಲ್ಲಿ ಜನಿಸಿದ ಮಾಯೆ ಮಗಳಾದಳು.
ಮಗಳ ಭೋಗಿಪ ಭಕ್ತರಾದೇವಿಲ್ಲದೆ ನಿಮ್ಮ ಸ್ವತಂತ್ರವೆ ?

ಅರಿದು ವಾದಿಸಬಹುದಲ್ಲದೆ ಮರೆದು ವಾದಿಪುದು
ಮದವಲ್ಲದೆ ಸಹಜವಲ್ಲ ಕಾಣಾ, ಲಿಂಗದೇವಯ್ಯಾ. –ಬವದೀ. 968

ಬಹುಶಃ ಈ ವಚನವು ಗುರು ಬಸವಣ್ಣನವರ ವೈಯಕ್ತಿಕ ಜೀವನಕ್ಕೆ, ದಾಂಪತ್ಯಕ್ಕೆ ಸಂಬಂಧಿಸಿದ್ದಿರಬಹುದು ಎನಿಸುತ್ತದೆ. ಧರ್ಮಪಿತರು ತಮ್ಮ ಸೋದರ ಸೊಸೆ ನೀಲಗಂಗಮ್ಮಳನ್ನು ಮದುವೆಯಾದರು. ಅವರು ಕೆಲವು ಕಾಲ ದಾಂಪತ್ಯ ಜೀವನ ನಡೆಸಿದರು. ಹುಟ್ಟಿದ ಮಗುವಿಗೆ ಬಾಲಸಂಗಯ್ಯ ಎಂದು ಹೆಸರಿಟ್ಟರು. ನಂತರ ದಂಪತಿಗಳು ವೈರಾಗ್ಯದ ಬದುಕನ್ನು ಅಳವಡಿಸಿಕೊಂಡರು.

ಮಡದಿ ಎನ್ನಲಾಗದು ಬಸವಂಗೆ ಎನ್ನನು ;
ಪುರುಷನೆನ್ನಲಾಗದು ಬಸವನ ಎನಗೆ ;
ಉಭಯ ಕುಳವ ಹರಿದು ಬಸವಂಗೆ ಶಿಶುವಾನಾದೆನು ;
ಬಸವನೆನ್ನ ಶಿಶುವಾದನು ;
ಪ್ರಮಥರು ಪುರಾತರು ಸಾಕ್ಷಿಯಾಗಿ
ಸಂಗಯ್ಯನಿಕ್ಕಿದ ದಿವ್ಯವ ಮೀರಿ ಬಸವನೊಳಗಾನಡಗಿದೆ.

ನೀಲಮ್ಮನವರು ಗುರು ಬಸವಣ್ಣನವರಿಗೆ ತಾಯಾದರು, ಮಗಳಾದರು. ಗುರು ಬಸವಣ್ಣನವರು ನೀಲಮ್ಮನವರಿಗೆ ತಂದೆಯಾದರು, ಮಗನಾದರು. ಈ ವಿಷಯ ಒಮ್ಮೆ ಅನುಭವ ಮಂಟಪದಲ್ಲಿ ಚರ್ಚೆಯಾದಂತೆ ತೋರುತ್ತದೆ. ಆಗ ಶರಣರ(ಮಡಿವಾಳ ಮಾಚಿದೇವರ) ಒಂದು ಪ್ರಶ್ನೆಗೆ ಇಲ್ಲಿ ಉತ್ತರ ನೀಡಲಾಗಿದೆ ಎನಿಸುತ್ತದೆ.

"ಲಿಂಗದೇವಾ, ನಿಮ್ಮಲ್ಲಿ ಜನಿಸಿದ ನನ್ನ ಪತ್ನಿ (ಮಾಯೆ) ನನಗೆ ಮಗಳಾದಳು. ಆದ್ದರಿಂದ ಶರಣನು ಮಗಳ ಜೊತೆಗೆ ದಾಂಪತ್ಯ ಮಾಡಲು ಬರುವುದೆ ? ಶರಣ –ಸ್ಥಲಕ್ಕೆ ಏರಿದ ಬಳಿಕ ಶರಣಂಗೆ ಸತಿ ಸಂಗವು ಅತ್ಯಂತ ಘೋರವಾದ ನರಕ. ಆದ್ದರಿಂದ ಶರಣರೇ ತಾವು ವಿಷಯವನ್ನು ಸಮಗ್ರವಾಗಿ ತಿಳಿದು ವಾದಿಸಬೇಕಲ್ಲದೆ ಮರೆತು ವಾದಿಸಬಾರದು. ಮರೆವಿನಿಂದ ವಾದಿಸುವುದು ಅಹಂಕಾರವೇ ಹೊರತು ಶರಣರಿಗೆ ಸಹಜವಾದುದಲ್ಲ.

967. ಹಿಂದಿನದು ಹುಸಿ

ಸಂಜೆಯು ಮಂಜಿನ ಕಪ್ಪು–
ಅಂಜಿದಡೆ ಶಂಕೆ ತದ್ರೂಪವಾಗಿ ನಿಂದಿತ್ತು.
ತನ್ನ ಭಾವದ ನಟನೆ ನಡೆವನ್ನಕ್ಕ ನಡೆಯಿತ್ತು,
ಅದು ನಿಂದಲ್ಲಿಯೇ ನಿಂದಿತ್ತು. ಅದರಂತವನರಿದಡೆ
ಹಿಂದೆ ಹುಸಿ, ಮುಂದೆ ಲಿಂಗದೇವನ ನಿಲವು ತಾನೆ! –ಬವದೀ. 969

ಸಂಜೆಗತ್ತಲು ಕವಿದಿದೆ. ಆ ಮಬ್ಬಿನಲ್ಲಿ ವಸ್ತುಗಳು ಬಗೆಬಗೆಯಾಗಿ ತೋರುತ್ತವೆ. ಒಂದು ಮೋಟು ಮರವಿದೆ ಎಂದುಕೊಳ್ಳುವ. ಅದು ಪೋಲೀಸನ ಕಣ್ಣಿಗೆ ಕಳ್ಳನಾಗಿ, ಕಳ್ಳನ ಕಣ್ಣಿಗೆ ಪೋಲೀಸನಾಗಿ, ಪ್ರೇಮಿಗಳ ಕಣ್ಣಿಗೆ ಪ್ರೇಮಿಯಾಗಿ ತೋರುವುದು. ತನ್ನ ಶಂಕೆಯಿಂದಾಗಿ ಅಂಜಿಕೆ ಉಂಟಾಗುವುದು. ಈ ಅಂಜಿಕೆಗೆ ಕಾರಣ ತನ್ನ ಮನದ ಬಗೆಬಗೆಯ ಭಾವನೆಗಳು. ತನ್ನ ಭಾವದ ನಟನೆ ನಡೆಯುವವರೆಗೆ ಈ ಕಲ್ಪನಾ ವಿಲಾಸ ಸಾಗುತ್ತದೆ. ವಸ್ತು ಮಾತ್ರ ತಾನಿದ್ದಂತೆಯೇ ಇರುವುದು. ಬೆಳಕು ಆ ವಸ್ತುವಿನ ಮೇಲೆ ಬಿದ್ದಾಗ ಆ ವಸ್ತು ಏನೆಂಬುದು ಗೋಚರವಾಗಿ ಶಂಕೆ ನಿಲ್ಲುವುದು. ಹಾಗೆ ನನ್ನ ಜೀವನದಲ್ಲಿ ಈವರೆಗೆ ನಡೆದುದೆಲ್ಲ ಸುಳ್ಳು ; ಲಿಂಗದೇವನ ಸಾಧನೆಯೊಂದೇ ಇನ್ನು ದಿಟ. ಇದುವೇ ನಿತ್ಯಸತ್ಯಮಾರ್ಗವಾಗಿದೆ.

968. ಮನವೆಂಬ ಮರ್ಕಟ

ಇನ್ನೇವೆನಿನ್ನೇವೆನಯ್ಯಾ?
ಎನ್ನ ಮನವೆಂಬ ಮರ್ಕಟನ ದಾಳಿ ಘನವಾಯಿತ್ತು,

ಎನ್ನ ನಿಂದಲ್ಲಿ ನಿಲ್ಲಲೀಯದು,
ಎನ್ನ ಕುಳಿತಲ್ಲಿ ಕುಳಿರಲೀಯದು,
ಕ್ಷಣದಲ್ಲಿ ಪಾತಾಳಕ್ಕೆ ಐದುತ್ತಿದೆ.
ಕ್ಷಣದಲ್ಲಿ ಆಕಾಶಕ್ಕೆ ಐದುತ್ತಿದೆ.
ಕ್ಷಣದಲ್ಲಿ ದಿಗ್ದೆಸೆಗೆ ಐದುತ್ತಿದೆ. ಲಿಂಗದೇವಾ
ಈ ಮನವೆಂಬ ಮರ್ಕಟನ ದಾಳಿಯನೆಂದಿಗೆ ನೀಗಿ,
ಎಂದು ನಿಮ್ಮನೊಡಗೂಡುವೆನಯ್ಯಾ. –ಬವದೀ. 970

ದೇವಾ, ನಾನು ಇನ್ನೇನು ಮಾಡಲಿ ? ಮನಸ್ಸೆಂಬ ಕೋತಿಯ ದಾಳಿ ವಿಪರೀತವಾಗಿದೆ. ಅದು ನಿಂತಲ್ಲಿ ನಿಲ್ಲಲು ಬಿಡದು, ಕುಳಿತಲ್ಲಿ ಕುಳ್ಳಿರಲು ಬಿಡದು. ಒಂದು ಕ್ಷಣದಲ್ಲಿ ಪಾತಾಳಕ್ಕೆ ಹಾರುತ್ತದೆ. ಮರುಕ್ಷಣದಲ್ಲಿ ಆಕಾಶಕ್ಕೆ ಜಿಗಿಯುತ್ತದೆ, ಮತ್ತೊಂದು ಕ್ಷಣದಲ್ಲಿ ಎಂಟು ದಿಕ್ಕುಗಳಿಗೆ ಲಂಘಿಸುತ್ತದೆ. ಮನಸ್ಸೆಂಬ ಮರ್ಕಟನ ದಾಳಿಯನ್ನು ನಿವಾರಿಸಿಕೊಂಡು ಎಂದು ನಿಮ್ಮನ್ನು ಸೇರುವೆನು, ಲಿಂಗದೇವಾ ?

969. ಮನದ ಭ್ರಮೆ

ಎನ್ನ ಮನವೆಂಬ ಮರ್ಕಟನು ತನುವಿಕಾರವೆಂಬ ಅಲ್ಪಸುಖದಾಸೆಗಾಡಿ,
ವೃಥಾ ಭ್ರಮೆಗೊಂಡು, ನಾನಾ ದೆಸೆಗೆ ಲಂಘಿಸಿ
ಅಳಲಿಸಿ ಬಳಲಿಸುತ್ತಿದೆ ನೋಡಾ!
ಲಿಂಗದೇವರೆಂಬ ಕಲ್ಪವೃಕ್ಷಕ್ಕೆ ಲಂಘಿಸಿ
ಅಪರಿಮಿತದ ಸುಖವನ್ನೈದದು ನೋಡಾ. –ಬವದೀ. 971

ಮನಸ್ಸು ಎಂಬ ಕೋತಿಯಿದು, ಶರೀರದ ಸುಖ ಎಂಬ ಅಲ್ಪ ಸುಖದ ಆಸೆಯಿಂದ ಭ್ರಮೆಗೊಳಗಾಗಿ ನಾನಾ ದಿಕ್ಕುಗಳಿಗೆ ಹಾರಿ ನನ್ನನ್ನು ಪೀಡಿಸುತ್ತದೆ. ಬಳಲಿಸುತ್ತಿದೆ. ಏನು ಹೇಳಲಿ ಈ ಮನದ ದೌರ್ಬಲ್ಯವನ್ನು? ಲಿಂಗದೇವನೆಂಬ ಕಲ್ಪವೃಕ್ಷಕ್ಕೆ ಹಾರಿ ಅಪರಿಮಿತವಾದ ಅಧ್ಯಾತ್ಮಿಕ ಆನಂದವನ್ನು ಹೊಂದುತ್ತಿಲ್ಲ.

970. ದುರ್ಗುಣಗಳೇ ಅಡೆತಡೆ

ಕಾಯದ ಕಪಟವು ಬಿಡದೆನಗಿನ್ನೆಂತಯ್ಯಾ?
ಮಯಾಪ್ರಪಂಚಿನ ಬಲೆಯೊಳಗೆ ಸಿಲುಕಿದೆ,
ವಾಯದ ಸಂಭ್ರಮವಧಿಕ ಹಿಡಿದೆನಗೆ,
ಇದಾವ ಭಾವದ ಮುಖವೆಂದರಿಯದೆ
ಜ್ಞಾನಶೂನ್ಯವಾಗಿರ್ದೆನಯ್ಯಾ.
ಅಷ್ಟಮದಂಗಳನು ಸೃಷ್ಟಿಸಿಯಿದ್ದಿರಾಗಿ
ಕಟ್ಟುಗ್ರದಿಂದ ನಿಮ್ಮ ಕಾಣಲೀಯವು.
ಎನ್ನ ತನುವಿನ ಅವಗುಣ, ಮನದ ಮರ್ಕಟತನ ಬಿಡದು,
ನೀನೆ ಗತಿ ಲಿಂಗದೇವ, ನಿಮ್ಮ ಶರಣರ ಇರವನರಿಯದೆ
ಭವದುಃಖಿಯಾದೆನಯ್ಯಾ. –ಬವದೀ. 972

ಶರೀರದ ಕಪಟತನ ಬಿಡದು, ನಾನೇನು ಮಾಡಲಿ? ಹಸಿವು, ತೃಷೆ, ನಿದ್ರೆ, ವಿಷಯ, ಮೈಥುನ, ಬಯಕೆ–ಇವೆಲ್ಲವೂ ಶರೀರದ ಕೋಟಲೆಗಳು. ಇನ್ನು ಮನಸ್ಸೋ ಮಾಯಾ ಪ್ರಪಂಚದ ಬಲೆಯೊಳಗೆ ಸಿಲುಕಿದೆ. ಪ್ರಾಣದ ಆಸೆ ಹಿಡಿದುಕೊಂಡು ಬಿಟ್ಟಿದೆ. ಜ್ಞಾನ ಶೂನ್ಯನಾಗಿಬಿಟ್ಟಿದ್ದೇನೆ. ಅಷ್ಟಮದಗಳಾದ ಕುಲ, ಛಲ, ಧನ, ರೂಪ, ಯೌವನ, ವಿದ್ಯೆ, ಅಧಿಕಾರ, ತಪ – ಇವು ಬೇಗನೆ ನಿಮ್ಮನ್ನು ಕಾಣಲಿಕ್ಕೆ ಬಿಡದೆ ಅಡ್ಡಿಯಾಗಿವೆ. ಶರೀರದ ಅವಗುಣಗಳು ಮನಸ್ಸಿನ ಚಾಂಚಲ್ಯ ಬಿಡುತ್ತಲಿಲ್ಲ. ಲಿಂಗದೇವಾ, ನೀನೇ ನನಗೆ ಗತಿ ; ನಿಮ್ಮ ಶರಣರ ಇರುವಿಕೆಯನ್ನು ಅರಿಯದೆ ನಾನು ಭವದುಃಖಿಯಾಗಿರುವೆನು.

971. ದೂಷಕರ ಸ್ವಭಾವ

ಕೋಡಗವೇಡಿಸಬೇಡೆಂದಡೆ ಮಾಣದಯ್ಯಾ,
ತೋಡುವ ಹೆಗ್ಗಣ ಮಾಳಿಗೆ ಎಂದಡೆ ಮಾಣದಯ್ಯ,
ಗಾಡಿಗ ದೂಷಕನವರವರನಾಡುವುದೆ ನೇಮ.
ಲಿಂಗದೇವಾ, ಇದವರ ಕಾಯಕವಯ್ಯಾ. –ಬವದೀ. 973

ಕೋತಿಗೆ ವಸ್ತುಗಳನ್ನು ಕಿತ್ತಾಡಬೇಡ ಎಂದರೆ ಬಿಡದು. ತೋಡುವುದನ್ನು ತನ್ನ ಸಹಜಗುಣವನ್ನಾಗಿ ಹೊಂದಿರುವ ಹೆಗ್ಗಣಕ್ಕೆ ಮಾಳಿಗೆ ಬಹು ಮುಖ್ಯವಾದ ಭಾಗ, ಅದನ್ನು ತೋಡಿದರೆ ಮನೆ ಸೋರುತ್ತದೆ ತೋಡಬಾರದು ಎಂಬ ಅರಿವು ಇರುವುದೆ ? ಅದೇ ರೀತಿ ಗಾಡಿಗ ಅಂದರೆ ಮಾಟಗಾರ. ಇನ್ನೊಬ್ಬರಿಗೆ ಮಾಟ ಮಾಡಿ ಪೀಡಿಸುವವನು. ತನ್ನ ಹೊಟ್ಟೆ ಪಾಡಿಗಾಗಿ ಇತರರನ್ನು ಹಿಂಸಿಸುವವನು. ದೂಷಕನು ಇನ್ನೊಬ್ಬರ ನಿಂದೆ ಮಾಡಿ ಅವರಿಗೆ ಮಾನಸಿಕ ಹಿಂಸೆ ಕೊಡುವನು, ಅವಮಾನ, ತೇಜೋವಧೆ ಮಾಡುವನು. ಕೋತಿ ಮತ್ತು ಹೆಗ್ಗಣಗಳಿಗೆ ಹೇಗೆ ತಾವು ಮಾಡುವ ಕೆಲಸದಿಂದ ಇತರರಿಗೆ ಹಾನಿಯಾಗುತ್ತದೆ ಎಂಬ ಪ್ರಜ್ಞೆ ಇರದೋ ಅದೇ ರೀತಿ ಮಾಟಗಾರ ಮತ್ತು ನಿಂದಕರಿಗೂ ತಾವು ಮಾಡುವ ಪಾಪದ ಕೆಲಸದ ಪರಿಣಾಮವೇನು ಎಂಬ ಅರಿವಿರದು.

972. ಜೀವಾತ್ಮನ ಸಂಕಟ

ಒಂದೆತ್ತಿಗೈವರು ಗೊಲ್ಲರು,
ಅಯ್ವರಯ್ವರಿಗೆ ಐದೈದಾಗಿ ಐವರಾಳಯ್ಯಾ.
ತಮ್ಮ ತಮ್ಮಿಚ್ಛೆಗೆ ಹರಿಹರಿದಾಡಿ
ತಾವು ಕೆಟ್ಟು, ಎತ್ತನು ಕೆಡಿಸಿದರಯ್ಯಾ.
ಎತ್ತಿನ ಹೊಯ್ಲಿನ್ನಾರಿಗೆ ಹೇಳುವೆ
ಲಿಂಗದೇವಯ್ಯಾ. –ಬವದೀ. 974

ಒಂದೆತ್ತು ಎಂದರೆ ಜೀವಾತ್ಮ. ಕಾಯುವ ಐವರು ಗೊಲ್ಲರೆಂದರೆ ಪಂಚ ಜ್ಞಾನೇಂದ್ರಿಯಗಳು, ಪಂಚಭೂತಗಳು ಸಂಚೀಕರಣಗೊಂಡು ಪಂಚವಿಂಶತಿ (ಇಪ್ಪತ್ತೈದು) ತತ್ತ್ವಗಳ ಶರೀರವಾಗಿದೆ. ಜೀವಾತ್ಮವು ಈ ಶರೀರದ ಆಳಾಗುವಂತಹ ಪರಿಸ್ಥಿತಿಯುಂಟಾಗಿದೆ. ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಅಂತಃಕರಣ ಎಲ್ಲ ಮನಸ್ಸಿಗೆ ಬಂದಂತೆ ಹರಿದಾಡಿ ತಾವೂ ಕೆಟ್ಟು ಜೀವಾತ್ಮನೆಂಬ ಎತ್ತನ್ನೂ ಕೆಡಿಸಿದರು. ಈ ಜೀವಾತ್ಮನೆಂಬ ಎತ್ತಿನ ಸಂಕಟವನ್ನು ಯಾರಿಗೆ ಹೇಳುವುದು ? (ಪಂಚಭೂತಗಳು ಹೇಗೆ ಒಂದಕ್ಕೊಂದು ಬೆರೆತು ಇಪ್ಪತ್ತೈದು ತತ್ತ್ವಗಳಾಗುತ್ತವೆ ಎಂಬುದನ್ನು ಇಲ್ಲಿ ಕೊಡಲಾಗಿದೆ.)

ಪಂಚವಿಂಶತಿ ತತ್ತ್ವಗಳು

	ಪಂಚ ಭೂತಗಳು	ಪೃಥ್ವಿ	ಅಪ್	ತೇಜ	ವಾಯು	ಆಕಾಶ	
೧.	ಪೃಥ್ವಿ	ಗುದ	ಗುಹ್ಯ	ಪಾದ	ಕೈ	ಬಾಯಿ	ಪಂಚ ಕರ್ಮೇಂದ್ರಿಯ
೨	ಅಪ್	ಗಂಧ	ರಸ	ರೂಪ	ಸ್ಪರ್ಶ	ಶಬ್ದ	ಪಂಚ ತನ್ಮಾತ್ರೆ
೩.	ತೇಜ	ನಾಸಿಕ	ನಾಲಿಗೆ	ನಯನ	ಚರ್ಮ	ಕಿವಿ	ಪಂಚ ಜ್ಞಾನೇಂದ್ರಿಯ
೪	ವಾಯು	ಪ್ರಾಣ	ಅಪಾನ	ವ್ಯಾನ	ಉದಾನ	ಸಮಾನ	ಪಂಚ ಪ್ರಾಣಗಳು
೫	ಆಕಾಶ	ಚಿತ್ತ	ಮನ	ಬುದ್ಧಿ	ಅಹಂಕಾರ	ಭಾವ	ಅಂತಃಕರಣ

ಡಾ॥ ಚಿ.ಮೂ.ರವರ ಪತ್ರಿಕಾ ಗೋಷ್ಠಿಗೆ ಪ್ರತಿಕ್ರಿಯೆ

ಪತ್ರಿಕಾ ಮತ್ತು ಟಿ.ವಿ ಮಾಧ್ಯಮದಲ್ಲಿ ವರದಿಯಾದಂತೆ (07.07.2012) ಡಾ. ಚಿದಾನಂದ ಮೂರ್ತಿಯವರ ಪತ್ರಿಕಾ ಗೋಷ್ಠಿಯ ವಿವರಗಳು ಪ್ರಕಟವಾಗಿವೆ. ವರದಿಯಾದಂತೆ ಡಾ. ಚಿಮೂ ಮುಖ್ಯವಾದ ಎರಡು ವಿಚಾರಗಳನ್ನು, ಇನ್ನಿತರ ವಿಷಯಗಳನ್ನೂ ಪ್ರಸ್ತಾಪಿಸಿದ್ದಾರೆ.

ಗುರು ಬಸವಣ್ಣನವರು ' ವೀರಶೈವ 'ಮತ ಸ್ಥಾಪಕರಲ್ಲ ಮತ್ತು ಅವರ ಜನ್ಮ ವರ್ಷ ಇಲ್ಲಿಯವರೆವಿಗೂ ತಿಳಿದು ಬಂದಿಲ್ಲ ಎಂದು ಡಾ.ಚಿಮೂರವರು, ವೀರಶೈವ ಮಠೀಯ ಸ್ವಾಮಿಗಳ ಸಮ್ಮುಖದಲ್ಲಿ ಹೇಳಿಕೆ ನೀಡಿದ್ದಾರೆ.

ನಿಜ, ಅವರು ಹೇಳುವಂತೆ ಗುರು ಬಸವಣ್ಣನವರು ವೀರಶೈವ ಮತವನ್ನು ಸ್ಥಾಪಿಸಿಲ್ಲ. ಈ ಮಾತನ್ನು ಅವರು ಹಿಂದಿನಿಂದಲೂ ಹೇಳುತ್ತಾ ಬಂದಿದ್ದಾರೆ. ಅದಕ್ಕಾಗಿ ಅವರು ಅಭಿನಂದನಾರ್ಹರು. ವೀರಶೈವ, ಹಿಂದೂ ಧರ್ಮದ ಅಂಗವಾಗಿ ಪೂರ್ವದಿಂದಲೂ ಇದೆ. ವೈದಿಕ ಪರಂಪರೆಯಲ್ಲಿ ಮೂರ್ತಗೊಂಡು, ಅದು ಆಂಧ್ರ, ತಮಿಳುನಾಡು ಮತ್ತು ಕೇರಳಗಳಲ್ಲಿ ಈಗ ಕಾಣಬರುತ್ತಿದೆ. ಆ ವೀರಶೈವರು ಬಹುತೇಕ ಮಾಂಸಾಹಾರಿಗಳಾಗಿದ್ದು, ಅವರ ಗುರುಗಳು ಬೇರೆಯೇ ಇದ್ದಾರೆ.

ಆದರೆ, ಗುರು ಬಸವಣ್ಣನವರು ಪ್ರತಿಪಾದಿಸಿ, ಸಂಸ್ಥಾಪಿಸಿದ್ದು "ವಚನಾಧಾರಿತ ಲಿಂಗಾಯತ ಧರ್ಮ"ವನ್ನು . "ವೇದಕ್ಕೆ ಒರೆಯನಿಕ್ಕುವೆ" ಎನ್ನುವ ಗುರು ಬಸವಣ್ಣನವರ ವಾಣಿಯಂತೆ, ಇದು "ಅನುಭಾವ ಸಿದ್ಧಾಂತ"ದ ಮೇಲೆ ರೂಪುಗೊಂಡು, ಸಸ್ಯಾಹಾರಿ ಪದ್ಧತಿಯನ್ನು ಪ್ರತಿಪಾದಿಸಿದ ಧರ್ಮ. ಲಿಂಗಾಯತವು ಹೊಸ ನಡೆ, ನುಡಿಯ ಸಂಪೂರ್ಣ ಸ್ವತಂತ್ರ ಧರ್ಮ. ಹೇಗೆ, ಜೈನ ಧರ್ಮೀಯರು ಸಸ್ಯಾಹಾರಿ ಪದ್ಧತಿಯಿಂದಾಗಿ ತಮ್ಮದು ಸ್ವತಂತ್ರ ಧರ್ಮವೆಂದು ಹೆಮ್ಮೆಯಿಂದ ಹೇಳುವರೊ ಹಾಗೆ.

ಡಾ.ಚಿಮೂ ರವರು ಹೇಗೆ ಸಂಶೋಧಕರೆಂದು ಗುರುತಿಸಲಾಗಿದೆಯೋ ಹಾಗೆ, ಮೈಸೂರು ವಿಶ್ವವಿದ್ಯಾಲಯದ ದಿವಂಗತ ಡಾ. ಬಾಡಾಲ ರಾಮಯ್ಯನವರು ಸಂಶೋಧಿಸಿ ತಿಳಿಸಿದ ನಂತರ, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು 1995ರಲ್ಲೆ "ಧರ್ಮಪಿತ ಬಸವಣ್ಣನವರ ಕಾಲನಿರ್ಣಯ" ಎಂಬ ಪುಸ್ತಕವನ್ನು ಪ್ರಕಟಿಸಿ, ಅವರ ಕಾಲಮಾನ "1134–1196"ಎಂದು ನಿಗಧಿಪಡಿಸಿದ್ದಾರೆ. ಅದನ್ನು ಅನೇಕ ಸಂಘ ಸಂಸ್ಥೆಗಳು ಆಧಾರವಾಗಿಟ್ಟುಕೊಂಡು ಆಚರಣೆಯಲ್ಲಿ ತಂದಿದ್ದಾರೆ. ಅವರ ಕಾಲಮಾನ 1131–1167 ಎನ್ನುವ ವಾದ ಸರಿಯಲ್ಲ, ಗುರು ಬಸವಣ್ಣನವರ "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ ಮೂವತ್ತಾರು ವರುಷ" ಎನ್ನುವ ವಚನದಿಂದ – ಅವರು 36 ವರ್ಷ ಕಲ್ಯಾಣದಲ್ಲಿ ವಾಸವಾಗಿದ್ದಾರೆ. ಭಕ್ತಿಗೆ ಕಲ್ಯಾಣ ತೌರೂರಾಗಿತ್ತು ಎನ್ನುತ್ತಾರೆ. ಅದಕ್ಕೂ ಮುಂಚೆ, ಅವರಿಗೆ 21 ವರ್ಷಕ್ಕೆ ಜ್ಞಾನೋದಯವಾಗಿ, ದೇವ ಕುರುಹಾದ 'ಇಷ್ಟಲಿಂಗ'ವನ್ನು ಕಂಡುಹಿಡಿದು, ಸುಮಾರು ಐದು ವರ್ಷ ಮಂಗಳವೇಡೆಯಲ್ಲಿ ಉಳಿದು, ನಂತರ ಕಲ್ಯಾಣಕ್ಕೆ ಆಗಮಿಸುವರು. ಹೀಗೆ, ಅವರು 62 ವರ್ಷ 3 ತಿಂಗಳು 2 ದಿನಗಳ ಕಾಲ ಜೀವಿಸಿ, ಜೀವನವನ್ನು ದೈವೀಮಯವಾಗಿಸಿ, "ಶ್ರಾವಣ ಶುದ್ಧ ಪಂಚಮಿ"ಯಂದು ಲಿಂಗೈಕ್ಯರಾದರು. ನಾವು ಆ ದಿನವನ್ನು "ಬಸವ ಪಂಚಮಿ" ಎಂದು ಆಚರಿಸುತ್ತೇವೆ. ಈ ವಿಚಾರವನ್ನು ವೀರವಿರಾಗಿಣಿ ಅಕ್ಕಮಹಾದೇವಿಯವರು " ದೀಪ ಸಂದ ಪಂಚಮಿ" ಎಂದು ಉಲ್ಲೇಖಿಸುತ್ತಾರೆ.

ಸಂಶೋಧಕರಾದ ಡಾ. ಚಿಮೂರವರಿಗೆ ಬಸವಣ್ಣನವರ ಜೀವಿತದ ಬಗ್ಗೆ ಬರೆದ "ಕಾಲ ನಿರ್ಣಯ" ಎಂಬ ಪುಸ್ತಕ ಗಮನಕ್ಕೆ ಬಾರದಿದ್ದುದು ಆಶ್ಚರ್ಯ. ಈ ದಿಶೆಯಲ್ಲಿ ಅದನ್ನು ಈಗಲಾದರೂ ನೋಡಿ ತಿಳಿದುಕೊಳ್ಳಬಹುದು ಎಂದು ವಿನಂತಿಸುತ್ತೇನೆ. ಯಾವುದೇ ಸಮಾಜ ತನ್ನ ಧರ್ಮಗುರುವಿನ ಕಾಲಮಾನವನ್ನು ಗುರುತಿಸಿದಾಗಲೇ ಅದು ಜಾಗೃತ (ಎಚ್ಚೆತ್ತ) ಸಮಾಜ ಅಥವಾ ಜೀವಂತ ಸಮಾಜ ಎಂದು ಕರೆಯಬಹುದು.

(ಕೆ. ಬಸವರಾಜ್, ಬೆಳಗಾವಿ)
ಕಾರ್ಯಾಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ (ಕರ್ನಾಟಕ)


ಹಚ್ಚೇವು ಗುರು ಬಸವ ದೀಪ

ಹಚ್ಚೇವು ಗುರುಬಸವ ದೀಪ
ವಿಶ್ವದ ದೀಪ, ಕಲ್ಯಾಣ ದೀಪ, ಶಾಂತಿಯ ಸಾರುವ ದೀಪ
ಅಂಧಕಾರಗಳಿಂದ ಮೈ ಮರವೆಯಿಂದ
ಕೂಡಿರುವ ಕೊಳೆಯ ಕೊಚ್ಚೇವು
ಎಲ್ಲೆಲ್ಲೂ ವಚನದ ಕಂಪುಸೂಸಿ
ಎಲ್ಲೆಲ್ಲೂ ಸಂದೇಶ ಸಾರೇವು
ಬಡವನೇ ಇರಲಿ, ಬಲ್ಲಿದನೆ ಬರಲಿ
ಬಸವ ಧರ್ಮವ ಬೆಳೆಸೇವು
ಇವನಾರು ಇವನಾರು ಎನ್ನದೆಯೇ ಬಸವನ ಮನದಲ್ಲಿ ಇಂಬುಗೊಂಡೇವು
ನರನರವನೆಲ್ಲ ಹುರಿಗೊಳಿಸಿ ಹೊಸೆದು ಹಚ್ಚೇವು ಗುರುಬಸವ ದೀಪ
ದೇವನೊಬ್ಬನೆ ತಂದೆ ಮನುಜರೆಲ್ಲರೂ ಒಂದೆ
ಎನ್ನುವ ಸತ್ಯ ಸಾರೇವು
ಹಚ್ಚಿರುವ ದೀಪದಲ್ಲಿ ಒಡೆಯನ ರೂಪ
ಅಚ್ಚಳಿಯದಂತೆ ತೋರೇವು
ಪ್ರೀತಿ-ನೀತಿಗಳೆರಡು ಅವನ ಕಾಣ್ಕೆ
ಕಂಗಳೆಂದು ನಾವು ನಂಬೇವು
ಹೊಮ್ಮಿರಲು ಪ್ರೀತಿ ಎಲ್ಲಿಹುದು ಭೀತಿ ದೇವನೊಲುಮೆಯ ನೀತಿ ಹಿಡಿನೆನಪ
ಮನೆ-ಮನೆಗಳಲ್ಲಿ ಮನ ಮನಗಳಲ್ಲಿ ಹಚ್ಚೇವು ಗುರುಬಸವ ದೀಪ
ಬಸವಾದಿ ಪ್ರಮಥರ ಆ ನುಡಿಗಳ
ಉಸಿರಿರುವವರೆಗೂ ನೆನೆದೇವು
ಕಣಕಣದ ರಕ್ತವು ಇರುವವರೆಗೂ
ಧರ್ಮಕ್ಕೆ ಮುಡಿಪು ಆಗೇವು
ಕಲ್ಯಾಣ ಕ್ರಾಂತಿಯ ಆ ಶರಣರ
ಸಂಕಲ್ಪ ಹಿಡಿದು ಸಾಗೇವು
ಇಹುದೆಮಗೆ ಛಲವು, ಶರಣರ ಬಲವು, ವಚನ ಶಾಸ್ತ್ರ ದ ಸನ್ಮಾರ್ಗವು
ನಮ್ಮೆದೆಯ ಕೆಚ್ಚು-ನೆಚ್ಚುಗಳನೂಡಿ ಹಚ್ಚೇವು ಗುರುಬಸವ ದೀಪ
ಶರಣರು ಗಳಿಸಿದ ಹೆಸರುಳಿಸಲು
ಎಲ್ಲಾರು ಒಂದು ಗೂಡೇವು
ಶರಣರ ಮೇಳದ ಬೆಳ್ಳಿಹಬ್ಬವನ್ನು
ಎಲ್ಲೆಲ್ಲೂ ಹಂಚಿ ಕುಣಿದೇವು
ಅಪ್ಪಾಜಿ ಮಾತಾಜಿ ನುಡಿಗಳನ್ನು
ದಿಕ್ಕು-ದಿಕ್ಕಿಗೂ ಸಾರಿ ನಲಿದೇವು
ತೊರೆದೇವು ಜಾತಿಯ, ಹಿಡಿದೇವು ಧರ್ಮವ, ಕಟ್ಟೇವು ಕಲ್ಯಾಣ ರಾಜ್ಯವ
ಶರಣರೆಲ್ಲರು ನಾವು ಶರಣಾಗಿ ಬಸವಗೆ ಹಚ್ಚೇವು ಗುರುಬಸವ ದೀಪ

ರಚನೆ : ಶರಣೆ. ಸೌಮ್ಯ ಬ ಕಂಬಾರಗಣವಿ



ದಿ. 1-7-2012ರಂದು ಪರಮಪೂಜ್ಯ ಲಿಂಗೈಕ್ಯ ಮಹಾಜಗದ್ಗುರು [illegible]
18ನೆಯ ಸಂಸ್ಮರಣೆಯನ್ನು ಧಾರವಾಡ ರಾಷ್ಟ್ರೀಯ ಬಸವ ದಳದಿಂದ [illegible]



ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶರಣ. ಎಸ್.ಜಿ. ಪಾಟೀಲರಿಗೆ ರಾಷ್ಟ್ರೀಯ ಬಸವ ದಳದ
ಅಧ್ಯಕ್ಷರಾದ ಸಿದ್ಧಣ್ಣ ನಟೀಗಲ್ ಅವರಿಂದ ಮಾಲಾರ್ಪಣೆ



ಪೂಜ್ಯಶ್ರೀ ಲಿಂಗಾನಂದ ಸ್ವಾಮಿಗಳ ಲಿಂಗೈಕ್ಯ ಸಂಸ್ಮರಣೆ ಅಂಗವಾಗಿ ಶರಣೆ. ಸಾವಿತ್ರಿ
ಜಕರೆಡ್ಡಿಯವರಿಂದ ಅನಾಥಾಲಯದ ಮಕ್ಕಳಿಗೆ ಸುಮಾರು 70 ಕಂಪಾಸ್ ಪೆಟ್ಟಿಗೆ ವಿತರಣೆ

CPMG/KA/BGW/50/2012-2014, RNI No.19980/70/ POSTED AT MBC BANGALORE GPO ON ON 3rd,10th ,20TH OF EVERY MONTH. LICENCED TO POST WITH OUT PREPAYMENT, WPP-17, PAGES 32+4(COVERPAGES)



ಕರ್ನಾಟಕದ ನೂತನ ಮುಖ್ಯಮಂತ್ರಿಗಳಾದ ಶರಣ. ಜಗದೀಶ್ ಶೆಟ್ಟರ್ ಅವರಿಗೆ ಬಸವ ಧರ್ಮ ಪೀಠ ಹಾಗೂ ರಾಷ್ಟ್ರೀಯ ಬಸವ ದಳದಿಂದ ಅಭಿನಂದನೆ



ಕರ್ನಾಟಕದ ನೂತನ ಉಪ ಮುಖ್ಯಮಂತ್ರಿಗಳಾದ ಶರಣ. ಕೆ.ಎಸ್. ಈಶ್ವರಪ್ಪ ಅವರಿಗೆ ಬಸವ ಧರ್ಮ ಪೀಠ ಹಾಗೂ ರಾಷ್ಟ್ರೀಯ ಬಸವ ದಳದಿಂದ ಅಭಿನಂದನೆ